ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 26 ಮಂಗಳವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 40 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜ್ಯ ಕಾಂಗ್ರೆಸ್ ಗೊಂದಲಕ್ಕೆ

ಇಂದು ಪರಿಹಾರ

■ ಇಂದು ಬೆಳಗ್ಗೆ 11 ಗಂಟೆಗೆ ನವದೆಹಲಿ ಎಐಸಿಸಿ ಇಂದಿರಾ ಭವನದಲ್ಲಿ ಮಹತ್ವದ ಸಭೆ ■ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿಗಳಾದ ವೇಣುಗೋಪಾಲ್, ಸುರ್ಜೇವಾಲ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಭಾಗಿ ■ ನಾಯಕತ್ವದ ವಿಚಾರವೂ ಸೇರಿ ಹಲವು ಮಹತ್ವ ವಿಚಾರ ನಿಷ್ಕರ್ಷ



ಬೆಂಗಳೂರು, ಮೇ 25, (ಕೆಎಂಶಿ)– ಕರ್ನಾಟಕ ಕಾಂಗ್ರೆಸ್‌ನ ಅಧಿಕಾರ ಹಸ್ತಾಂತರ ಗೊಂದಲಕ್ಕೆ ಕಾಂಗ್ರೆಸ್ ವರಿಷ್ಠರು ಅಂತೂ ಮಂಗಳವಾರ ತೆರೆ ಎಳೆಯಲಿದ್ದಾರೆ.

ಎಐಸಿಸಿ ಸಂಘಟನಾ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಪ್ರತ್ಯೇಕವಾಗಿ ಸಂಪರ್ಕಿಸಿ, ದೆಹಲಿಗೆ ಬರುವಂತೆ ಸೂಚಿಸಿದ್ದಾರೆ. ವರಿಷ್ಠರ ಆದೇಶದ ಮೇರೆಗೆ ಉಭಯ ನಾಯಕರು ಇಂದು (ಸೋಮವಾರ) ರಾತ್ರಿ ಪ್ರತ್ಯೇಕವಾಗಿ ದೆಹಲಿಗೆ ತೆರಳಿದ್ದು, ನಾಳೆ ಬೆಳಗ್ಗೆ 11 ಗಂಟೆಗೆ ಎಐಸಿಸಿ ಇಂದಿರಾಭವನದಲ್ಲಿ ಕರ್ನಾಟಕ ಕಾಂಗ್ರೆಸ್ ಗೊಂದಲದ ನಿವಾರಣೆಗೆ ಮಹತ್ವದ ಸಭೆ ನಡೆಯಲಿದೆ.

ಸಭೆಯಲ್ಲಿ ನಾಯಕತ್ವ ವಿಚಾರವಷ್ಟೇ ಅಲ್ಲದೆ, ಸಂಪುಟ ಪುನಾರಚನೆ, ರಾಜ್ಯ ವಿಧಾನಸಭೆಯಿಂದ ರಾಜ್ಯಸಭೆ ಹಾಗೂ ವಿಧಾನಪರಿಷತ್ತಿಗೆ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ಮಹತ್ವದ ಚರ್ಚೆ ನಡೆಯಲಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕರೆದಿರುವ ಸಭೆಯಲ್ಲಿ ಪಕ್ಷದ ಅಧಿನಾಯಕ ರಾಹುಲ್‌ಗಾಂಧಿ, ಎಐಸಿಸಿ ಕಾರ್ಯದರ್ಶಿಗಳಾದ ವೇಣುಗೋಪಾಲ್, ಸುರ್ಜೆವಾಲ, ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಭಾಗವಹಿಸಲಿದ್ದಾರೆ.

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಆಡಳಿತಕ್ಕೆ ಎರಡೂವರೆ ವರ್ಷಗಳು ತುಂಬುತ್ತಿದ್ದಂತೆ ಕಳೆದ ಆರೇಳು ತಿಂಗಳಿನಿಂದಲೂ ಅಧಿಕಾರ ಹಸ್ತಾಂತರ ವಿಚಾರ ಹಾದಿ–ಬೀದಿಯಲ್ಲಿ ಚರ್ಚೆಗೆ ಗ್ರಾಸವಾಗಿ ಕಾಂಗ್ರೆಸ್ ನಾಯಕರನ್ನು ಇಕ್ಕಟ್ಟಿಗೆ ಸಿಲುಕಿಸಿತ್ತು.

ಪಂಚರಾಜ್ಯಗಳ ವಿಧಾನಸಭೆ ಚುನಾವಣೆ ಪೂರ್ಣಗೊಂಡು, ರಾಜ್ಯಸಭಾ ಚುನಾವಣೆ ಎದುರಾಗಿರುವ ಬೆನ್ನಲ್ಲೇ, ರಾಹುಲ್‌ಗಾಂಧಿ ಕರ್ನಾಟಕಕ್ಕೆ ಹೊಸ ಸೂತ್ರ ನೀಡಿ, ನಾಯಕತ್ವದ ವಿಚಾರ ಬಗೆಹರಿಸಲು ಹೊರಟಿದ್ದಾರೆ.

ರಾಜ್ಯ ವಿಧಾನ ಸಭೆಯಿಂದ ರಾಜ್ಯ ಸಭೆಗೆ ನಡೆಯುತ್ತಿರುವ ದ್ವೈವಾರ್ಷಿಕ ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರಿಗೆ ಅವಕಾಶ ಮಾಡಿಕೊಟ್ಟು, ಮುಖ್ಯಮಂತ್ರಿ ಸ್ಥಾನದಿಂದ ಗೌರವವಾಗಿ ಇಳಿಸಿ, ರಾಷ್ಟ್ರ ರಾಜಕಾರಣಕ್ಕೆ ಬಳಸಿಕೊಳ್ಳಲು ರಾಹುಲ್ ಗಾಂಧಿ ಮುಂದಾಗಿದ್ದಾರೆ ಎನ್ನಲಾಗಿದೆ.

ರಾಷ್ಟ್ರೀಯ ಮಟ್ಟದಲ್ಲಿ ಹಿಂದುಳಿದ ವರ್ಗಗಳನ್ನು ಒಂದು ಮಾಡುವ ಉದ್ದೇಶದಿಂದ ಸಿದ್ದರಾಮಯ್ಯ ಅವರನ್ನೇ ಮುಂಚೂಣಿಗೆ ತರಲು ರಾಹುಲ್ ಚಿಂತನೆ ನಡೆಸಿದ್ದಾರೆ. ರಾಜ್ಯಸಭಾ ಚುನಾವಣೆಯನ್ನೇ ಅಸ್ತ್ರವಾಗಿ ಮಾಡಿಕೊಂಡು ಕರ್ನಾಟಕ ಕಾಂಗ್ರೆಸ್ ಗೊಂದಲವನ್ನು ಬಗೆಹರಿಸಿ, ಶಿವಕುಮಾರ್‌ಗೆ ಪಟ್ಟಕಟ್ಟುವ ಉದ್ದೇಶವು ಇದಾಗಿದೆ. ಮುಖ್ಯಮಂತ್ರಿಯವರಿಗೂ ರಾಹುಲ್ ಅವರ ಚಿಂತನೆ ಅರಿವಿಗೆ ಬಂದಿದೆ. ಅವರು ಈ ಸಂಬಂಧ ಆಪ್ತ ಸಚಿವರೊಟ್ಟಿಗೆ ಈಗಾಗಲೇ ಚರ್ಚೆ ಮಾಡಿದ್ದಾರೆ.

ಈ ವಿಷಯ ಪ್ರಸ್ತಾಪಗೊಂಡರೆ, ತಾವು ರಾಜ್ಯ ರಾಜಕಾರಣದಲ್ಲೇ ಮುಂದುವರೆಯುತ್ತೇನೆ. ತಮಗೆ ಮಂತ್ರಿಮಂಡಲ ಪುನಾರಚನೆಗೆ ಅವಕಾಶ ಮಾಡಿಕೊಡಿ ಎಂದು ರಾಹುಲ್ ಅವರಿಗೆ ಚರ್ಚೆ ಸಂದರ್ಭದಲ್ಲೇ ಮನವಿ ಮಾಡಿಕೊಳ್ಳಲಿದ್ದಾರೆ.

ಒಂದು ವೇಳೆ ರಾಹುಲ್ ತಮ್ಮ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ, ರಾಜ್ಯಸಭಾ ಸ್ಥಾನ ಸ್ವೀಕರಿಸಲು ಸಮ್ಮತಿಸಿ, ತಮ್ಮಿಂದ ತೆರವಾಗುವ ಸ್ಥಾನಕ್ಕೆ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರನ್ನು ಆಯ್ಕೆ ಮಾಡಿ ಎಂದು ಕೋರಲಿದ್ದಾರಂತೆ. ರಾಜ್ಯ ನಾಯಕತ್ವ ಸಂಬಂಧ ರಾಹುಲ್ ತೆಗೆದುಕೊಳ್ಳುವ ನಿರ್ಧಾರಕ್ಕೆ ■ 6ನೇ ಪುಟಕ್ಕೆ

2028ಕ್ಕೆ ಇದೇ ಡಿಕೆಶಿ... ಇದೇ ಸರ್ಕಾರ...!

ಬೆಂಗಳೂರು: ಅಧಿಕಾರ ಹಂಚಿಕೆ ಗೊಂದಲದ ನಡುವೆಯೇ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಸೋಮವಾರ ಪ್ರತಿಪಕ್ಷಗಳಿಗೆ ಹೊಸ ಸಂದೇಶ ನೀಡಿದ್ದಾರೆ.

ಇಂದು ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಡಿಸಿಎಂ ಡಿ.ಕೆ. ಶಿವಕುಮಾರ್, ಇಂದೇ ಪೇಪರ್‌ನಲ್ಲಿ ಬರೆದಿಟ್ಟುಕೊಳ್ಳಿ, ಮುಂದೇನು ನಮ್ದೇ ಸರ್ಕಾರ. ಇದೇ ಡಿಕೆ ಶಿವಕುಮಾರ್, ಇದೇ ಕಾಂಗ್ರೆಸ್ ಸರ್ಕಾರ ಇರುತ್ತದೆ ಎಂದು ಹೇಳಿದರು. ಪೇಪರ್‌ನಲ್ಲಿ ಬರೆದಿಟ್ಕೊಳಿ, ಈ ಹಿಂದೆ ನಾನು 136 ಸ್ಥಾನ ಬರುತ್ತದೆ ಅಂತ ಹೇಳಿದ್ದೆ, ಈಗಲೂ ಬರೆದಿಟ್ಟುಕೊಳ್ಳಿ, 2028ಕ್ಕೆ ಇದೇ ಡಿಕೆ ಶಿವಕುಮಾರ್, ಇದೇ ಕಾಂಗ್ರೆಸ್ ಸರ್ಕಾರ ಇರುತ್ತದೆ. 2028ರ ಮುಂಬರುವ ಚುನಾವಣೆಯಲ್ಲೂ ಕಾಂಗ್ರೆಸ್ ಸರ್ಕಾರವೇ ಅಧಿಕಾರಕ್ಕೆ ಬರಲಿದೆ ಎಂದು ಡಿಕೆ ಶಿವ ಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು. 2023ರಲ್ಲಿ ಬಿಜೆಪಿ ನಾಯಕ, ಕೇಂದ್ರ ■ 6ನೇ ಪುಟಕ್ಕೆ

ರೈತರ ಸಾಲ ಮನ್ನಾ ಘೋಷಿಸಿದ ತಮಿಳ್ನಾಡು ಮುಖ್ಯಮಂತ್ರಿ ವಿಜಯ್



ಚೆನ್ನೈ: ತಮಿಳುನಾಡಿನ ಸಣ್ಣ ಮತ್ತು ಅತಿ ಸಣ್ಣ ರೈತರು ಸಹಕಾರಿ ಬ್ಯಾಂಕ್‌ಗಳಿಂದ ಪಡೆದಿದ್ದ 50,000ವರೆಗಿನ ಬೆಳೆ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡುವುದಾಗಿ ತಮಿಳುನಾಡು ಸರ್ಕಾರ ಸೋಮವಾರ ಘೋಷಿಸಿದೆ. ಈ ಮೂಲಕ ವಿಧಾನಸಭಾ ಚುನಾವಣೆ ವೇಳೆ ಟಿವಿಕೆ ಪಕ್ಷ ನೀಡಿದ್ದ ಪ್ರಮುಖ ಭರವಸೆಗಳಲ್ಲೊಂದನ್ನು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಈಡೇರಿಸಿದ್ದಾರೆ.

ಜತೆಗೆ ಇತರೆ ರೈತರಿಗೆ ತಲಾ 5,000ರೂ. ವರೆಗಿನ ಸಾಲ ಮನ್ನಾ ಸೌಲಭ್ಯವನ್ನು ಪ್ರಕಟಿಸಲಾಗಿದೆ. ಸರ್ಕಾರದ ಈ ಮಹತ್ವದ ನಿರ್ಧಾರದಿಂದಾಗಿ ರಾಜ್ಯದ ಸುಮಾರು 14.22 ಲಕ್ಷ ರೈತರಿಗೆ ನೇರ ಅನುಕೂಲವಾಗಲಿದೆ ಇದರಿಂದ ಸರ್ಕಾರದ ಬೊಕ್ಕಸಕ್ಕೆ 2,044 ಕೋಟಿ ಹೆಚ್ಚುವರಿ ಹೊರೆ ಬೀಳಲಿದೆ ಎನ್ನಲಾಗಿದೆ.

ಚುನಾವಣಾ ಭರವಸೆ ಈಡೇರಿಕೆ: ತಮಿಳುನಾಡು ವಿಧಾನಸಭಾ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥರಾಗಿದ್ದ ವಿಜಯ್ ಅವರು ರೈತರ ಬೆಳೆ ಸಾಲ ಮನ್ನಾ ಮಾಡುವ ಭರವಸೆ ನೀಡಿದ್ದರು. ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಈ ಭರವಸೆಯನ್ನು ಈಡೇರಿಸುವ ಮೂಲಕ ರೈತರ ಮೊಗದಲ್ಲಿ ಮಂದಹಾಸ ಮೂಡಿಸಿದ್ದಾರೆ.

ಎರಡೇ ವಾರದಲ್ಲಿ ನಾಲ್ಕನೇ ಬಾರಿಗೆ ದರ ಏರಿಕೆ
ಪೆಟ್ರೋಲ್ 2.61, ಡೀಸೆಲ್ 2.71 ರೂ.



ನವದೆಹಲಿ: ಕೇಂದ್ರ ಸರ್ಕಾರ ಬೆಳ್ಳಂಬೆಳಗ್ಗೆ ದೇಶದ ಗ್ರಾಹಕರಿಗೆ ತೈಲ ಶಾಕ್ ಕೊಟ್ಟಿದೆ. ಸೋಮವಾರ (ಮೇ 25) ಪೆಟ್ರೋಲ್ ಬೆಲೆ ಪ್ರತಿ ಲೀಟರ್‌ಗೆ 2.61 ರೂ. ಮತ್ತು ಡೀಸೆಲ್ ಬೆಲೆ ಪ್ರತಿ ಲೀಟರ್‌ಗೆ 2.71 ರೂ. ಏರಿಕೆ ಮಾಡಿದೆ. ಇದು ಕಳೆದ 11 ದಿನಗಳಲ್ಲಿ 4ನೇ ಬಾರಿಗೆ ಮಾಡಿದ ದರ ಏರಿಕೆಯಾಗಿದೆ.

ಬೆಂಗಳೂರು ನಗರದಲ್ಲಿ ಪೆಟ್ರೋಲ್ ಬೆಲೆ ಈಗ ಲೀಟರ್‌ಗೆ 110.89 ರೂ. ಹಾಗೂ ಡೀಸೆಲ್ ಬೆಲೆ ಲೀಟರ್‌ಗೆ 98.80 ರೂ.ಗೆ ತಲುಪಿದೆ. ಮಧ್ಯಪ್ರಾಚ್ಯ ಸಂಘರ್ಷದಿಂದಾಗಿ ಜಾಗತಿಕ ಮಟ್ಟದಲ್ಲಿ ತೈಲ ಬೆಲೆ ಏರಿಕೆಯಾಗಿದೆ. ಈ ಹಿನ್ನೆಲೆ ಮೇ 15ರಿಂದ ಈಚೆಗೆ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ದರವನ್ನು ಹೆಚ್ಚಿಸಿವೆ.

ಮೇ 15 ರಂದು ಮೊದಲ ಬಾರಿಗೆ ಏಕಾಏಕಿ ಪೆಟ್ರೋಲ್, ಡೀಸೆಲ್ ಮೇಲಿನ ಬೆಲೆಯನ್ನು 3 ರೂ. ಹೆಚ್ಚಳ ಮಾಡಿತ್ತು. ಮೇ 19ಕ್ಕೆ 90 ಪೈಸೆ, ಬಳಿಕ ಮೇ 23 ರಂದು ಪೆಟ್ರೋಲ್ ದರವನ್ನು 87 ಪೈಸೆ ಮತ್ತು ಡೀಸೆಲ್ 91 ಪೈಸೆ ಏರಿಕೆ ಮಾಡಲಾಗಿತ್ತು. ಇದೀಗ ಮತ್ತೆ ಪೆಟ್ರೋಲ್ ಮೇಲಿನ ಬೆಲೆ 2.61 ರೂ. ಮತ್ತು ಡೀಸೆಲ್ ಮೇಲಿನ ಬೆಲೆ 2.71 ರೂ. ಏರಿಸಿದ್ದು, ವಾಹನ ಸವಾರರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

ರಾಜ್ಯದೆಲ್ಲೆಡೆ ಈಗ ಅತ್ಯಾಧುನಿಕ
ಆಂಬುಲೆನ್ಸ್ ಸೇವೆ

108 ಆರೋಗ್ಯ ಕವಚ ಕೇಂದ್ರೀಕೃತ ಕಮಾಂಡ್ ಅಂಡ್ ಕಂಟ್ರೋಲ್ ಕೇಂದ್ರ ಉದ್ಘಾಟನೆ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ



108 ಆರೋಗ್ಯ ಕವಚ ಕೇಂದ್ರೀಕೃತ ಕಮಾಂಡ್ ಮತ್ತು ಕಂಟ್ರೋಲ್ ಕೇಂದ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಉದ್ಘಾಟಿಸಿದರು.

ಬೆಂಗಳೂರು, ಮೇ 25(ಕೆಎಂಶಿ)–ಇಂದಿನಿಂದ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಆಂಬುಲೆನ್ಸ್ ಸೇವೆ ಲಭ್ಯವಾಗಲಿದ್ದು, ಈ ಸೇವೆ ಪರಿಣಾಮಕಾರಿಯಾಗಿ ಜನರಿಗೆ ತಲುಪಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಅವರು ಇಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ '108 ಆರೋಗ್ಯ ಕವಚ ಕೇಂದ್ರೀಕೃತ ಕಮಾಂಡ್ ಮತ್ತು ಕಂಟ್ರೋಲ್ ಕೇಂದ್ರ' ಉದ್ಘಾಟಿಸಿ ಮಾತನಾಡಿದರು.

ಇಡೀ ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ಕರ್ನಾಟಕದಲ್ಲಿ 108 ಆರೋಗ್ಯ ಕವಚ ಕೇಂದ್ರೀಕೃತ ಕಮಾಂಡ್ ಮತ್ತು ಕಂಟ್ರೋಲ್ ಕೇಂದ್ರದ ಆರೋಗ್ಯ ಸೇವೆಯನ್ನು ಪ್ರಾರಂಭಿಸಲಾಗಿದೆ. ತುರ್ತು ಸಂದರ್ಭಗಳಲ್ಲಿ ತ್ವರಿತ ಗತಿಯಲ್ಲಿ ಚಿಕಿತ್ಸೆ ದೊರೆಯಬೇಕು. ಈ ದಿಸೆಯಲ್ಲಿ ಅತ್ಯಾಧುನಿಕ ಮಾದರಿಯಲ್ಲಿ ಆರೋಗ್ಯ ಸೇವೆ ದೊರೆಯಲು ಈ ■ 6ನೇ ಪುಟಕ್ಕೆ

ಮಾದಕ ವಸ್ತು ಸೇವನೆ, ಸಂಗ್ರಹ; ಯುವತಿಯರು ಸೇರಿದಂತೆ ನಾಲ್ವರ ಬಂಧನ

1.30 ಲಕ್ಷ ರೂ. ಮೌಲ್ಯದ 12.80 ಗ್ರಾಂ ಎಂಡಿಎಂಎ ವಶಕ್ಕೆ

ಮೈಸೂರು, ಮೇ 25(ಪಿಎಂ)– ಮೈಸೂರು ನಗರ ಪೊಲೀಸ್‌ನ ಮಾದಕ ವ್ಯಸನ ಮುಕ್ತ ಮೈಸೂರು ಅಭಿಯಾನ 'ವಿಮುಕ್ತಿ' ಅಡಿ ಮುಂದುವರಿದ ಮೈಸೂರು ನಗರ ಸಿಸಿಬಿ ಪೊಲೀಸರ ಕಾರ್ಯಾಚರಣೆಯಲ್ಲಿ ಇಬ್ಬರು ಯುವತಿಯರು ಸೇರಿದಂತೆ ನಾಲ್ವರನ್ನು ಬಂಧಿಸಿ, 1,30,000 ರೂ. ಮೌಲ್ಯದ 12.80 ಗ್ರಾಂ ನಿಷೇಧಿತ ಎಂಡಿಎಂಎ ಮಾದಕ ವಸ್ತು ಜಪ್ತಿ ಮಾಡಲಾಗಿದೆ.

ಮುಜೀಬ್ ಉರ್ ರೆಹಮಾನ್ ಅಲಿಯಾಸ್ ಮುಜೀಬ್, ಎಂ.ಪ್ರೀತಿ, ಲತಾ, ರಾಘವೇಂದ್ರ ಅಲಿಯಾಸ್ ರಾಘು ಬಂಧಿತರು. ಈ ಎಲ್ಲರೂ ಮೈಸೂರಿನವರೇ ಆಗಿದ್ದು, ಭಾನುವಾರ ಕಾರ್ಯಾಚರಣೆ ನಡೆಸಿ ಇವರನ್ನು ಬಂಧಿಸಲಾಗಿದೆ. ಮಾಹಿತಿ ಮೇರೆಗೆ ಸಿದ್ದಲಿಂಗಪುರ ಗ್ರಾಮದ ಚಂದ್ರಮೌಳೇಶ್ವರ ■ 6ನೇ ಪುಟಕ್ಕೆ

ಮೈಸೂರು ಜಿಲ್ಲಾ ಪೊಲೀಸರಿಂದ ಸುಪಾರಿ ಕೊಲೆ ಯತ್ನ ಪ್ರಕರಣ ಬಯಲು


ಆಸ್ತಿ ಪಾಲು ಬೇಕೇ ಬೇಕು ಎಂದ ತಂಗಿ ಮಗನ ಕೊಲೆಗೆ ಸೋದರ ಮಾವನಿಂದ ಸುಪಾರಿ

ಇಬ್ಬರು ನಟೋರಿಯಸ್ ಕ್ರಿಮಿನಲ್ ಸೇರಿ ಆರು ಮಂದಿ ಬಂಧನ

● 30 ಲಕ್ಷಕ್ಕೆ ಸುಪಾರಿ, 7 ಲಕ್ಷ ಅಡ್ವಾನ್ಸ್ ● ಕಾರು ಡಿಕ್ಕಿ ಹೊಡೆಸಿ ಹತ್ಯೆಯತ್ನ ● ಪವಾಡ ಸದೃಶ್ಯವಾಗಿ ಪಾರಾದ ಯುವಕ ● ಆರೋಪಿಗಳಿಂದ ಲಾಂಗು, ಫೋನ್, ನಗದು, ಕಾರು ವಶ



ಮೈಸೂರಿನ ಎಸ್ಪಿ ಕಚೇರಿ ಸಭಾಂಗಣದಲ್ಲಿ ಸೋಮವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾಹಿತಿ ನೀಡಿದರು. ಎಎಸ್ಪಿ ಮಲ್ಲಿಕ್ ಹಾಗೂ ಡಿವೈಎಸ್ಪಿ ರವಿ ಅವರನ್ನು ಚಿತ್ರದಲ್ಲಿ ಕಾಣಬಹುದು.



ಆರೋಪಿ ಸೌದೆ ರಾಜು

ಮೈಸೂರು, ಮೇ25(ಬಿಎಲ್‌ಯು)– ಹಣ, ಇನ್ನಿತರೆ ಆಸ್ತಿಗಾಗಿ ಮನುಷ್ಯ ಏನು ಮಾಡಲು ಹೇಸುವುದಿಲ್ಲ. ಇತ್ತೀಚೆಗಂತೂ ಹೇಗಾದರೂ ಸರಿಯೇ ಸಂಪತ್ತು ಗಳಿಸಲೇಬೇಕು ಎಂಬ ಹಠಕ್ಕೆ ಬಿದ್ದು ಜೈಲು ಸೇರುವವರು, ಸಮಾಧಿ ಸೇರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಹಾಗಾಗಿ ಸಂಬಂಧಗಳು ದಿನೇ ದಿನೇ ಸಾಯುತ್ತಿವೆ. ಸ್ವಾರ್ಥ ಮೆರೆಯುತ್ತಿದೆ. ಕರುಳು–ಬಳ್ಳಿ ಸಂಬಂಧ ಛಿದ್ರಗೊಳ್ಳುತ್ತಿವೆ. ಕೈಗಳು ರಕ್ತಮಯವಾಗುತ್ತಿವೆ. ಅರಿತವರು ಆತಂಕಿತರಾಗಿದ್ದಾರೆ. ಶಿವಾ... ಏನಪ್ಪಾ ಇದು ಎಂದು ತಲೆ ಮೇಲೆ ಕೈಹೊತ್ತು ಪರಿತಪಿಸುತ್ತಿದ್ದಾರೆ. ಎಲ್ಲಾ ಕಲಿಗಾಲದ ಫಲ...

ಆಸ್ತಿಗಾಗಿ ರಕ್ತ ಸಂಬಂಧವನ್ನೂ ಲೆಕ್ಕಿಸದೆ ತುಂಡರಿಸುವ ಮತ್ತೊಂದು ಘಟನೆ ವರದಿಯಾಗಿದೆ. ಕೋಟ್ಯಾಂತರ ಮೌಲ್ಯದ ಆಸ್ತಿಯಲ್ಲಿ ಪಾಲು ನೀಡಬೇಕಾಗುತ್ತದೆ ಎಂದು ತಂಗಿ ಮಗನ್ನು ಕೊಲೆ ಮಾಡಲು ಸೋದರ ಮಾವ ನಟೋರಿಯಸ್ ಗ್ಯಾಂಗ್‌ಗೆ ಸುಪಾರಿ ನೀಡಿದ್ದು, ಸದ್ಯ ಅದೃಷ್ಟವಶಾತ್ ಸೋದರಳಿಯ ಪಾರಾಗಿದ್ದಾನೆ. ಈ ಘಟನೆ ನಡೆದಿರುವುದು ಮೈಸೂರು ಜಿಲ್ಲೆ ಪಿರಿಯಾಪಟ್ಟಣದಲ್ಲಿ.

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು ತಮ್ಮ ಕಚೇರಿಯ ಸಭಾಂಗಣದಲ್ಲಿ ಇಂದು ನಡೆದ ಪತ್ರಿಕಾಗೋಷ್ಠಿಯಲ್ಲಿ ಸುಪಾರಿ ಕೊಲೆ ಪ್ರಕರಣದ ಬಗ್ಗೆ ಇಂಚಿಂಚು ಮಾಹಿತಿ ನೀಡಿದರು; ಪಿರಿಯಾಪಟ್ಟಣದ ಬೆಟ್ಟದಪುರ ಗ್ರಾಮದ ವಾಸಿ ರಾಜು ಅಲಿಯಾಸ್ ಸೌದೆ ರಾಜು ಎಂಬಾತ 11 ಎಕರೆ ಜಮೀನು, ನಿವೇಶನ ಸೇರಿದಂತೆ ಕೋಟ್ಯಾಂತರ ಮೌಲ್ಯದ ಪಿತ್ರಾರ್ಜಿತ ಆಸ್ತಿ ಹೊಂದಿದ್ದಾನೆ. ಪಿತ್ರಾರ್ಜಿತವಾದ ಈ ಆಸ್ತಿಯಲ್ಲಿ ಅರ್ಧ ಪಾಲು ■ 6ನೇ ಪುಟಕ್ಕೆ

ಶಾಸಕ ತನ್ವೀರ್ ಸೇಠ್ ಕೊಲೆ ಯತ್ನ; ಕ್ಯಾತಮಾರನಹಳ್ಳಿ ರಾಜು ಸೇರಿ 6 ಕೊಲೆ, ಇತರೆ ಅಪರಾಧ ಕೃತ್ಯದ ಹಬೀಬ್ ಪಾಷಾ ಇನ್ನು ಆಕ್ಟಿವ್

ಪ್ರವೀಣ್ ಕುಮಾರ್‌ನನ್ನು ಕೊಲೆ ಮಾಡಲು ಸುಪಾರಿ ಪಡೆದಿದ್ದ ಮೈಸೂರಿನ ಶಾಂತಿನಗರದ ಹಬೀದ್ ಪಾಷ ನಟೋರಿಯಸ್ ಕ್ರಿಮಿನಲ್. ಶಾಸಕ ತನ್ವೀರ್ ಸೇಠ್ ಕೊಲೆ ಯತ್ನ, ಕ್ಯಾತಮಾರನಹಳ್ಳಿ ರಾಜ ಕೊಲೆ ಪ್ರಕರಣ ಸೇರಿದಂತೆ ಇತರೆ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುವ ಕುಖ್ಯಾತ ರೌಡಿಯಾಗಿದ್ದಾನೆ ಎಂದು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ತಿಳಿಸಿದ್ದಾರೆ. ಅಲ್ಲದೆ, ಈತ ನಡೆಸಿದ ಅಪರಾಧ ಕೃತ್ಯಗಳ ಪಟ್ಟಿಯನ್ನೇ ತೆರೆದಿಟ್ಟಿದ್ದಾರೆ.

■ 2016ರಲ್ಲಿ ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಆರ್‌ಎಸ್‌ಎಸ್ ಕಾರ್ಯಕರ್ತ ಕ್ಯಾತಮಾರನಹಳ್ಳಿ ರಾಜು ಹತ್ಯೆ.

■ 2011ರಲ್ಲಿ ಹುಣಸೂರು ಜೋಡಿ ಕೊಲೆ– ಸುದೀಂದ್ರ ಹಾಗೂ ಆತನ ಸ್ನೇಹಿತ ವಿಘ್ನೇಶ್‌ನನ್ನು ಹಣಕ್ಕಾಗಿ ಅಪಹರಿಸಿ, ಚಿಕ್ಕಬಳ್ಳಾಪುರ ಸಮೀಪ ಭೀಕರವಾಗಿ ಹತ್ಯೆ. ■ 6ನೇ ಪುಟಕ್ಕೆ

ತಂಬಾಕು ಮಂಡಳಿ–ಐಟಿಸಿಯೊಂದಿಗೆ ಆಗದ ಒಪ್ಪಂದ

ಕಾನೂನುಬಾಹಿರವಾಗಿ 14.59 ಕೋಟಿ ದಂಡ ವಸೂಲಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯಾಧ್ಯಕ್ಷ ಮಂಜೇಗೌಡರು ಮಾತನಾಡಿದರು.

ಮೈಸೂರು, ಮೇ 25(ಜಿಎ)–ತಂಬಾಕು ಮಂಡಳಿ ಹಾಗೂ ಐಟಿಸಿ ಕಂಪನಿಯೊಂದಿಗೆ ಯಾವುದೇ ಒಪ್ಪಂದವಾಗಿಲ್ಲದಿದ್ದರೂ ತಂಬಾಕು ಮಂಡಳಿಯು ರೈತರಿಂದ ಕಾನೂನುಬಾಹಿರವಾಗಿ 14.59 ಕೋಟಿ ರೂ. ದಂಡ ಸಂಗ್ರಹ ಮಾಡಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯಾಧ್ಯಕ್ಷ ಮಂಜೇಗೌಡರು ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.16ರಂದು ಪಿರಿಯಾಪಟ್ಟಣದ ತಂಬಾಕು ಮಂಡಳಿ ವ್ಯವಸ್ಥಾಪಕರಿಗೆ ತಂಬಾಕು ಮಂಡಳಿ, ಐಟಿಸಿ ಕಂಪನಿ ಸೇರಿದಂತೆ ಇತರ ಕಂಪನಿಗಳ ನಡುವೆ ಆಗಿರುವ ಒಪ್ಪಂದ ಪತ್ರವನ್ನು ಸೇರಿದಂತೆ ವಿವಿಧ ಪ್ರಶ್ನೆಗಳನ್ನು ಮುಂದಿಟ್ಟಾಗ ಅವರಿಂದ ತಕ್ಷಣ ಉತ್ತರ ದೊರೆಯಲಿಲ್ಲ. ಬದಲಾಗಿ ಅದಕ್ಕಾಗಿ ಹೋರಾಟವನ್ನೇ ಮಾಡಬೇಕಾಗಿತ್ತು. ನಂತರ ಪೊಲೀಸರ ಸಮ್ಮುಖದಲ್ಲಿ ನಾವು ಕೇಳಿರುವ ಪ್ರಶ್ನೆಗೆ ಲಿಖಿತ ರೂಪದಲ್ಲಿ ಉತ್ತರಿಸುವುದಾಗಿ ಹೇಳಿ ಒಂದು ತಿಂಗಳು ಮಾಡಿದರು ಎಂದು ಕಿಡಿಕಾರಿದರು.

ನಂತರ ಅವರು ನೀಡಿದ ಲಿಖಿತ ರೂಪದ ಉತ್ತರದಲ್ಲಿ ತಂಬಾಕು ಮಂಡಳಿ ಯಾವುದೇ ಖರೀದಿದಾರರು ಮತ್ತು ರೈತರ ನಡುವೆ ಒಪ್ಪಂದ ಮಾಡಿಕೊಂಡಿಲ್ಲ ಎಂದು ಉತ್ತರ ನೀಡಿದರು. ತಂಬಾಕು ಬೆಳೆಗಾರರಿಗೆ ಯಾವ ಖರೀದಿ ಕಂಪನಿಗಳು ನಿಗದಿತ ಬೆಲೆ 350 ಇದ್ದರೂ 150 ರೂ.ಗೆ ಖರೀದಿ ಮಾಡಿದ ಕಂಪನಿಗಳ ಸವಿಸ್ತಾರವಾದ ಮಾಹಿತಿ ನೀಡುವಂತೆ ಕೇಳಿದರೂ ಕೇವಲ ಕಂಪನಿಗಳ ಹೆಸರನ್ನು ಕೊಟ್ಟಿದ್ದಾರೆ. ಕಂಪನಿಗಳು ರೈತರ ನಡುವೆ ಯಾವುದೇ ರೀತಿ ಒಪ್ಪಂದಗಳನ್ನು ತಂಬಾಕು ಮಂಡಳಿ ಮಾಡುವುದಿಲ್ಲ ಎಂಬುದನ್ನು ತಿಳಿಸಿದ್ದಾರೆ ಎಂದರು.

ತಂಬಾಕು ಮಂಡಳಿ ಅಧಿಕೃತ ಮತ್ತು ಅನಧಿಕೃತವಾಗಿ ರೈತರಿಂದ ವಸೂಲು ಮಾಡಿದ ದಂಡದ ಮಾಹಿತಿ ಕೇಳಿದಾಗ 2025–26ನೇ ಸಾಲಿನಲ್ಲಿ 14.59 ಕೋಟಿ ರೂ.ಗಳನ್ನು ರೈತರಿಂದ ವಸೂಲು ಮಾಡಿರುವುದು ತಿಳಿದು ಬಂದಿದೆ. ತಂಬಾಕು ಮಂಡಳಿ ಅವರು ಹೇಳುವ ಹಾಗೇ ರೈತರಿಗೂ ತಂಬಾಕು ಮಂಡಳಿಗೂ ಯಾವುದೇ ಒಪ್ಪಂದವಾಗಿಲ್ಲ ಎಂದರೆ ದಂಡ ಹೇಗೆ ವಸೂಲಿ ಮಾಡಿದ್ದಾರೆ ಎಂದು ಪ್ರಶ್ನಿಸಿದರು.

ತಂಬಾಕು ಮಂಡಳಿ, ಕಂಪನಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಂಬಾಕು ಬೆಳೆಗಾರರ ಸಾವಿಗೆ ಹೊಣೆಗಾರರಾಗಿದ್ದಾರೆ. ಈಗ ಸಾವನ್ನಪ್ಪಿರುವ ರೈತ ಕುಟುಂಬಗಳಿಗೆ 25ಲಕ್ಷ ರೂ. ಪರಿಹಾರವನ್ನು ತಂಬಾಕು ಮಂಡಳಿ ಘೋಷಿಸಬೇಕು ಎಂದು ಆಗ್ರಹಿಸಿದರು.


ಜಿಲ್ಲೆಯಲ್ಲಿರುವ ಎಲ್ಲಾ ಜನಪ್ರತಿನಿಧಿಗಳು ತಂಬಾಕು ಬೆಳೆಗಾರರ ನೆರವಿಗೆ ಬರುತ್ತಿಲ್ಲ. ಬದಲಾಗಿ ಕಂಪನಿ ಪರವಾಗಿ ನಿಂತಿದ್ದಾರೆ. ಕಾಟಾಚಾರಕ್ಕೆ ಸಭೆಗಳನ್ನು ಮಾಡಿ ರೈತರಿಗೆ ಟೋಪಿ ಹಾಕುವ ಕೆಲಸ ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿ ಕಳೆದ ಬಾರಿ ನಡೆಸಿದ ಸಭೆಯಲ್ಲಿ ಐಟಿಸಿ ಕಂಪನಿ ಜಪ್ತಿ ಮಾಡುತ್ತೇವೆ ಎಂದು ಹೇಳಿಕೆ ನೀಡಿದರೂ ಅದು ಕಾರ್ಯರೂಪಕ್ಕೆ ಬರಲಿಲ್ಲ. ತಂಬಾಕು ಮಂಡಳಿ ಈಗ ನೀಡಿರುವ ಲಿಖಿತ ಉತ್ತರಗಳನ್ನು ಅವಲೋಕನ ಮಾಡಿ ತಂಬಾಕು ಬೆಳೆಗಾರರ ಪರವಾಗಿ ನ್ಯಾಯಾಲಯದ ಮೊರೆ ಹೋಗುತ್ತೇವೆ ಎಂದು ಹೇಳಿದರು.

ಮೈಸೂರು ಜಿಲ್ಲೆಯಲ್ಲಿ ಜೂ.28ರಿಂದ 5 ದಿನ ಪಲ್ಸ್ ಪೋಲಿಯೋ ಅಭಿಯಾನ

5 ವರ್ಷದೊಳಗಿನ ಮಕ್ಕಳು ಲಸಿಕೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಿ: ಡಿಹೆಚ್‌ಓ ಡಾ.ಕುಮಾರಸ್ವಾಮಿ ಸೂಚನೆ



ಮೈಸೂರು, ಮೇ 25–ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೊ ಲಸಿಕಾ ಅಭಿಯಾನ ಜೂ. 28ರಿಂದ ಜು.1ರವರೆಗೆ ಐದು ದಿನಗಳ ಕಾಲ ನಡೆಯಲಿದ್ದು, 0–5 ವರ್ಷದೊಳಗಿನ ಒಂದು ಮಗುವೂ ಲಸಿಕೆಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ತಿಳಿಸಿದರು.



ಮೈಸೂರು ಜಿಪಂ ಮಿನಿ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಜಿಲ್ಲಾ ಲಸಿಕಾ ಕಾರ್ಯಪಡೆ ಸಮನ್ವಯ ಸಮಿತಿ ಸಭೆಯಲ್ಲಿ ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ ಮಾತನಾಡಿದರು.

ಅವರು, ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಜಿಲ್ಲಾ ಲಸಿಕಾ ಕಾರ್ಯಪಡೆ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜೂ. 28ರಂದು 1641 ಬೂತ್‌ಗಳನ್ನು ತೆರೆದು ಮಕ್ಕಳಿಗೆ ಲಸಿಕೆ ಹಾಕಲಾಗುವುದು. ಅಂದು ಪೋಷಕರು ತಮ್ಮ 5 ವರ್ಷದೊಳಗಿನ ಮಕ್ಕಳಿಗೆ ಈ ಹಿಂದೆ ಲಸಿಕೆ ಹಾಕಿಸಿದ್ದರೂ ಮತ್ತೊಮ್ಮೆ ತಪ್ಪದೇ ಲಸಿಕೆ ಹಾಕಿಸಿ. ಜೂನ್ 29ರಿಂದ ಜುಲೈ 1ರವರೆಗೆ ಲಸಿಕೆ ಪಡೆಯದ ಮಕ್ಕಳನ್ನು ಪತ್ತೆ ಹಚ್ಚಿ, ಲಸಿಕೆ ನೀಡಲು ಆರೋಗ್ಯ ಸಿಬ್ಬಂದಿ ಮನೆಮನೆಗೆ ತೆರಳಿ ಲಸಿಕೆ ಹಾಕಲಿದ್ದಾರೆ. ಯಾವುದೇ ಮಗುವೂ ಲಸಿಕೆಯಿಂದ ವಂಚಿತವಾಗಬಾರದು ಎಂದು ನಿರ್ದೇಶನ ನೀಡಿದರು.

ಲಸಿಕೆ ನೀಡಲು ಜಿಲ್ಲೆಯಲ್ಲಿ 778059 ಮನೆಗಳು ಹಾಗೂ 0–5 ವರ್ಷದೊಳಗಿನ 219521 ಮಕ್ಕಳನ್ನು ಗುರುತಿಸಲಾಗಿದೆ. 1641 ಬೂತ್ ತೆರೆದು ಲಸಿಕೆ ನೀಡಲಾಗುವುದು. ಈ ಉದ್ದೇಶಕ್ಕೆ 6772 ವ್ಯಾಕ್ಸಿನೇಟರ್ ಹಾಗೂ 328 ಸೂಪರ್‌ವೈಸರ್‌ಗಳನ್ನು ನೇಮಕ ಮಾಡಲಾಗುವುದು ಎಂದು ತಿಳಿಸಿದರು.

ಆರ್.ಸಿ.ಹೆಚ್ ಅಧಿಕಾರಿ ಡಾ.ಸಿರಾಜ್ ಅಹಮದ್ ಮಾತನಾಡಿ, ದೇಶದಲ್ಲಿ 2011ರಲ್ಲಿ ಕೊನೆಯದಾಗಿ ಪೋಲಿಯೋ ಪ್ರಕರಣ ವರದಿಯಾಗಿದ್ದು ನಂತರ ಯಾವುದೇ ಪ್ರಕರಣಗಳು ಪತ್ತೆಯಾಗಿಲ್ಲ. 2014ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ ಭಾರತವನ್ನು ಪೋಲಿಯೋ ಮುಕ್ತ ದೇಶ ಎಂದು ಘೋಷಿಸಿದೆ. ಆದರೂ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ ಮತ್ತು ಅಫಘಾನಿಸ್ತಾನಗಳಲ್ಲಿ ಕೆಲವು ಪೋಲಿಯೊ ಪ್ರಕರಣಗಳು ವರದಿಯಾಗುತ್ತಿದ್ದು, ಹೆಚ್ಚಿನ ನಿಗಾ ವಹಿಸುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಭಾರತದಲ್ಲಿ ಪಲ್ಸ್ ಪೋಲಿಯೊ ಕಾರ್ಯಕ್ರಮ ಮುಂದುವರಿಸಲಾಗಿದೆ ಎಂದು ಹೇಳಿದರು.

> “ಲಸಿಕೆಯಿಂದ ಯಾರು ವಂಚಿತರಾಗಬಾರದೆಂದು ಕಟ್ಟಡ ಕಾರ್ಮಿಕರು, ಇಟ್ಟಿಗೆ ತಯಾರಿಸುವ ಕಾರ್ಮಿಕರು, ವಲಸೆ ಕಾರ್ಮಿಕರು ವಾಸಿಸುವ ಸ್ಥಳ ಸೇರಿದಂತೆ ಇನ್ನಿತರೆ ಒಟ್ಟು 1396 ಹೈ ರಿಸ್ಕ್ ಏರಿಯಾಗಳನ್ನು ಗುರುತು ಮಾಡಲಾಗುತ್ತದೆ. ಲಸಿಕೆ ನೀಡಲು 51 ಮೊಬೈಲ್ ಟೀಂ ಸಹ ರಚಿಸಲಾಗಿರುತ್ತದೆ. ಹೈ ರಿಸ್ಕ್ ಏರಿಯಾ ಸ್ಥಳಗಳಲ್ಲಿ ನಿಗಾ ವಹಿಸಿ. **–ಡಾ.ಕುಮಾರಸ್ವಾಮಿ, ಡಿಹೆಚ್‌ಓ.**

ಟ್ರಿನ್ಸಿಟ್ ಬೂತ್: ಮೈಸೂರು ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ ಹಾಗೂ ಇನ್ನಿತರೆ ಪ್ರವಾಸಿ ತಾಣಗಳಲ್ಲಿ, ಜೂನ್ 28ರಂದು ಟ್ರಿನ್ಸಿಟ್ ಬೂತ್ ತೆರೆಯಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ವಲಸೆ, ಕಟ್ಟಡ ಹಾಗೂ ಮತ್ತಿತರ ಕೂಲಿ ಕಾರ್ಮಿಕರ ಮಕ್ಕಳು ವಾಸಿಸುವ ಸ್ಥಳಗಳಲ್ಲಿ ಹೆಚ್ಚು ಜಾಗೃತಿ ಕಾರ್ಯಕ್ರಮ ಆಯೋಜಿಸಿ ಎಂದರು.

2025ನೇ ಸಾಲಿನಲ್ಲಿ ನಡೆದ ಪಲ್ಸ್ ಪೋಲಿಯೊ ಅಭಿಯಾನದಲ್ಲಿ ಜಿಲ್ಲೆಯಲ್ಲಿ 222084 ಮಕ್ಕಳಿಗೆ ಲಸಿಕೆ ನೀಡಲು ಗುರಿ ನಿಗದಿಪಡಿಸಲಾಗಿತ್ತು. 233484 ಮಕ್ಕಳಿಗೆ ಲಸಿಕೆ ನೀಡಿ ಶೇ.105.13 ಸಾಧನೆ ಮಾಡಲಾಗಿದೆ ಎಂದರು. ಪಲ್ಸ್ ಪೋಲೀಯೋ ಕಾರ್ಯಕ್ರಮದ ಯಶಸ್ವಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಶಿಕ್ಷಣ, ಸ್ವಯಂಸೇವಾ ಸಂಸ್ಥೆಗಳು, ಸಾರಿಗೆ ಇಲಾಖೆ ಹಾಗೂ ಪೊಲೀಸ್ ಇಲಾಖೆ ಸೇರಿದಂತೆ ಇನ್ನಿತರ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸಬೇಕೆಂದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಇಲಾಖೆ ಕಾರ್ಯಕ್ರಮ ಅನುಷ್ಠಾನಾಧಿಕಾರಿ ಡಾ.ಗೋಪಿನಾಥ್, ಡಾ.ನಾಗ ರಾಜ್, ಡಾ.ಬೃಂದ, ಡಾ.ಸುವರ್ಣ, ತಾಲೂಕು ವೈದ್ಯಾಧಿಕಾರಿಗಳಾದ ಡಾ.ರವಿಕುಮಾರ್, ಡಾ.ಪುಟ್ಟತಾಯಮ್ಮ, ಡಾ.ಈಶ್ವರ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕೋಟ್ಯಾಂತರ ಮೌಲ್ಯದ ಚಿನ್ನಾಭರಣಗಳ ವಂಚನೆ

ಚಿನ್ನತಂಬಿ ಪ್ರಕರಣ ಎಸ್‌ಐಟಿಗೆ ವಹಿಸಿ

ಮೈಸೂರು,ಮೇ25(ಜಿಎ)–ಕೋಟ್ಯಾಂತರ ಮೌಲ್ಯದ ಚಿನ್ನಾಭರಣ ಮೋಸ ಮಾಡಿರುವ ಸೌಂದರ್‌ರಾಜ್ ಅಲಿಯಾಸ್ ಚಿನ್ನತಂಬಿ ಪ್ರಕರಣವನ್ನು ಎಸ್‌ಐಟಿಗೆ ವಹಿಸಬೇಕು ಎಂದು ಜನತಾದಳ (ಸಂಯುಕ್ತ) ಕರ್ನಾಟಕ ರಾಜ್ಯ ಉಪಾಧ್ಯಕ್ಷ ಕೆ.ವಿ.ಶಿವರಾಮ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾರುಕಟ್ಟೆ ಮೌಲ್ಯಕ್ಕಿಂತ ಕಡಿಮೆ ಬಡ್ಡಿ ಹಾಗೂ ಗರಿಷ್ಠ ಬೆಲೆಗೆ ಖರೀದಿಸುವುದಾಗಿ ಗ್ರಾಹಕರನ್ನು ಆಕರ್ಷಿಸಿ ಅವರಿಂದ ಚಿನ್ನಾಭರಣಗಳ ಖರೀದಿ ಮತ್ತು ಗಿರವಿ ಇಟ್ಟುಕೊಂಡು ವಂಚಿಸಲಾಗಿದೆ. ಅಲ್ಲದೆ ಗ್ರಾಹಕರ ಚಿನ್ನಾಭರಣಗಳನ್ನು ಕರಗಿಸಿ ದುರುಪಯೋಗ ಪಡಿಸಿಕೊಂಡು ಮೋಸ ಮಾಡಲಾಗಿದೆ. ಹೀಗಾಗಿ ಸರ್ಕಾರ ಉನ್ನತಮಟ್ಟದ ತನಿಖೆ ನಡೆಸಿ ನೊಂದವರಿಗೆ ನ್ಯಾಯ ಒದಗಿಸಬೇಕು' ಎಂದು ಒತ್ತಾಯಿಸಿದರು.

ಇತ್ತೀಚೆಗೆ ಮಾಧ್ಯಮಗಳಲ್ಲಿ ಚಿನ್ನತಂಬಿ, 600 ಕೆಜಿಗೂ ಹೆಚ್ಚಿನ ಬಂಗಾರ ಕರಗಿಸಿದ್ದಾನೆ ಎಂದು ಹೇಳಲಾಗುತ್ತಿದೆ. ಈಗಿನ ದರದಲ್ಲಿ ಒಂದು ಸಾವಿರ ಕೋಟಿ ಮೌಲ್ಯವಾಗಲಿದೆ. ಒಬ್ಬ ಸಾಮಾನ್ಯ ಚಿನ್ನದ ವ್ಯಾಪಾರಿ ಇಷ್ಟು ಹಣವನ್ನು ಹೂಡಿಕೆ ಅಥವಾ ವಹಿವಾಟು ಮಾಡಲು ಹೇಗೆ ಸಾಧ್ಯ. ಈತನ ಆಸ್ತಿಗಳ ಒಟ್ಟು ವಿಲೇವಾರಿ ಮಾಡಿದರೂ 20 ಕೋಟಿ ದಾಟುವುದಿಲ್ಲ ಎಂದು ಪ್ರಶ್ನಿಸಿದರು.

ಈತನ ಮೇಲೆ ದೂರು ನೀಡಿ 2 ವರ್ಷಗಳಾದರೂ ಯಾವುದೇ ಕ್ರಮ ವಹಿಸದ ಆದಾಯ ತೆರಿಗೆ ಅಧಿಕಾರಿಗಳ ಮೇಲೆ ಮತ್ತು ಸಹಕರಿಸಿದ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಮೇಲೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಈ ಕುರಿತು ಸರ್ಕಾರ ಮೌನವಹಿಸಿದರೆ ತೀವ್ರ ಹೋರಾಟ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಎಸ್.ಎಸ್.ಮೂರ್ತಿ, ಕೂಡ್ಲೂರು ಶ್ರೀಧರಮೂರ್ತಿ, ರಂಗನಾಥ, ಬಾಬಾ ಸಾಹೇಬ್ ಉಪಸ್ಥಿತರಿದ್ದರು.

ವಸತಿ ನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರು: ಜ್ಯೋತಿಪಣ ಯುವಜನ ಸಂಘದ ಗಾಣಿಗರ ವಿದ್ಯಾರ್ಥಿನಿಲಯಕ್ಕೆ 2026–27ನೇ ಸಾಲಿನ ಪಿಯುಸಿ, ಪದವಿ, ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ಆರ್ಥಿಕವಾಗಿ ಹಿಂದುಳಿದ ಜ್ಯೋತಿಪಣ ಗಾಣಿಗ ವಿದ್ಯಾರ್ಥಿಗಳಿಂದ ಊಟ ಮತ್ತು ವಸತಿನಿಲಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಇತರೆ ಜನಾಂಗದ ವಿದ್ಯಾರ್ಥಿಗಳಿಗೂ ಅರ್ಜಿ ಸಲ್ಲಿಸಲು ಅವಕಾಶ ವಿದ್ದು, ಷರತ್ತುಗಳು ಅನ್ವಯಿಸುತ್ತವೆ. ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಸಂಘದ ಕಚೇರಿ ಅಥವಾ ಸಂಘದ ಅಧ್ಯಕ್ಷ ಸಿ.ವಿ. ಪಾರ್ಥಸಾರಥಿ, ಮೊ. 9448386989, ಕಾರ್ಯದರ್ಶಿ ಜಿ. ಯದುಕುಮಾರ್–9141518901, ಆರ್.ರಘು, ಗೌರವ ಅಧ್ಯಕ್ಷ, ಮೊ. 9448055704 ಸಂಪರ್ಕಿಸಿ.

ಪಿಎಚ್.ಡಿ ಪದವಿ

ಮೈಸೂರು: ಡಾ.ವೈ.ಹೆಚ್. ನಾಯಕ್‌ವಾಡಿ ಅವರ ಮಾರ್ಗದರ್ಶನದಲ್ಲಿ



ಶ್ರೀಕಂಠ ಅವರು ಇತಿಹಾಸ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಎಸ್.ಸಿ.ಬಸವರಾಜು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡುವಂತೆ ಆಗ್ರಹ

ಮೈಸೂರು, ಮೇ 25(ಜಿಎ)–ನಾಯಕ ಸಮುದಾಯವು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಾ ಬಂದಿದ್ದು, ಈ ಬಾರಿ ಎಸ್.ಸಿ. ಬಸವರಾಜು ಅವರನ್ನು ವಿಧಾನಪರಿಷತ್ ಸದಸ್ಯರನ್ನಾಗಿ ನೇಮಕ ಮಾಡುವಂತೆ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಅಧ್ಯಕ್ಷ ದ್ಯಾವಪ್ಪ ನಾಯಕ ಒತ್ತಾಯಿಸಿದರು.



ಸೋಮವಾರ ಸುದ್ದಿಗೋಷ್ಠಿಯಲ್ಲಿ ದ್ಯಾವಪ್ಪ ನಾಯಕ ಮಾತನಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ವಿಭಾಗದಲ್ಲಿ ನಾಯಕ ಸಮುದಾಯವು ಸುಮಾರು 9ರಿಂದ 10 ಲಕ್ಷ ಜನಸಂಖ್ಯೆಯಿದ್ದು, ಇಲ್ಲಿಯವರೆಗೆ ನಮ್ಮ ಸಮುದಾಯದ ಹೆಚ್ಚಿನ ಜನರು ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತ ಬಂದಿದ್ದರೂ ಇಂದಿನವರೆಗೂ ಈ ಭಾಗದಲ್ಲಿ ಯಾರನ್ನೂ ಕಾಂಗ್ರೆಸ್ ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡಿರುವುದಿಲ್ಲ. ಆದರೆ, ಜೆಡಿಎಸ್ ಮತ್ತು ಬಿಜೆಪಿ ಪಕ್ಷದವರೂ ಈ ಭಾಗದಲ್ಲಿ ಸಮುದಾಯದ ಮುಖಂಡರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡಿದ್ದಾರೆ ಎಂದರು.

ಈ ಬಾರಿ ಎಸ್.ಸಿ.ಬಸವರಾಜು ಅವರನ್ನು ಕಾಂಗ್ರೆಸ್ ಪಕ್ಷ ಪ್ರಸ್ತುತ ಜೂನ್ ತಿಂಗಳಲ್ಲಿ ನಡೆಯುವ ವಿಧಾನ ಪರಿಷತ್ ಚುನಾವಣೆಯಲ್ಲಿ ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಕ ಮಾಡಿದರೆ, ಇನ್ನು, ಹೆಚ್ಚಿನ ರೀತಿಯಲ್ಲಿ ಈ ಭಾಗದಲ್ಲಿ ಪಕ್ಷ ಸಂಘಟನೆಗೆ ಸಹಕಾರಿಯಾಗುತ್ತದೆ ಎಂದು ದ್ಯಾವಪ್ಪನಾಯಕ ತಿಳಿಸಿದರು.

ಎಸ್.ಸಿ.ಬಸವರಾಜು ಅವರು ಸುಮಾರು 40 ವರ್ಷಗಳಿಂದ ಸಕ್ರಿಯವಾಗಿ ರಾಜಕೀಯ ಮತ್ತು ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಈ ಭಾಗದಲ್ಲಿ ಗುರುತಿಸಿಕೊಂಡಿರುತ್ತಾರೆ. ಅಲ್ಲದೆ, ಮೈಸೂರು ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿ ಹಾಗೂ ಕರ್ನಾಟಕ ರಾಜ್ಯ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ. ಇವರ ಪಕ್ಷ ಮತ್ತು ಸಮುದಾಯದ ಸೇವಾ ಹಿರಿತವನ್ನು ಪರಿಗಣಿಸಿ ವಿಧಾನಪರಿಷತ್ ಸದಸ್ಯರನ್ನಾಗಿ ನೇಮಕ ಮಾಡುವಂತೆ ಆಗ್ರಹಿಸಿದರು. ಗೋಷ್ಠಿಯಲ್ಲಿ ತಿಪ್ಪೂರು ಮಹದೇವನಾಯಕ, ವೆಂಕಟೇಶ್ ಡಿ.ನಾಯಕ, ಶಿವಣ್ಣ ಜೆ.ಹೊಸರಾಮೇನಗಳ್ಳಿ, ಸುರೇಶ್ ಕುಮಾರಬೀಡು, ನರಸಿಂಹ ನಾಯಕ ಮುಂಜನಹಳ್ಳಿ ಉಪಸ್ಥಿತರಿದ್ದರು.

ಒಕ್ಕಲಿಗ ವಧು–ವರರ ಸಮಾವೇಶ

ಮೈಸೂರು, ಮೇ 25– ಮೈಸೂರಿನ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಮತ್ತು ನೇಗಿಲಯೋಗಿ ಬನ್ನೂರು ಹೋಬಳಿ ಶಾಖೆ ವತಿಯಿಂದ 16ನೇ ಹಾಗೂ 2026ನೇ ಸಾಲಿನ ಒಕ್ಕಲಿಗ ವಧು–ವರರ ಸಮಾವೇಶ ಮೇ 28 ರಂದು ಬೆಳಗ್ಗೆ 10 ಗಂಟೆಗೆ ಶ್ರೀ ಶ್ರೀನಿವಾಸ ಕಲ್ಯಾಣ ಮಂಟಪ ಬಿ.ಜಿ.ಎಸ್.ಕಾಲೇಜು ಹತ್ತಿರ, ಬನ್ನೂರು ಮಂಡ್ಯ ಮುಖ್ಯ ರಸ್ತೆ, ಚಾಮನಹಳ್ಳಿ, ಬನ್ನೂರು ಟೌನ್ ಇಲ್ಲಿ ಆಯೋಜಿಸಲಾಗಿದೆ.

ಆಸಕ್ತರು ನೊಂದಣಿ ಮತ್ತು ಹೆಚ್ಚಿನ ಮಾಹಿತಿಗಾಗಿ ಕಚೇರಿಗೆ ಭೇಟಿ ಮಾಡುವುದು ಅಥವಾ ಮೊಬೈಲ್ ಸಂಖ್ಯೆ 9916874030, 9036342845, 9448979333, 9538587380, 9902994517, 9880503712, 9448101336, 9483453005, 9900629393ಗೆ ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಜೆಎಸ್‌ಎಸ್ ಬಡಾವಣೆಯಲ್ಲಿ ಸ್ವಚ್ಛತಾ ಅಭಿಯಾನ



ಜೆಎಸ್‌ಎಸ್ 2ನೇ ಹಂತದ ಬಡಾವಣೆಯಲ್ಲಿ ಸ್ವಚ್ಛತಾ ಅಭಿಯಾನಕ್ಕೆ ಚಾಲನೆ.

ಮೈಸೂರು: ಮೈಸೂರಿನ ಜೆಎಸ್‌ಎಸ್ ಎರಡನೇ ಹಂತದ ಬಡಾವಣೆಯ ಸೇವಾ ಸಮಿತಿ ಮತ್ತು ಮೈಸೆಮ್ ಎಂಜಿನಿಯರಿಂಗ್ ಕಾಲೇಜು ಸಹಯೋಗದಲ್ಲಿ ಬಡಾವಣೆಯಲ್ಲಿ ಕಾಲೇಜಿನ ಎನ್‌ಎಸ್‌ಎಸ್ ವಿದ್ಯಾರ್ಥಿಗಳ ಸಹಕಾರದೊಂದಿಗೆ ಸ್ವಚ್ಛತಾ ಅಭಿಯಾನ ಏರ್ಪಡಿಲಾಗಿತ್ತು.

ಕಾರ್ಯಕ್ರಮವನ್ನು ಕಾಲೇಜಿನ ಪ್ರಾಂಶುಪಾಲ ಡಾ.ಮಂಜುನಾಥ್ ಉದ್ಘಾಟಿಸಿದರು. ಎನ್‌ಎಸ್‌ಎಸ್ ಅಧಿಕಾರಿ ವಿನಯ್ ಉಪಸ್ಥಿತರಿದ್ದರು. ಬಡಾವಣೆಯ ಸೇವಾ ಸಮಿತಿ ಅಧ್ಯಕ್ಷ ಎಂ.ಗಂಗಾಧರ, ಗೌರವ ಅಧ್ಯಕ್ಷ ಮುದ್ದು ಬಸವಣ್ಣ, ಬಸವ ಬಳಗದ ಅಧ್ಯಕ್ಷ ಶಿವಸ್ವಾಮಿ, ಕಾರ್ಯದರ್ಶಿ ಲೋಹಿತ್, ಉಪಾಧ್ಯಕ್ಷ ಮಹದೇವಸ್ವಾಮಿ, ನಿರ್ದೇಶಕರಾದ ಪರಶಿವಮೂರ್ತಿ, ಮಲ್ಲಿಕಾರ್ಜುನ ಸ್ವಾಮಿ, ಡಾ. ಓಂ ಪ್ರಕಾಶ, ಮೈಸೆಂ ಇಂಜಿನಿಯರಿಂಗ್ ಕಾಲೇಜಿನ ಅಧ್ಯಾಪಕರು ಮತ್ತು ಅಧ್ಯಾಪಕೇತರರು, ಲಲಿತಾದ್ರಿ ಮಹಿಳಾ ಬಳಗದ ಅಧ್ಯಕ್ಷೆ ಜ್ಯೋತಿ ಓಂ ಪ್ರಕಾಶ್ ಇನ್ನಿತರರು ಭಾಗವಹಿಸಿದ್ದರು. ಸ್ವಚ್ಛತಾ ಅಭಿಯಾನದ ಮೂಲಕ ಕಸಮುಕ್ತ ಬಡಾವಣೆ ಮಾಡಲು ನಿವಾಸಿಗಳಿಗೆ ವಿದ್ಯಾರ್ಥಿಗಳ ಮೂಲಕ ಅರಿವು ಹಾಗೂ ಕಸ ವಿಲೇವಾರಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ನೂತನ ಪದಾಧಿಕಾರಿಗಳು

ಮೈಸೂರು, ಮೇ 25–ಕರುನಾಡ ಸಮರ ಸೇನೆಯ ರಾಜ್ಯ ಸಮಿತಿಯು ಇತ್ತೀಚೆಗೆ ಚಾಮುಂಡಿ ಗೆಸ್ಟ್ ಹೌಸ್‌ನಲ್ಲಿ ಸಭೆ ಸೇರಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಮೈಸೂರು ಜಿಲ್ಲಾಧ್ಯಕ್ಷರಾಗಿ ಹೆಚ್.ಎಂ.ಮಂಜು ಹೆಡತಲೆ, ಗೌರವ ಅಧ್ಯಕ್ಷರಾಗಿ ಟಿ.ರಾಜನಾಯಕ ಹೆಡತಲೆ, ಮೈಸೂರು ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಸುನಿತಾ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಜಿಲ್ಲಾ ಉಪಾಧ್ಯಕ್ಷರಾಗಿ ಹೆಚ್.ಎಂ. ಪವನ್, ಎನ್.ಮಣಿಕಂಠ, ಪ್ರಧಾನ ಕಾರ್ಯದರ್ಶಿಯಾಗಿ ಹೆಚ್.ಜಿ.ಸಿದ್ದಪ್ಪಾಜಿ, ಪ್ರಕಾಶ್, ಸಿ.ಮಹೇಶ್, ಹೆಚ್.ಪಿ.ಮಂಜುನಾಥ್‌ರನ್ನು, ಸಂಘಟನಾ ಕಾರ್ಯದರ್ಶಿಯನ್ನಾಗಿ, ಶಿವಕುಮಾರ್ ಹೆಚ್.ಎನ್., ಕಿರಣ್ ರನ್ನು ಸಂಚಾಲಕರನ್ನಾಗಿ, ಹೆಚ್.ಎಂ.ಸುಬ್ರಹ್ಮಣ್ಯ ಅವರನ್ನು ಖಜಾಂಚಿಯಾಗಿ, ಕೃಷ್ಣನಾಯಕ, ಪುಟ್ಟರಾಜು ಅವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಯಿತು.

ಅಭಿನಯಕ್ಕಾಗಿ ಕಲಾವಿದರಿಂದ ಅರ್ಜಿ ಆಹ್ವಾನ

ಮೈಸೂರು, ಮೇ 25–ಅದಮ್ಯ ರಂಗಶಾಲೆಯು ಕಳೆದ ಎಂಟು ವರ್ಷಗಳಿಂದ ಮೈಸೂರಿನಲ್ಲಿ ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ವಯಸ್ಕರ ಮತ್ತು ಮಕ್ಕಳ ರಂಗಭೂಮಿಗೆ ಅಪಾರ ಕೊಡುಗೆ ನೀಡುತ್ತಾ ಬರುತ್ತಿದೆ. ಅದಮ್ಯದ ಮುಂದಿನ ಭಾಗವಾಗಿ 30 ದಿನಗಳ ಅವಧಿಯ ಅಭಿನಯ ತರಬೇತಿ ಮತ್ತು ಕಲಾತ್ಮಕ ಚಲನಚಿತ್ರ ತಯಾರಿ ಮತ್ತು ಚಿತ್ರೀಕರಣ ಪ್ರಾರಂಭವಾಗಲಿದೆ. ಅಭಿನಯ ತರಬೇತಿ, ಧ್ವನಿ ಮುದ್ರಣ, ಪ್ರಸಾದನ, ಸಂಕಲನ ಸೇರಿದಂತೆ ಸಿನಿಮಾ ಮಾಧ್ಯಮದ ಬೇರೆ ಬೇರೆ ಆಯಾಮಗಳ ಕುರಿತು ಪರಿಚಯಾತ್ಮಕ ಪ್ರಾಯೋಗಿಕ ತರಗತಿಗಳು ನಡೆಯಲಿದ್ದು, ನುರಿತ ನಿರ್ದೇಶಕರು ಮತ್ತು ಚಲನಚಿತ್ರ ಕಲಾವಿದರು ತರಬೇತಿ ನೀಡಲಿದ್ದಾರೆ. ಕಾರ್ಯಾಗಾರದಲ್ಲಿ ಭಾಗವಹಿಸುವ ಶಿಬಿರಾರ್ಥಿಗಳನ್ನು ತೊಡಗಿಸಿ ಕಲಾತ್ಮಕ ಸಿನಿಮಾ ತಯಾರಾಗಲಿದ್ದು, ಮೊದಲು ನೋಂದಣಿ ಮಾಡಿಕೊಂಡ ಗರಿಷ್ಠ 30 ಮಂದಿಗೆ ಮಾತ್ರ ಅವಕಾಶ ಕಲ್ಪಿಸಲಾಗುವುದು. ವಯೋಮಿತಿ 16 ವರ್ಷದಿಂದ 50 ವರ್ಷವಾಗಿರುತ್ತದೆ. ಹೆಚ್ಚಿನ ಮಾಹಿತಿಗೆ ಮೊ.8660103141.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.5.2026 ಮಂಗಳವಾರ, ಮಳೆ ನಕ್ಷತ್ರ: ರೋಹಿಣಿ 25.05.2026ರಿಂದ 07.06.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ (ಅಧಿಕ) ಮಾಸ, ಶುಕ್ಲ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಹಸ್ತ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಮಧುಮೇಹದ ಗಾಯಗಳು, ವೆರಿಕೋಸ್ ವೇನ್ಸ್, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಬೆಳಗ್ಗೆ 9.30 ರಿಂದ ಕಣ್ಣಿನ ದೃಷ್ಟಿ ಸಮಸ್ಯೆಗಳಿಗೆ ವಿಶೇಷ ಬೇಸಿಗೆ ಶಿಬಿರ, ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ಕೀಲುನೋವು, ಅಲರ್ಜಿ, ಚರ್ಮದ ರೋಗಗಳು, ಒತ್ತಡ, ಆತಂಕ, ಬಾಲನೆರೆ, ತಲೆನೋವು, ಅಸ್ತಮಾ, ಪಿಸಿಓಡಿ, ಪುರುಷ ಹಾಗೂ ಸ್ತ್ರೀ ಬಂಜೆತನ, ಪಿಎಂಓಎಸ್ ತೊಂದರೆಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಅಪೂರ್ವ ಸ್ನೇಹ ಬಳಗ** : ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಗಳ 84ನೇ ಹುಟ್ಟುಹಬ್ಬದ ಅಂಗವಾಗಿ ಗೋಪೂಜೆ ಹಾಗೂ ಗೋವುಗಳಿಗೆ ಮೇವು ವಿತರಣೆ, ಮುಖ್ಯ ಅತಿಥಿಗಳು : ವೆಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ಹಿರಿಯ ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ನಗರ ಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮಪ್ರಸಾದ್, ಯುವ ಮುಖಂಡ ವಿಕ್ರಂ ಅಯ್ಯಂಗಾರ್, ಸ್ಥಳ: ಕೃಷ್ಣನ ದೇವಸ್ಥಾನದ ಮುಂಭಾಗ, ನಂಜುಮಳಿಗೆ, ಬೆಳಗ್ಗೆ 8.30ಕ್ಕೆ.

■ **ಆದಾನಿ ಅಂಬುಜ ಸಿಮೆಂಟ್** : ರಕ್ತದಾನ ಶಿಬಿರ, ಸ್ಥಳ: ಅದಾನಿ ಸಿಮೆಂಟ್, ಐಶ್ವರ್ಯ ಆಸ್ಪತ್ರೆ ಮುಖ್ಯ ರಸ್ತೆ, ವಿಜಯನಗರ 3ನೇ ಹಂತ, ಬೆಳಗ್ಗೆ 10 ರಿಂದ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ:** ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ, ಮೈ ಭಾರತ್ ಮೈಸೂರು, ಶ್ರೀಚಂದ್ರು ಗ್ರಾಮೀಣ ಸಂಗೀತ ಕಲಾ ಸಂಘ, ಮೈಸೂರು ಜಿಲ್ಲೆ** : ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ, ಉದ್ಘಾಟನೆ : ಸಹಾಯಕ ಪೊಲೀಸ್ ಆಯುಕ್ತ ಕೆ.ಸಿ. ಪ್ರಕಾಶ್, ಅಧ್ಯಕ್ಷತೆ : ನಿವೃತ್ತ ಅಧಿಕಾರಿ ಆರ್. ರಂಗನಾಥ್, ಮುಖ್ಯ ಭಾಷಣಕಾರರು : ಸಂಶೋಧನಾ ಅಧಿಕಾರಿ ಡಾ. ಎಂ. ಶ್ರೀನಿವಾಸ ಮೂರ್ತಿ, ಮುಖ್ಯ ಅತಿಥಿಗಳು : ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ಉಪನಿರ್ದೇಶಕ ಬಿ.ಎಸ್. ರವಿ, ಹೆಚ್.ಕೆ. ಸೋಮಶೇಖರ್, ಎಂ. ಮಹದೇವ್, ಸಿ. ರಾಘವೇಂದ್ರ, ಬಿ.ಎಂ. ಮಹದೇವಯ್ಯ, ಎನ್. ಲಕ್ಷ್ಮಣ್, ಕೆಂಚಯ್ಯ, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 11ಕ್ಕೆ.

■ **ನಿವೃತ್ತ ಶುಶ್ರೂಷಾಧಿಕಾರಿಗಳ ಸಂಘ** : ಮಿಸ್ ಫ್ಲಾರೆನ್ಸ್ ನೈಟಿಂಗೇಲ್ ಅವರ 206ನೇ ಜಯಂತ್ಯೋತ್ಸವದ ಅಂಗವಾಗಿ ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ, ಉದ್ಘಾಟನೆ : ನಿವೃತ್ತ ಪ್ರಿನ್ಸಿಪಾಲ್ ಎಂ. ಮಾಧು, ಮುಖ್ಯ ಅತಿಥಿಗಳು : ನಿವೃತ್ತ ಉಪನ್ಯಾಸಕ ಡಾ. ಕೆ.ಆರ್. ಶ್ರೀನಿವಾಸ್, ಅಧ್ಯಕ್ಷತೆ : ಸಂಘದ ಅಧ್ಯಕ್ಷೆ ಶ್ರೀಮತಿ ಶಿವಮ್ಮ, ಉಪಸ್ಥಿತರು : ಸಂಘದ ಸಂಸ್ಥಾಪಕ ಅಧ್ಯಕ್ಷ ಲಯನ್ ಡಾ. ಪಿ. ರಂಗಸ್ವಾಮಿ, ಗೌರವಾಧ್ಯಕ್ಷ ಕೆ.ಕೆ. ಕುಶಾಲಪ್ಪ, ಪ್ರಧಾನ ಕಾರ್ಯದರ್ಶಿ ಶ್ರೀಮತಿ ಹೇಮಲತಾ, ಖಜಾಂಚಿ ಶ್ರೀಮತಿ ಆಲೀಸ್ ಫ್ಲಾರೆನ್ಸ್ ಕ್ರಾಸ್ಟ, ಸ್ಥಳ: ಗುರು ರೆಸಿಡೆನ್ಸಿ ಹೋಟೆಲ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ–ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು ಮುಕ್ತವಾಣಿ. ಪ್ರಾಯೋಜಕರು : ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ಅಧ್ಯಯನ ವಿಭಾಗದಲ್ಲಿರುವ ಅಧ್ಯಯನ ಅವಕಾಶಗಳನ್ನು ಕುರಿತು ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಪಿ.ಸುರೇಶ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಲಕ್ಷ್ಮೀನಾರಾಯಣ .ಎಸ್., ನಿರ್ಮಾಣ: ಎನ್.ಕೇಶವಮೂರ್ತಿ, 8.30 ನಾ ಕಸ್ತೂರಿ ಅವರ ಪಾತಳದಲ್ಲಿ ಪಾಪಚ್ಚಿ–ಮಕ್ಕಳ ಸಾಹಿತ್ಯ ಕೃತಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್. ಎಸ್., 8.45 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಡಿ. ಕೆ. ಜಯರಾಮನ್ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಹೊಂಗಿರಣ' ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ: ಬಿ.ಜಿ.ಕವಿತಾ ಹಾಗೂ ಎಸ್.ಲಕ್ಷ್ಮೀನಾರಾಯಣ **ಮಧ್ಯಾಹ್ನ:** 12.05 ವನಿತಾ ವಿಹಾರ ನಾಟಕ ನಾವೂ ಸೂಪರ್ ವುಮೆನ್ನೇ!, ರಚನೆ–ನೇತ್ರಾ. ಕೆ. ನಿರ್ದೇಶನ ಹಾಗೂ ನಿರ್ಮಾಣ–ದಿಗ್ವಿಜಯ್ ಬಿ., 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ–ಶಿವಶರಣೆಯರ ವಚನಗಳಲ್ಲಿ ನಿಸರ್ಗ ರೂಪಕಗಳು–ಈ ಕುರಿತು ಮಾತನಾಡುತ್ತಾರೆ ಶಾಸ್ತ್ರೀಯ ಕನ್ನಡ ಅಧ್ಯಯನ ಮತ್ತು ಅತ್ಯುನ್ನತ ಕೇಂದ್ರದ ಸೀನಿಯರ್ ಫೆಲೋ ಡಾ. ರಾಧಾಮಣಿ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ವಿ. ಕೃಷ್ಣಮೂರ್ತಿ ಮತ್ತು ಸಂಗಡಿಗರು– ನಾಗಸ್ವರ ವಾದನ, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ–ಉಮಂಗ್, 4.00 ಕಥಾಕಾಲಕ್ಷೇಪ–ಶ್ರೀರಾಮಾಂಜನೇಯ ಯುದ್ಧ, ಪ್ರಸ್ತುತಿ–ಆರ್.ಗುರುರಾಜುಲು ನಾಯ್ಡು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯ ಕ್ರಮ. ಮುಂಗಾರಿಗೆ ಪೂರ್ವ ಸಿದ್ಧತೆ ಈ ಕುರಿತು ಮೈಸೂರು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಾದ ಕೆ.ಹೆಚ್. ರವಿ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ–ದಿಗ್ವಿಜಯ್ .ಬಿ., 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ನರಸಿಂಹಲು ವಡವಟ್ಟಿ–ಸ್ಯಾಕ್ಸೋಫೋನ್ ವಾದನ, 8.30 ರಂಗಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಯು. ಶ್ರೀನಿವಾಸ್–ಮ್ಯಾಂಡೋಲಿನ್ ವಾದನ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು

■ **ಶ್ರೀ ಉತ್ತರಾದಿ ಮಠ ರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ, ಬೆಂಗಳೂರು, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ** : ಪತಂಜಲಿ ಯೋಗ ಸೂತ್ರ ಮತ್ತು ಚರಕ ಸಂಹಿತೆ ಪಾರಾಯಣ – ಜ್ಞಾನಯಜ್ಞ, ಉಪಸ್ಥಿತರು : ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಪಾದಂಗಳವರು, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಅಧ್ಯಕ್ಷತೆ : ಕರ್ನಾಟಕ ಸಂಸ್ಕೃತ ವಿವಿ ಕುಲಪತಿ ಡಾ. ಎಸ್. ಅಹಲ್ಯ, ಮುಖ್ಯ ಅತಿಥಿಗಳು : ಪ್ರಾಚಾರ್ಯರಾದ ಡಾ. ಶ್ರೀವತ್ಸ, ಡಾ. ಕೃಷ್ಣಮೂರ್ತಿ, ಸ್ಥಾಯಿ ವೈದ್ಯಾಧಿಕಾರಿ ಡಾ. ಪೂರ್ಣಿಮ, ನಿವೃತ್ತ ಜಂಟಿ ನಿರ್ದೇಶಕರಾದ ಡಾ. ಆಂಜನೇಯಮೂರ್ತಿ, ಡಾ. ಎಸ್.ಜಿ. ಮಂಗಳಗಿ, ಸಹಾಯಕ ನಿರ್ದೇಶಕ ಡಾ. ಲಕ್ಷ್ಮೀನಾರಾಯಣ ಶೆಣೈ, ಸ್ಥಳ: ಉತ್ತರಾದಿ ಮಠ, ರೋಗ ಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಉತ್ತರಾದಿ ಮಠದ ರಸ್ತೆ, ಖಿಲ್ಲೆ ಮೊಹಲ್ಲಾ, ಮಧ್ಯಾಹ್ನ 2 ರಿಂದ.

■ **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ:** ಅಧಿಕ ಮಾಸೋತ್ಸವ, ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮ ತೀರ್ಥ ಶ್ರೀಪಾದಂಗಳವರ 33 ದಿನಗಳ ಮೈಸೂರು ದಿಗ್ವಿಜಯ–2026, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದ್ವಾನ್ ಅನಂತರಾಜ್ ಮಿಸ್ತ್ರಿ ಮತ್ತು ವಿದುಷಿ ಶ್ರೀಮತಿ ದಿವ್ಯಾ ಗಿರಿಧರ್ ಅವರಿಂದ ದಾಸ ಲಹರಿ ಜುಗಲ್‌ಬಂದಿ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ,ಅಗ್ರಹಾರ, ಸಂಜೆ 5.30ಕ್ಕೆ.

■ **ಸಪಸ ಸಂಗೀತ ವಿದ್ಯಾಲಯ** : ಹೆಸರಾಂತ ಹಿನ್ನಲೆ ಗಾಯಕ ಪುರುಷೋತ್ತಮ ಕಿರಗಸೂರು ಅವರಿಂದ ಭಾವಗೀತೆಗಳ ಕಾರ್ಯಾಗಾರ, ಸ್ಥಳ: ಸಪಸ ಸಂಗೀತ ಶಾಲೆ, ಗಾನಭಾರತಿ ಹತ್ತಿರ, ಕುವೆಂಪುನಗರ, ಬೆಳಗ್ಗೆ 11.30 ರಿಂದ ಸಂಜೆ 5 ರಿಂದ.

ಮೈಸೂರು ನಗರದ ಅಂದಗೆಡಿಸುತ್ತಿವೆ ಅನಧಿಕೃತ ಜಾಹೀರಾತು ಫಲಕ–ಫ್ಲೆಕ್ಸ್‌ಗಳು

- ಪೋಸ್ಟರ್, ಫ್ಲೆಕ್ಸ್, ಬ್ಯಾನರ್ ಸೇರಿದಂತೆ ವಿವಿಧ ರೂಪದಲ್ಲಿ ಕಂಡ ಕಂಡಲ್ಲಿ ರಾರಾಜಿಸುತ್ತಿರುವ ಪ್ರಚಾರ ಸಾಮಗ್ರಿಗಳು
- ಯಾವುದೇ ತೆರಿಗೆ ಇಲ್ಲದೆ ಪುಕ್ಕಟೆ ಪ್ರಚಾರ
- ಪಾಲಿಕೆ ಅಧಿಕಾರಿ ವರ್ಗದ ವೈಫಲ್ಯಕ್ಕೆ ಸಾಕ್ಷಿ; ನಾಗರಿಕರ ಆಕ್ರೋಶ

ಮೈಸೂರು,ಮೇ 25(ಪಿಎಂ)– ಪೋಸ್ಟರ್, ಫ್ಲೆಕ್ಸ್, ಬ್ಯಾನರ್ ಸೇರಿದಂತೆ ವಿವಿಧ ರೂಪದಲ್ಲಿ ಅನಧಿಕೃತ ಜಾಹೀರಾತುಗಳು ಮೈಸೂರು ನಗರದ ರಸ್ತೆಬದಿ ಮರಗಳು, ವಿದ್ಯುತ್ ಕಂಬಗಳು, ಉದ್ಯಾನಗಳು, ಕಾಂಪೌಂಡ್, ಗೋಡೆಗಳು, ಪಾಲಿಕೆಯ ಮಾರ್ಗಸೂಚಿ ಫಲಕಗಳು, ಪ್ರಯಾಣಿಕರ ಬಸ್ ತಂಗುದಾಣಗಳೂ ಸೇರಿದಂತೆ ಕಂಡ ಕಂಡಲ್ಲಿ ರಾರಾಜಿಸುತ್ತಿದ್ದು, ಇಂತಹ ಕೃತ್ಯದಿಂದ ನಗರದ ಅಂದಗೆಡಿಸಲಾಗುತ್ತಿದೆ.

ಹೀಗೆ ಯಾವುದೇ ತೆರಿಗೆ ಇಲ್ಲದೇ ಪುಕ್ಕಟೆಯಾಗಿ ಬೀಕಾಬಿಟ್ಟಿ ಪ್ರಚಾರ ಪಡೆಯುತ್ತಿದ್ದರೂ ಮೈಸೂರು ಮಹಾನಗರ ಪಾಲಿಕೆ ಮಾತ್ರ ಕಣ್ಮುಚ್ಚಿ ಕುಳಿತಿದೆ. ಪಾಲಿಕೆಯ ಈ ನಿರ್ಲಕ್ಷ್ಯಕ್ಕೆ ಪ್ರಜ್ಞಾವಂತ ನಾಗರಿಕರು ಆಕ್ರೋಶ ವ್ಯಕ್ತಪಡಿಸಿದ್ದು, ಸ್ಥಳೀಯ ಆಡಳಿತಕ್ಕೆ ನಗರದ ಅಂದಗೆಡುತ್ತಿರುವ ಬಗ್ಗೆ ಯಾವುದೇ ಚಿಂತೆಯೇ ಇಲ್ಲವೆ ಎಂದು ಕಟುವಾಗಿ ಟೀಕಿಸಿದ್ದಾರೆ.

ಖಾಸಗಿ ಶಾಲಾ ಕಾಲೇಜುಗಳ ಪ್ರವೇಶಾತಿ, ಪಿಜಿ ಸೌಲಭ್ಯ, ಉದ್ಯೋಗ, ಸಿನಿಮಾ, ಸಾಲಸೌಲಭ್ಯ ಸೇರಿದಂತೆ ನಾನಾ ಬಗೆಯ ವ್ಯಾಣಿಜ್ಯ ಜಾಹೀರಾತುಗಳು ಪೋಸ್ಟರ್, ಫ್ಲೆಕ್ಸ್, ಬ್ಯಾನರ್ ರೂಪದಲ್ಲಿ ಅನಧಿಕೃತವಾಗಿ ಎಲ್ಲೆಂದರಲ್ಲಿ ರಾರಾಜಿಸುವಂತಾಗಿದೆ. ಸಿಕ್ಕ ಸಿಕ್ಕ ಕಾಂಪೌಂಡ್, ವಿವಿಧ ಕಚೇರಿ ಗೋಡೆ, ವಿದ್ಯುತ್ ಕಂಬ, ಟ್ರಾಫಿಕ್ ಸಿಗ್ನಲ್ ಕಂಬ, ಪಾಲಿಕೆ ಅಳವಡಿಸಿರುವ ಆಯಾ ಪ್ರದೇಶದ ಮಾಹಿತಿ ಫಲಕವನ್ನೂ ಬಿಡದೇ ಪ್ರತಿನಿತ್ಯ ಒಂದಿಲ್ಲೊಂದು ಪ್ರಚಾರ ಸಾಮಗ್ರಿ ಅಂಟಿಸಲಾಗುತ್ತಿದೆ.



ವಾಲ್ಮೀಕಿ ರಸ್ತೆಯ ಮಹಾರಾಣಿ ವಾಣಿಜ್ಯ ಕಾಲೇಜು ಸಮೀಪದ ಪ್ರಯಾಣಿಕರ ಬಸ್ ತಂಗುದಾಣವು ಅನಧಿಕೃತ ಜಾಹೀರಾತು ಪೋಸ್ಟರ್‌ಗಳಿಂದ ಅಂದಗೆಟ್ಟಿರುವುದು.



ದೇವರಾಜ ಅರಸು ರಸ್ತೆಯ ಫುಟ್‌ಪಾತ್‌ನಲ್ಲಿ ಮಳಿಗೆದಾರರು ಇಟ್ಟಿರುವ ಅನಧಿಕೃತ ಜಾಹೀರಾತು ಫಲಕ ಹಾಗೂ ಅಲ್ಲೇ ಸಮೀಪದಲ್ಲೇ ವಿದ್ಯುತ್ ಕಂಬಕ್ಕೆ ಬ್ಯಾನರ್ ಅಳವಡಿಸಿರುವುದು.



ಮೈಸೂರಿನ ಜೆಎಲ್‌ಬಿ ರಸ್ತೆಯ ಜಾವಗಲ್ ಶ್ರೀನಾಥ್ ವೃತ್ತದಲ್ಲಿ ಪಾಲಿಕೆ ಮಾಹಿತಿ ಫಲಕಕ್ಕೆ ಪೋಸ್ಟರ್ ಅಂಟಿಸಿರುವುದನ್ನು ಕಾಣಬಹುದು.

ಯಾವುದೇ ವ್ಯಕ್ತಿ ಅಥವಾ ಸಂಸ್ಥೆ, ಇಲ್ಲವೇ ಸಂಘಗಳು ತಮ್ಮ ಜಾಹೀರಾತುಗಳನ್ನು ಪಾಲಿಕೆ ವ್ಯಾಪ್ತಿಯಲ್ಲಿ ಪೋಸ್ಟರ್, ಬಂಟಿಂಗ್ಸ್, ಭಿತ್ತಿಪತ್ರ ಸೇರಿದಂತೆ ವಿವಿಧ ಮಾದರಿಯಲ್ಲಿ ಪ್ರದರ್ಶಿಸಲು ಅವಕಾಶ ಇಲ್ಲ. ಅದಾಗ್ಯೂ ನಿರಾತಂಕವಾಗಿ ಪ್ರಚಾರ ಸಾಮಗ್ರಿ ಅಂಟಿಸಲಾಗುತ್ತಿದ್ದು, ಮೈಸೂರು ಮಹಾನಗರ ಪಾಲಿಕೆ ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಮೌನಕ್ಕೆ ಶರಣಾಗಿರುವುದೇ ಇಂತಹ ಅವ್ಯವಸ್ಥೆಗೆ ಕಾರಣ ಎಂಬುದು ಸಾರ್ವಜನಿಕರ ಆರೋಪವಾಗಿದೆ.

ನಗರದ ಅಂದಗೆಡಿಸುವುದಲ್ಲದೆ, ಯಾವುದೇ ತೆರಿಗೆ ಇಲ್ಲದೆ ಪುಕ್ಕಟೆ ಪ್ರಚಾರ ಪಡೆಯುತ್ತಿರುವ ಇಂತಹ ಜಾಹೀರಾತು ವಿರುದ್ಧ ಪಾಲಿಕೆ ಯಾವುದೇ ಗಂಭೀರ ಕ್ರಮ ಕೈಗೊಳ್ಳದೇ ಕಣ್ಮುಚ್ಚಿ ಕುಳಿತಿದೆ. ಪಾಲಿಕೆ ನಿಜಕ್ಕೂ ಪ್ರಯತ್ನಿಸಿದರೆ ಇಂತಹ ಅನಧಿಕೃತ ಜಾಹೀರಾತುಗಳಿಗೆ ಕಡಿವಾಣ ಹಾಕಬಹುದು. ಆದರೆ, ಪಾಲಿಕೆಯವರಿಗೆ ಈ ಬಗ್ಗೆ ಯಾವುದೇ ಕಾಳಜಿ ಇಲ್ಲವೆಂದು ನಾಗರಿಕರು ಆರೋಪಿಸಿದ್ದಾರೆ. ದಂಡಾಸ್ತ್ರ ಪ್ರಯೋಗದಿಂದ ಈ ರೀತಿಯ ಅನಧಿಕೃತ ಜಾಹೀರಾತುಗಳಿಗೆ ಕಡಿವಾಣ ಹಾಕುವ ಮೂಲಕ ನಗರದ ಸೌಂದರ್ಯ ಕಾಪಾಡಬಹುದು. ಈ ನಿಟ್ಟಿನಲ್ಲಿ ಕ್ರಮಕ್ಕೆ ಮುಂದಾಗುತ್ತಿಲ್ಲ ಎಂದು ಜನತೆ ಕಿಡಿಕಾರುತ್ತಾರೆ.

ಕ್ರಮ ಕಷ್ಟವೇನಲ್ಲ: ಅನುಮತಿ ಇಲ್ಲದೇ ಅನಧಿಕೃತ ಪ್ರಚಾರ ಸಾಮಗ್ರಿ ಅಳವಡಿಸುವವರ ವಿರುದ್ಧ ಕ್ರಮ ಕಷ್ಟವೇನಲ್ಲ. ಅವರು ಅಳವಡಿಸುವ ಪ್ರಚಾರ ಸಾಮಗ್ರಿಯಲ್ಲೇ ಪೂರ್ಣ ವಿವರ ಇರುವಾಗ ಕಾನೂನು ಕ್ರಮ ಕೈಗೊಂಡು ದಂಡ ವಿಧಿಸುವುದು ಕಷ್ಟದ ಕೆಲಸವಲ್ಲ. ಆಯಾ ವಲಯ ಕಚೇರಿ ವ್ಯಾಪ್ತಿಯಲ್ಲಿ ಪರಿಶೀಲನೆ ಕೈಗೊಂಡು ಅನಧಿಕೃತ ಪ್ರಚಾರ ಸಾಮಗ್ರಿ ಅಂಟಿಸುವವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬಹುದು. ಮುಲಾಜಿಲ್ಲದೆ ಬಿಗಿ ಕ್ರಮ ವಹಿಸುವಲ್ಲಿ ಪಾಲಿಕೆಯವರಿಗೆ ಮುಜುಗರವೇ ಎಂದು ಪ್ರಜ್ಞಾವಂತ ನಾಗರಿಕರು ವ್ಯಂಗ್ಯವಾಗಿ ಪ್ರಶ್ನಿಸಿದ್ದಾರೆ. ಅಲ್ಲದೆ, ಇದರಲ್ಲಿ ಏನಾದರೂ ಮಾಮೂಲಿನಂತಹ ಅಕ್ರಮ ನಡೆಯುತ್ತಿದೆಯೇ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಯಾವುದೇ ರಾಜಕೀಯ ಸಮಾವೇಶ, ಕಾರ್ಯಕ್ರಮಗಳ ಸಂಬಂಧ ಅಳವಡಿಸುವ ಫ್ಲೆಕ್ಸ್, ಬ್ಯಾನರ್ಸ್, ಬಂಟಿಂಗ್ಸ್‌ಗಳನ್ನು ಕಾರ್ಯಕ್ರಮ ಮುಗಿದ ನಂತರ ಪಾಲಿಕೆಯಿಂದ ತೆರವು ಮಾಡಲಾಗುತ್ತಿದೆ. ಆದರೆ ಖಾಸಗಿ ಶಾಲಾ–ಕಾಲೇಜುಗಳ ಪ್ರವೇಶಾತಿ, ಪಿಜಿ ಸೌಲಭ್ಯ, ಉದ್ಯೋಗ, ಸಿನಿಮಾ, ಸಾಲಸೌಲಭ್ಯ ಸೇರಿದಂತೆ ನಾನಾ ಬಗೆಯ ವ್ಯಾಣಿಜ್ಯ ಜಾಹೀರಾತುಗಳು ಅನಧಿಕೃತವಾಗಿ ರಾರಾಜಿಸುತ್ತಿದ್ದರೂ ಅವುಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ.

ಮೈಸೂರು ನಗರದ ಕೆಆರ್ ವೃತ್ತದಲ್ಲಿರುವ ಫುಟ್‌ಪಾತ್‌ನ ಅಲಂಕಾರಿಕ ಕಂಬಗಳನ್ನು ಈ ಅನಧಿಕೃತ ಪ್ರಚಾರ ಸಾಮಗ್ರಿಗಳು ಬಿಟ್ಟಿಲ್ಲ. ಅವುಗಳಿಗೂ ಅಲ್ಲಲ್ಲಿ ಪೋಸ್ಟರ್ ಅಂಟಿಸಲಾಗಿದೆ. ಇದು ಕೇವಲ ಸ್ಯಾಂಪಲ್ ಆಗಿದ್ದು, ಹುಡುಕುತ್ತಾ ಹೊರಟರೆ ಅಲ್ಲಲ್ಲಿ ಈ ಅನಧಿಕೃತ ಪ್ರಚಾರ ಸಾಮಗ್ರಿಗಳ ಮಹಾಪೂರವೇ ಕಾಣಸಿಗುತ್ತದೆ.

ಮೈಸೂರಿನ ವಾಲ್ಮೀಕಿ ರಸ್ತೆಯ ಬಸ್ ಪ್ರಯಾಣಿಕರ ತಂಗುದಾಣವು ಅನಧಿಕೃತ ಜಾಹೀರಾತುಗಳಿಂದ ತುಂಬಿ ಹೋಗಿದ್ದು, ಆ ಮೂಲಕ ಅಧಿಕೃತ ಜಾಹೀರಾತುಗಳನ್ನೇ ಅವುಗಳು ಮರೆಮಾಚಿವೆ. ಹೀಗೆ ಇಡೀ ತಂಗುದಾಣ ಅಂದಗೆಟ್ಟು ಹೋಗಿದ್ದು, ಈ ದುಸ್ಥಿತಿ ಇಲ್ಲಿಗೆ ಮಾತ್ರ ಸೀಮಿತವಲ್ಲ. ನಗರದ ಬಹುತೇಕ ಬಸ್ ಪ್ರಯಾಣಿಕ ತಂಗುದಾಣಗಳು ಇಂತಹದ್ದೇ ದುಸ್ಥಿತಿಯಲ್ಲಿ ಸಿಲುಕಿವೆ. ಇನ್ನೂ ಈ ತಂಗುದಾಣಗಳಂತೂ ನಾಗರಿಕರು ಕೂರುವುದಕ್ಕೆ ಯೋಗ್ಯವಾಗಿಲ್ಲ ಎಂಬುದು ಬೇರೆ ಒತ್ತಿ ಹೇಳಬೇಕಿಲ್ಲ.

ಜೆಎಲ್‌ಬಿ ರಸ್ತೆ ಹಾಗೂ ಕೃಷ್ಣವಿಲಾಸ ರಸ್ತೆ ಜಂಕ್ಷನ್ ಆದ ಜಾವಗಲ್ ಶ್ರೀನಾಥ್ ವೃತ್ತದ ಸಮೀಪ ಪಾಲಿಕೆಯ ಮಾಹಿತಿ ಫಲಕಕ್ಕೆ ಬೇಸಿಗೆ ಶಿಬಿರದ ಅನಧಿಕೃತ ಪೋಸ್ಟರ್ ಅಂಟಿಸಿದ್ದು, ಅದಕ್ಕೂ ಮುನ್ನ ಅಲ್ಲಿಯೇ ಮತ್ತೊಂದು ಪೋಸ್ಟರ್ ಅಂಟಿಸಲಾಗಿದೆ. ಆ ಮುಖಾಂತರ ಪಾಲಿಕೆ ಫಲಕದ ಮೂಲಕ ನಾಗರಿಕರ ಅನುಕೂಲಕ್ಕಾಗಿ ನೀಡಿದ್ದ ಮಾಹಿತಿಯೇ ಇಲ್ಲಿ ಕಾಣದಾಗಿದೆ. ಈಗಾಗಲೇ ಹೇಳಿದಂತೆ ಇಂತಹ ಅವಸ್ಥೆ ಇಲ್ಲಿಗೆ ಮಾತ್ರ ಸೀಮಿತವಲ್ಲ. ನಗರದಲ್ಲಿ ಇಂತಹ ಹಾವಳಿ ವ್ಯಾಪಕವಾಗಿಯೇ ಇದೆ.

ಮೊಳೆ ಹೊಡೆಯುವುದರಿಂದ ಮರಗಳು ನರಳುತ್ತವೆ..!



"ಕಾನೂನು ಕ್ರಮವೇ ಅನಧಿಕೃತ ಜಾಹೀರಾತು ತಡೆಗೆ ಪರಿಹಾರ. ದಂಡ ಹಾಕಿದರೆ ಮಾತ್ರವೇ ಅವುಗಳಿಗೆ ತಡೆಯೊಡ್ಡಲು ಸಾಧ್ಯ. ಆದರೆ ನಗರ ಪಾಲಿಕೆ ಹಾಗೂ ಅರಣ್ಯ ಇಲಾಖೆ ಸರಿಯಾದ ಗಮನ ನೀಡುತ್ತಿಲ್ಲ. ಮರಗಳ ಸಂರಕ್ಷಣೆ ವಿಚಾರ ಅರಣ್ಯ ಇಲಾಖೆಗೆ ಬರುವ ಹಿನ್ನೆಲೆಯಲ್ಲಿ ಮರಗಳಿಗೆ ಮೊಳೆ ಹೊಡೆಯುವುದರ ವಿರುದ್ಧ ಸದರಿ ಇಲಾಖೆ ಕಟ್ಟುನಿಟ್ಟಿನ ಕ್ರಮ ವಹಿಸಬೇಕು. ಮರಗಳಿಗೆ ಮೊಳೆಯೊಡೆದು ಪ್ರಚಾರ ಸಾಮಗ್ರಿ ಅಳವಡಿಸುವ ಜೊತೆಗೆ ಲೈಟಿಂಗ್ಸ್ ಮಾಡುವುದೂ ನಡೆಯುತ್ತಿದೆ. ಇದರಿಂದ ಮರಗಳಲ್ಲಿ ವಾಸಿಸುವ ಪಕ್ಷಿಗಳು ಹಾಗೂ ಕ್ರಿಮಿಕೀಟಗಳಿಗೆ ಸಮಸ್ಯೆಯಾಗಲಿದೆ. ಮರಗಳಿಗೆ ಮೊಳೆ ಹೊಡೆಯುವುದರಿಂದ ಸದರಿ ಭಾಗದಲ್ಲಿ ಸಡಿಲಿಕೆ ಉಂಟಾಗಲಿದೆ. ಹೆಚ್ಚಾದಲ್ಲಿ ಆ ಭಾಗಕ್ಕೆ ಹಾನಿಯಾಗಿ ಮರ ರಸ್ತೆಗೆ ಉರುಳುವ ಸಾಧ್ಯತೆಯೂ ಇರುತ್ತದೆ. ಕೊನೆಗೆ ಮರದ ಜೀವಕ್ಕೇ ಕುತ್ತಾಗಲಿದೆ.

–ಕೆ.ವಿ.ಭಾನು ಪ್ರಶಾಂತ್, ಸಂಚಾಲಕರು, ಪರಿಸರಕ್ಕಾಗಿ ನಾವು ಹಾಗೂ ಎಂಜಿಪಿ, ಮೈಸೂರು.

ಜಾಹೀರಾತು ಗೀಳಿಗೆ ಮರಗಳಿಗೆ ಮೊಳೆ ಪೆಟ್ಟು

ಮೈಸೂರಿನ ಯಾದವಗಿರಿಯಲ್ಲಿರುವ ಖಾಸಗಿ ಪ್ರಿಸ್ಕೂಲ್‌ವೊಂದರ ಪೋಸ್ಟರ್ ಅನಧಿಕೃತವಾಗಿ ನಗರದ ವಿವಿಧ ರಸ್ತೆಗಳಲ್ಲಿ ರಾರಾಜಿಸುತ್ತಿದೆ. ದುರಂತವೆಂದರೆ ಈ ಅನಧಿಕೃತ ಪೋಸ್ಟರ್‌ಗಳನ್ನು ರಸ್ತೆಬದಿ ಮರಗಳಿಗೇ ಮೊಳೆ ಹೊಡೆದು ಅಳವಡಿಸಲಾಗಿದೆ. ಸಯ್ಯಾಜಿ ರಾವ್ ರಸ್ತೆ, ವಾಲ್ಮೀಕಿ ರಸ್ತೆ, ಕೆಆರ್‌ಎಸ್ ರಸ್ತೆ, ವಿವಿ ಪುರಂನ ಟೆಂಪಲ್ ರಸ್ತೆಯಲ್ಲಿ ಮರಗಳಿಗೆ ಮೊಳೆ ಹೊಡೆದು ಈ ಅನಧಿಕೃತ ಜಾಹೀರಾತು ಅಳವಡಿಸಲಾಗಿದೆ. ಈ ಪ್ರಿಸ್ಕೂಲ್‌ನವರು ಇಂತಹ ಪ್ರಚಾರದ ಹುಚ್ಚಿಗೆ ಮರಗಳಿಗೆ ಮೊಳೆ ಹೊಡೆಯಲಾಗಿದ್ದು, ಈ ಬಗ್ಗೆ ನಾಗರಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಲ್ಲದೆ, ಇದರ ವಿರುದ್ಧ ಗಂಭೀರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಎಲ್ಲಿ ಹೋದರು ಪರಿಸರವಾದಿಗಳು...

ಯಾದವಗಿರಿಯಲ್ಲಿರುವ ಇಂಟರ್‌ನ್ಯಾಷನಲ್ ಪ್ರಿಸ್ಕೂಲ್‌ನ ಪ್ರವೇಶಾತಿ ಆರಂಭ ಸಂಬಂಧ ನಗರದ ವಿವಿಧ ರಸ್ತೆಗಳಲ್ಲಿ ಮರಗಳಿಗೆ ಮೊಳೆಯೊಡೆದು ಅನಧಿಕೃತ ಜಾಹೀರಾತು ಅಳವಡಿಸಲಾಗಿದೆ. ಸಾಕಷ್ಟು ಮರಗಳಿಗೆ ಹೀಗೆ ಮೊಳೆ ಹೊಡೆದು ಜಾಹೀರಾತು ಹಾಕಿದ್ದೂ ಏಕೆ ಯಾವ ಪರಿಸರ ವಾದಿಗಳ ಗಮನಕ್ಕೂ ಇದು ಬಂದಿಲ್ಲ. ಈ ವಿಚಾರದಲ್ಲಿ ಪರಿಸರವಾದಿಗಳು ಎಲ್ಲಿ ಹೋದರು ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ.



ಕಠಿಣ ಕ್ರಮದೊಂದಿಗೆ ದಂಡ ವಿಧಿಸಲಾಗುವುದು...



"ಅಧಿಕೃತ ಪೋಸ್ಟರ್, ಫ್ಲೆಕ್ಸ್ ರೂಪದ ಜಾಹೀರಾತುಗಳ ವಿರುದ್ಧ ಪರಿಶೀಲಿಸಿ ಕಠಿಣ ಕ್ರಮ ಕೈಗೊಳ್ಳಲಾಗುವುದು. ದಂಡ ವಿಧಿಸುವಂತಹ ಬಿಗಿ ಕ್ರಮ ವಹಿಸುವ ಮೂಲಕ ಇವುಗಳಿಗೆ ಕಡಿವಾಣ ಹಾಕಲಾಗುವುದು. ಇಂತಹ ವಿಚಾರದಲ್ಲಿ ಸಾರ್ವಜನಿಕರ ಸಹಕಾರ ಸಹ ಮುಖ್ಯ.

-ಶೇಖ್ ತನ್ವೀರ್ ಆಸಿಫ್, ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ.


ಮರಕ್ಕೆ ಮೊಳೆ ಹೊಡೆದು ಇಂಟರ್‌ನ್ಯಾಷನಲ್ ಪ್ರಿಸ್ಕೂಲ್ ಪ್ರವೇಶಾತಿಯ ಅನಧಿಕೃತ ಜಾಹೀರಾತು ಫಲಕ ಅಳವಡಿಸಿರುವುದು.

ಫುಟ್‌ಪಾತ್ ಅತಿಕ್ರಮಿಸಿ ಉತ್ಪನ್ನ ಪ್ರಚಾರ...

ಮೈಸೂರು ನಗರದ ಹೃದಯಭಾಗವೂ ಸೇರಿದಂತೆ ವಿವಿಧೆಡೆ ಬಹುತೇಕ ಮಳಿಗೆದಾರರು ಮಳಿಗೆ ಮುಂದಿನ ಫುಟ್‌ಪಾತ್ ಅತಿಕ್ರಮಿಸಿ ಅನಧಿಕೃತವಾಗಿ ತಮ್ಮ ಮಳಿಗೆಯ ಉತ್ಪನ್ನಗಳ ಪ್ರಚಾರಕ್ಕಾಗಿ ಜಾಹೀರಾತು ಫಲಕಗಳನ್ನು ಅಳವಡಿಸಿರುವುದರ ವಿರುದ್ಧ ಕ್ರಮ ಜರುಗಿಸುವ ಧೈರ್ಯ ಇಲ್ಲ. ಇದರಿಂದ ಪಾದಚಾರಿಗಳಿಗೆ ತೊಂದರೆ ಉಂಟಾಗುತ್ತಿದ್ದು, ಕೆಲವೆಡೆ ವಾಹನ ಸವಾರರಿಗೂ ರಸ್ತೆ ಸರಿಯಾಗಿ ಕಾಣದಂತೆ ಜಾಹೀರಾತು ಫಲಕ ಅಳವಡಿಸಿರುವ ಕಾರಣ ಸುಗಮ ಸಂಚಾರಕ್ಕೂ ತೊಡಕುಂಟಾಗುತ್ತಿದೆ.

ಬೇಸಿಗೆ ರಜೆಗೆ ಬಂದಿದ್ದ ಇಬ್ಬರು ಮಕ್ಕಳು ಕೃಷಿ ಹೊಂಡದಲ್ಲಿ ಮುಳುಗಿ ಸಾವು!

ಕೋಲಾರ, ಮೇ 25: ಜಿಲ್ಲೆಯಲ್ಲಿ ಮತ್ತೊಂದು ಹೃದಯವಿದ್ರಾವಕ ಘಟನೆ ನಡೆದಿದೆ. ಬೇಸಿಗೆ ರಜೆಗೆಂದು ತಾತನ ಮನೆಗೆ ಬಂದಿದ್ದ ಇಬ್ಬರು ಪುಟ್ಟ ಮಕ್ಕಳು ಕೃಷಿ ಹೊಂಡದಲ್ಲಿ ಬಿದ್ದು ಸಾವನ್ನಪ್ಪಿದ್ದಾರೆ. ಜಿಲ್ಲೆಯ ಮಾಲೂರು ತಾಲೂಕಿನ ಕೊತ್ತೂರು ಗ್ರಾಮದಲ್ಲಿ ಈ ದುರಂತ ಸಂಭವಿಸಿದೆ.

ಮೃತರನ್ನು 12 ವರ್ಷದ ದೇವಕಿರಣ್ ಹಾಗೂ 9 ವರ್ಷದ ವಿನುತ್ ಎಂದು ಗುರುತಿಸಲಾಗಿದೆ. ಇಬ್ಬರೂ ವಸತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ರಜೆ ಹಿನ್ನೆಲೆ ತಾತನ ಮನೆಗೆ ಬಂದಿದ್ದರು. ಆಟವಾಡುವ ವೇಳೆ ಕೃಷಿ ಹೊಂಡದ ಬಳಿ ಕಾಲು ಜಾರಿ ಬಿದ್ದ ಪರಿಣಾಮ ಇಬ್ಬರೂ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಮಾಸ್ತಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಮಕ್ಕಳ ಅಕಾಲಿಕ ಸಾವಿನಿಂದ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ಗ್ರಾಮದಲ್ಲಿ ಶೋಕ ಮಡುಗಟ್ಟಿದೆ.

ಗಮನಾರ್ಹ ಸಂಗತಿ ಎಂದರೆ, ಕಳೆದ ಕೇವಲ 15 ದಿನಗಳಲ್ಲಿ ಕೃಷಿ ಹೊಂಡಕ್ಕೆ ಬಿದ್ದು ಮೃತಪಟ್ಟವರ ಸಂಖ್ಯೆ 9ಕ್ಕೆ ಏರಿಕೆಯಾಗಿದೆ. ಕೃಷಿ ಹೊಂಡಗಳಿಗೆ ಕಡ್ಡಾಯವಾಗಿ ತಂತಿ ಬೇಲಿ ಅಳವಡಿಸಿ ಸುರಕ್ಷತಾ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸೂಚನೆ ನೀಡಿದ್ದರೂ, ಮತ್ತೊಂದು ಅಮಾಯಕ ಜೀವ ಬಲಿಯಾಗಿರುವುದು ಆತಂಕ ಹೆಚ್ಚಿಸಿದೆ.

ಐಪಿಎಲ್: ಇಂದು ಮೊದಲ ಕ್ವಾಲಿಫೈಯರ್ ಪಂದ್ಯ

ಹಾಲಿ ಚಾಂಪಿಯನ್ ಆರ್‌ಸಿಬಿ–ಗುಜರಾತ್ ಮುಖಾಮುಖಿ

ಧರ್ಮಶಾಲಾ, ಮೇ 25– ಐಪಿಎಲ್ 19ನೇ ಆವೃತ್ತಿಯ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು, ಗುಜರಾತ್ ಟೈಟಾನ್ಸ್ ಮುಖಾಮುಖಿಯಾಗಲಿವೆ.

ಮೇ 26ರಂದು ಸಂಜೆ 7.30ಕ್ಕೆ ನಡೆಯುವ ಪಂದ್ಯಕ್ಕೆ ಇಲ್ಲಿನ ಹಿಮಾಚಲ ಪ್ರದೇಶ ಕ್ರಿಕೆಟ್ ಅಸೋಸಿಯೇಷನ್ ಕ್ರೀಡಾಂಗಣದಲ್ಲಿ ವೇದಿಕೆ ಸಿದ್ಧವಾಗಿದ್ದು, ಉಭಯ ತಂಡಗಳು ಫೈನಲ್ ತಲುಪಲು ಭಾರೀ ಪೈಪೋಟಿ ನಡೆಸಲಿವೆ.

ಇಲ್ಲಿನ ಕ್ರೀಡಾಂಗಣದಲ್ಲಿ ರನ್ ಹೊಳೆಯೇ ಹರಿಯಬಹುದೆಂಬ ನಿರೀಕ್ಷೆ ಇದ್ದು, ಮೊದಲು ಬ್ಯಾಟಿಂಗ್ ಮಾಡಿದ ತಂಡಗಳೇ ಹೆಚ್ಚು ಜಯಗಳಿಸಿವೆಯಾದರೂ, ಈ ಬಾರಿ ಪರಿಸ್ಥಿತಿ ಭಿನ್ನವಾಗಿದ್ದು ಚೇಸಿಂಗ್ ಮಾಡುವವರಿಗೆ ಹೆಚ್ಚು ಅನುಕೂಲ ಎಂದು ಹೇಳಲಾಗುತ್ತಿದೆ.

ಲೀಗ್ ಹಂತದಲ್ಲಿ ಮುಖಾಮುಖಿಯಾಗಿದ್ದ ಈ 2 ತಂಡಗಳು ತಮ್ಮ ತವರು ಮೈದಾನದಲ್ಲಿ ಎದುರಾಳಿಗಳನ್ನು ಸೋಲಿಸಿದ್ದವು. ಬೆಂಗಳೂರಿನಲ್ಲಿ ನಡೆದ ಪಂದ್ಯದಲ್ಲಿ ಆರ್‌ಸಿಬಿ 5 ವಿಕೆಟ್‌ಗಳಿಂದ ಜಯಗಳಿಸಿದ್ದರೇ, ಅಹಮದಾಬಾದ್‌ನಲ್ಲಿ ನಡೆದ ಪಂದ್ಯದಲ್ಲಿ ಗುಜರಾತ್ 4 ವಿಕೆಟ್‌ಗಳಿಂದ ಜಯಗಳಿಸಿತ್ತು. ಇದುವರೆಗೂ ಉಭಯ ತಂಡಗಳು 8 ಬಾರಿ ಮುಖಾಮುಖಿಯಾಗಿದ್ದು, ತಲಾ 4 ಬಾರಿ ಗೆಲುವು ಸಾಧಿಸಿವೆ.

ಹಾಲಿ ಚಾಂಪಿಯನ್ ಆರ್‌ಸಿಬಿ ಈ ಬಾರಿ ಉತ್ತಮ ಲಯದಲ್ಲಿದ್ದು, ತಂಡದ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನ ನೀಡುತ್ತಿದ್ದಾರೆ. ಅವರಿಗೆ ರಜತ್ ಪಾಟೀದಾರ್, ದೇವದತ್ ಪಡಿಕ್ಕಲ್, ವೆಂಕಟೇಶ್ ಅಯ್ಯರ್ ಉತ್ತಮ ಸಾಥ್ ನೀಡುತ್ತಿದ್ದಾರೆ. ಮಧ್ಯಮ ಕ್ರಮಾಂಕದಲ್ಲಿ ಟಿಂ ಡೇವಿಡ್, ಜಿತೇಶ್ ಶರ್ಮಾ ಮತ್ತು ಕೃನಾಲ್ ಪಾಂಡ್ಯ ಡೆತ್ ಓವರ್‌ಗಳಲ್ಲಿ ಎದುರಾಳಿಗಳಿಗೆ ಸಿಂಹಸ್ವಪ್ನವಾಗಿದ್ದಾರೆ. ಇನ್ನು ಬೌಲಿಂಗ್‌ನಲ್ಲಿ ಭುವನೇಶ್ವರ ಕುಮಾರ್, ಜೋಶ್ ಹ್ಯಾಸಲ್‌ವುಡ್ ಉತ್ತಮ ದಾಳಿ ಸಂಘಟಿಸುತ್ತಿದ್ದಾರೆ.

ಮತ್ತೊಂದೆಡೆ ಸ್ಥಿರ ಪ್ರದರ್ಶನಕ್ಕೆ ಹೆಸರಾಗಿರುವ ಗುಜರಾತ್ ಟೈಟಾನ್ಸ್ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಸಮತೋಲನದಿಂದ ಕೂಡಿದೆ. ಆರಂಭಿಕರಾದ ನಾಯಕ ಶುಭಮನ್ ಗಿಲ್ ಮತ್ತು ಸಾಯಿ ಸುದರ್ಶನ್ ಉತ್ತಮ ಪ್ರದರ್ಶನ ಹಾಗೂ ಮಧ್ಯಮ ಕ್ರಮಾಂಕದ ಫಿನಿಶರ್‌ಗಳು ತಂಡಕ್ಕೆ ಹಲವು ಜಯ ತಂದುಕೊಟ್ಟಿದ್ದಾರೆ. ಕಗಿಸೋ ರಬಾಡಾ, ಮೊಹಮ್ಮದ್ ಸಿರಾಜ್, ಪ್ರಸಿದ್ಧ ಕೃಷ್ಣ, ರಶೀದ್ ಖಾನ್ ಅವರ ಶಿಸ್ತಿನ ಬೌಲಿಂಗ್ ದಾಳಿ ಬ್ಯಾಟರ್‌ಗಳಿಗೆ ದೊಡ್ಡ ಸವಾಲಾಗಲಿದೆ. ಒಟ್ಟಾರೆ ನಾಳಿನ ಪಂದ್ಯ ಭಾರೀ ರೋಚಕತೆಯಿಂದ ಕೂಡಿರಲಿದೆ.



ರಾಯಲ್ ಚಾಲೆಂಜರ್ಸ್ ಸಂಭಾವ್ಯ ಇಲೆವೆನ್

ರಜತ್ ಪಾಟಿದಾರ್ (ನಾಯಕ), ವೆಂಕಟೇಶ್ ಅಯ್ಯರ್/ಫಿಲ್ ಸಾಲ್ಟ್, ವಿರಾಟ್ ಕೊಹ್ಲಿ, ದೇವದತ್ ಪಡಿಕ್ಕಲ್, ಜಿತೇಶ್ ಶರ್ಮಾ (ವಿಕೆಟ್ ಕೀಪರ್), ಕೃನಾಲ್ ಪಾಂಡ್ಯ, ರೊಮಾರಿಯೊ ಶೆಫರ್ಡ್, ಭುವನೇಶ್ವರ್ ಕುಮಾರ್, ಜೋಶ್ ಹೇಜಲ್ ವುಡ್, ಸುಯಾಶ್ ಶರ್ಮಾ, ರಸಿಕ್ ಸಲಾಂ.

ಇಂಪ್ಯಾಕ್ಟ್ ಪ್ಲೇಯರ್: ಟಿಮ್ ಡೇವಿಡ್

ಗುಜರಾತ್ ಟೈಟಾನ್ಸ್ ಸಂಭಾವ್ಯ ಇಲೆವೆನ್

ಶುಭಮನ್ ಗಿಲ್ (ನಾಯಕ), ಸಾಯಿ ಸುದರ್ಶನ್, ಜೋಸ್ ಬಟ್ಲರ್ (ವಿಕೆಟ್ ಕೀಪರ್), ನಿಶಾಂತ್ ಸಿಂಧು, ವಾಷಿಂಗ್ಟನ್ ಸುಂದರ್, ಜೇಸನ್ ಹೋಲ್ಡರ್, ರಾಹುಲ್ ತೆವಾಟಿಯಾ, ರಶೀದ್ ಖಾನ್, ಕಗಿಸೊ ರಬಾಡ, ಅರ್ಷದ್ ಖಾನ್, ಮೊಹಮ್ಮದ್ ಸಿರಾಜ್.

ಇಂಪ್ಯಾಕ್ಟ್ ಪ್ಲೇಯರ್: ಪ್ರಸಿದ್ಧ್ ಕೃಷ್ಣ

ರೇಣುಕಸ್ವಾಮಿ ಕೊಲೆ ಪ್ರಕರಣ: ಜೂ.1ರಿಂದ ಬೇರೊಂದು ಕೋರ್ಟ್‌ನಲ್ಲಿ ದರ್ಶನ್ ವಿಚಾರಣೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಹಾಗೂ ಅವರ ಗೆಳತಿ ಪವಿತ್ರಾಗೌಡ ವಿರುದ್ಧ ದಾಖಲಾಗಿದ್ದ ಪ್ರಕರಣದ ವಿಚಾರಣೆಯು ಜೂನ್ 1ರಿಂದ ಬೇರೊಂದು ಕೋರ್ಟ್‌ನಲ್ಲಿ ನಡೆಯಲಿದೆ.



2024ರಲ್ಲಿ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯು ಇದುವರೆಗೂ 57ನೇ ಸಿಸಿಎಚ್ ಕೋರ್ಟ್‌ನಲ್ಲಿ ನಡೆಯುತ್ತಿತ್ತು. ಜೂನ್ 1ರಿಂದ 59ನೇ ಸಿಸಿಎಚ್ ಕೋರ್ಟ್‌ನಲ್ಲಿ ನಡೆಯಲಿದೆ.

ಒಂದು ವರ್ಷದ ಒಳಗೆ ಪ್ರಕರಣದ ವಿಚಾರಣೆ ಪೂರ್ಣಗೊಳಿಸುವಂತೆ ಸುಪ್ರೀಂ ಕೋರ್ಟ್ ಸೂಚಿಸಿದ ಬೆನ್ನಲ್ಲೇ ಪ್ರಮುಖ 60 ಸಾಕ್ಷಿಗಳ ವಿಚಾರಣೆಗೆ ಸಿದ್ಧತೆ ನಡೆದಿದೆ. ನ್ಯಾಯಾಧೀಶರಾದ ಸುಜಾತಾ ಮಡಿವಾಳಪ್ಪ ಸಾಂಬ್ರಾಣಿ ಅವರು ಪ್ರಕರಣದ ವಿಚಾರಣೆ ನಡೆಸಲಿದ್ದಾರೆ. ಸಿಟಿ ಸಿವಿಲ್ ಕೋರ್ಟ್‌ನ ಡೆಪ್ಯುಟಿ ರಿಜಿಸ್ಟ್ರಾರ್ ಈ ಕುರಿತು ಆದೇಶ ಹೊರಡಿಸಿದ್ದಾರೆ. ಸುಪ್ರೀಂ ಕೋರ್ಟ್‌ನ ಈ ಆದೇಶದ ಪ್ರತಿಯನ್ನು ದರ್ಶನ್ ಪರ ವಕೀಲರು ಸೆಷನ್ಸ್ ಕೋರ್ಟ್‌ಗೆ ಸಲ್ಲಿಸಿದ್ದಾರೆ.


ಮೇಕೆದಾಟು ಯೋಜನೆ: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿಕೆಗೆ ತಮಿಳ್ನಾಡು ತೀವ್ರ ವಿರೋಧ

ಬೆಂಗಳೂರು: ಮೇಕೆದಾಟು ಯೋಜನೆಯನ್ನು ನಿಲ್ಲಿಸುವ ಹಕ್ಕು ತಮಿಳುನಾಡು ಸರ್ಕಾರಕ್ಕೆ ಇಲ್ಲ. ಕಾವೇರಿ ಜಲ ಸಮಿತಿ ಮುಂದೆ ದೂರು ನೀಡಿದರೆ, ಸಿಡಬ್ಲ್ಯುಸಿಯವರು ಕರ್ನಾಟಕ ಸರ್ಕಾರದ ಪರವಾಗಿ ಅರ್ಜಿ ವಜಾ ಮಾಡಲಿದ್ದಾರೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಬೆಂಗಳೂರಿನಲ್ಲಿ ಮಾತನಾಡಿದ ಅವರು, ಮೇಕೆದಾಟು ಯೋಜನೆ ಬಗ್ಗೆ ನಾವು ಡಿಪಿಆರ್ ಸಿದ್ಧ ಮಾಡಿದ್ದೇವೆ. ಮೇಕೆದಾಟು ಕಚೇರಿ ತೆರೆದಿದ್ದೇವೆ, ಜಮೀನು ಗುರುತಿಸಿದ್ದೇವೆ. ಹೊಸ ಡಿಪಿಆರ್ ನೀಡುತ್ತಿದ್ದೇವೆ. ಕೇಂದ್ರ ಸರ್ಕಾರ ಅನುಮತಿ ನೀಡಿದ ಮೇಲೆ ಭೂಮಿ ಪೂಜೆ ನೆರವೇರಿಸುತ್ತೇವೆ ಎಂದರು.

ತಮಿಳುನಾಡಿನಲ್ಲಿ ಯೋಜನೆಗೆ ಭಾರೀ ವಿರೋಧ: ಮೇಕೆದಾಟು ಅಣೆಕಟ್ಟು ವಿವಾದವು ಮತ್ತೆ ಕರ್ನಾಟಕ ಮತ್ತು ತಮಿಳುನಾಡು ನಡುವಿನ ರಾಜಕೀಯ ಕಿಚ್ಚನ್ನು ಹೊತ್ತಿಸಿದೆ. ಈ ಬಾರಿ ಇದು ಮುಖ್ಯಮಂತ್ರಿ ಸಿ ಜೋಸೆಫ್ ವಿಜಯ್ ಅವರ ಹೊಸ ಸರ್ಕಾರಕ್ಕೆ ಮೊದಲ ದೊಡ್ಡ ರಾಜಕೀಯ ಸವಾಲಾಗಿ ಪರಿಣಮಿಸಿದೆ.

ಕರ್ನಾಟಕ ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ಮೇಕೆದಾಟು ಯೋಜನೆಗೆ ಸಂಬಂಧಿಸಿದ ಪರಿಷ್ಕೃತ ವಿವರವಾದ ಯೋಜನಾ ವರದಿಯನ್ನು ಶೀಘ್ರದಲ್ಲೇ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ, ಯೋಜನೆಯನ್ನು ಮುಂದುವರಿಸಲಾಗುವುದು ಎಂದು ಹೇಳಿದ ಬಳಿಕ ಈ ವಿವಾದ ಮತ್ತೆ ತೀವ್ರಗೊಂಡಿತು. ಈ ಯೋಜನೆಯನ್ನು ವಿರೋಧಿಸಲು ತಮಿಳುನಾಡಿಗೆ ಯಾವುದೇ ಹಕ್ಕಿಲ್ಲ ಎಂಬ ಹೇಳಿಕೆಯನ್ನು ಕೂಡ ಶಿವಕುಮಾರ್ ನೀಡಿದ್ದಾಗಿ ವರದಿಯಾಗಿದೆ.



ಈ ಹೇಳಿಕೆಗಳು ತಮಿಳುನಾಡಿನಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಇದಕ್ಕೆ ತೀವ್ರವಾಗಿ ಪ್ರತಿಕ್ರಿಯಿಸಿದ ಡಿಎಂಕೆ ನಾಯಕ ಕೆ ಎನ್ ನೆಹರೂ, ಡಿಕೆ ಶಿವಕುಮಾರ್ ಅವರ ಹೇಳಿಕೆಗಳು ಅವರ ಅಹಂಕಾರವನ್ನು ತೋರಿಸುತ್ತವೆ ಎಂದರು. ರಾಜ್ಯದಲ್ಲಿ ಅಧಿಕಾರ ಬದಲಾದ ನಂತರ ತಮಿಳುನಾಡಿನಲ್ಲಿ ದುರ್ಬಲ ಮೈತ್ರಿ ಸರ್ಕಾರ ಇದೆ ಎಂದು ಭಾವಿಸಿ ಕರ್ನಾಟಕ ನಾಯಕರು ಹೀಗೆ ಮಾತನಾಡುತ್ತಿದ್ದಾರೆ ಎಂದು ಆರೋಪಿಸಿದರು.

ಇಲ್ಲಿ ಕಾಂಗ್ರೆಸ್ ಪಕ್ಷವೂ ಆಡಳಿತ ಮೈತ್ರಿಯ ಭಾಗವಾಗಿರುವುದರಿಂದ ವಿರೋಧ ಎದುರಾಗುವುದಿಲ್ಲ ಎಂದು ಅವರು ಭಾವಿಸುತ್ತಿರುವಂತೆ ಕಾಣುತ್ತದೆ ಎಂದು ನೆಹರು ಹೇಳಿದರು.

ಮೇಕೆದಾಟು ಯೋಜನೆಯನ್ನು ತಮಿಳುನಾಡಿನ ವಿರುದ್ಧದ ದ್ರೋಹ ಎಂದು ಕರೆದ ಅವರು, ಈ ಜಲಾಶಯ ನಿರ್ಮಾಣವಾದರೆ ಕಾವೇರಿ ನೀರಿನ ಮೇಲೆ ಅವಲಂಬಿತವಾಗಿರುವ ತೀರ ಪ್ರದೇಶದ ರೈತರು ಭಯಭೀತರಾಗುತ್ತಾರೆ ಎಂದು ಎಚ್ಚರಿಸಿದರು. ಜೊತೆಗೆ ವಿಜಯ್ ಅವರನ್ನು ಟೀಕಿಸಿದ ಅವರು, ಮುಖ್ಯಮಂತ್ರಿ ಈಗಾದರೂ ಬಾಯಿ ತೆರೆಯುತ್ತಾರೆಯೇ ಎಂಬುದನ್ನು ಜನರು ಕಾದು ನೋಡುತ್ತಿದ್ದಾರೆ ಎಂದರು.

ತಮಿಳುನಾಡಿನ ಎಲ್ಲಾ ರಾಜಕೀಯ ಪಕ್ಷಗಳೂ ಕಾವೇರಿ ವಿಚಾರದಲ್ಲಿ ಒಂದೇ ಧ್ವನಿಯಲ್ಲಿ ನಿಂತಿವೆ ಎಂಬುದನ್ನು ಕರ್ನಾಟಕದ ಕಾಂಗ್ರೆಸ್ ಸರ್ಕಾರಕ್ಕೆ ಸ್ಪಷ್ಟವಾಗಿ ತಿಳಿಸುವಂತೆ ವಿಜಯ್ ಅವರಿಗೆ ಅವರು ಆಗ್ರಹಿಸಿದರು.

ಪಿಎಂಕೆ ನಾಯಕ ಅನ್ಬುಮಣಿ ರಾಮದಾಸ್, ಮೇಕೆದಾಟು ವಿಚಾರದಲ್ಲಿ ಸುಪ್ರೀಂ ಕೋರ್ಟ್ ತೀರ್ಪನ್ನು ಕರ್ನಾಟಕ ತಪ್ಪಾಗಿ ಬಳಸುತ್ತಿದೆ ಎಂದು ಆರೋಪಿಸಿದರು.

ಮೇಕೆದಾಟು ಯೋಜನೆಯನ್ನು ತಮಿಳುನಾಡು ವಿರೋಧಿಸಲು ಸಾಧ್ಯವಿಲ್ಲ ಎಂದು ಸುಪ್ರೀಂಕೋರ್ಟ್ ಎಂದಿಗೂ ಹೇಳಿಲ್ಲ ಅದು ಸ್ಪಷ್ಟವಾದ ಸುಳ್ಳು ಎಂದು ಅನ್ಬುಮಣಿ ಹೇಳಿದರು.

ಮೇಕೆದಾಟಿನಲ್ಲಿ ಅಣೆಕಟ್ಟು ನಿರ್ಮಾಣವಾದರೆ ತಮಿಳುನಾಡಿನ 14 ಜಿಲ್ಲೆಗಳ ನೀರಾವರಿ ವ್ಯವಸ್ಥೆ ಹಾಗೂ ಸುಮಾರು ಐದು ಕೋಟಿ ಜನರ ಕುಡಿಯುವ ನೀರಿನ ಸರಬರಾಜಿಗೆ ಹಾನಿಯಾಗಬಹುದು ಎಂದು ಅವರು ಎಚ್ಚರಿಸಿದರು.

ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಪಳನಿಸ್ವಾಮಿ ಆಡಳಿತಾರೂಢ ಸರ್ಕಾರದ ಮೌನವನ್ನು ಪ್ರಶ್ನಿಸಿದರು. ಕಾಂಗ್ರೆಸ್ ಮೇಲೆ ಅವಲಂಬಿತವಾಗಿರುವ ಸರ್ಕಾರವು ಕರ್ನಾಟಕದ ಕಾಂಗ್ರೆಸ್ ಸರ್ಕಾರದ ವಿರುದ್ಧ ದೃಢ ನಿಲುವು ತೆಗೆದುಕೊಳ್ಳಬಹುದೇ ಎಂದು ಅವರು ಪ್ರಶ್ನಿಸಿದರು.

ಮೇಕೆದಾಟು ಯೋಜನೆಗೆ ಸಿಎಂ ವಿಜಯ್ ಅಡ್ಡಗಾಲು

ಕಾನೂನು ಕ್ರಮ ತ್ವರಿತಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ

ಚೆನ್ನೈ: ರಾಜ್ಯದ ಮಹತ್ವಾಕಾಂಕ್ಷೆಯ ಮೇಕೆದಾಟು ಯೋಜನೆಗೆ ಇದೀಗ ತಮಿಳುನಾಡು ನೂತನ ಮುಖ್ಯಮಂತ್ರಿ ಸಿ ಜೋಸೆಫ್ ವಿಜಯ್ ಸಹ ಅಡ್ಡಗಾಲು ಹಾಕುತ್ತಿದ್ದು, ಸೋಮವಾರ ಮೇಕೆದಾಟುವಿನಲ್ಲಿ ಕಾವೇರಿ ನದಿಗೆ ಅಣೆಕಟ್ಟು ನಿರ್ಮಿಸುವ ಕರ್ನಾಟಕದ ಪ್ರಸ್ತಾವನೆಯ ಕುರಿತು ಪರಿಶೀಲನಾ ಸಭೆ ನಡೆಸಿದರು.

ಮೇಕೆದಾಟು ಯೋಜನೆಗೆ ತಮಿಳುನಾಡು ಮೊದಲಿನಿಂದಲೂ ವಿರೋಧಿಸುತ್ತಿದ್ದು, ಇದೀಗ ಹೊಸದಾಗಿ ಅಧಿಕಾರಕ್ಕೆ ಬಂದ ಟಿವಿಕೆ ಸರ್ಕಾರ ಸಹ ಅದೇ ನಿಲುವು ತಳೆದಿದೆ.

ಕಾವೇರಿ ನದಿಗೆ ಅಣೆಕಟ್ಟು ನಿರ್ಮಿಸುವುದಕ್ಕೆ ಉದ್ದೇಶಿತ "ಭೂಮಿ ಪೂಜೆ" ಹಿನ್ನೆಲೆಯಲ್ಲಿ ಈ ಸಭೆ ನಡೆಸಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ತಮಿಳುನಾಡಿನ ಹಕ್ಕುಗಳನ್ನು ರಕ್ಷಿಸಲು ಮತ್ತು ರೈತರ ಹಿತಾಸಕ್ತಿಗಳನ್ನು ರಕ್ಷಿಸಲು ವಿವರವಾದ ಪರಿಶೀಲನಾ ಸಭೆ ನಡೆಸಲಾಯಿತು" ಎಂದು ಪ್ರಕಟಣೆ ಹೇಳಿದೆ.

ಈ ವಿಷಯಕ್ಕೆ ಸಂಬಂಧಿಸಿದ ಪ್ರಕರಣಗಳ ಕುರಿತು ಚರ್ಚಿಸಲಾಯಿತು, ಸುಪ್ರೀಂ ಕೋರ್ಟ್ ಕೊನೆಯದಾಗಿ ಕೇಂದ್ರ ತಜ್ಞರು ಮಾತ್ರ ನಿರ್ಧರಿಸಬಹುದು ಎಂಬ ಹಿಂದಿನ ತೀರ್ಪಿನ ವಿರುದ್ಧ ತಮಿಳುನಾಡು ಸಲ್ಲಿಸಿದ್ದ ಪರಿಶೀಲನಾ ಅರ್ಜಿಯನ್ನು ವಜಾಗೊಳಿಸಿತ್ತು.

ಮೇಲೆ ತಿಳಿಸಿದ ನ್ಯಾಯಾಲಯದ ತೀರ್ಪನ್ನು ಗಮನದಲ್ಲಿಟ್ಟುಕೊಂಡು ವಿವರವಾದ ಸಮಾಲೋಚನೆಗಳ ನಂತರ ಕಾನೂನು ಕ್ರಮಗಳನ್ನು ತ್ವರಿತಗೊಳಿಸುವಂತೆ ಮುಖ್ಯಮಂತ್ರಿ ವಿಜಯ್ ಅವರು ಅಧಿಕಾರಿಗಳಿಗೆ ನಿರ್ದೇಶಿಸಿದರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಭೆಯಲ್ಲಿ ಸಂಪುಟ ಸಚಿವರಾದ ಎನ್ ಆನಂದ್, ಅಧವ್ ಅರ್ಜುನ ಮತ್ತು ಆರ್ ನಿರ್ಮಲ್ ಕುಮಾರ್, ಅಡ್ವೊಕೇಟ್ ಜನರಲ್ ವಿಜಯ್ ನಾರಾಯಣ್ ಅವರು ಭಾಗವಹಿಸಿದ್ದರು.

ನಕ್ಕರೆ ಅದೇ ಸ್ವರ್ಗ

ಹುಡುಗ : ನಿನ್ನ ಹೆಸರೇನು?
ಹುಡುಗಿ : ಎಲ್ಲರೂ ನನ್ನ 'ಅಕ್ಕ' ಅಂತ ಕರೀತಾರೆ
ಹುಡುಗ : ಓಹ್ ! ಅದಕ್ಕೆ ಎಲ್ಲರೂ ನನ್ನ ಈ ನಡುವೆ 'ಭಾವ' ಅಂತ ಕರೆಯೋಕೆ ಶುರು ಮಾಡಿದ್ದಾರೆ.

ಮೈಸೂರು ಮಿತ್ರ

ಮಂಗಳವಾರ, ಮೇ 26, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಒಂದು ಆಲೋಚನೆ ಮತ್ತು ನಡತೆ ಇವೆರಡೂ ಮುಪ್ಪು, ಸಾವಿಲ್ಲದ ಗಂಧರ್ವರಿದ್ದಂತೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ನಾಳೆ ಎಂದವನಿಗೆ ಹಾಳು, ಇಂದೇ ಎಂದವನಿಗೆ ಬೀಳಾಗದು ಬಾಳು.

ನಿಮ್ಮ ಪತ್ರಗಳು

ಕ್ರಿಕೆಟ್ ಕ್ರೀಡಾಂಗಣಕ್ಕೆ ರಾಜ್ಯ ಸರ್ಕಾರ 'ಡಾ.ಅಂಬೇಡ್ಕರ್ ಹೆಸರಿಡಲಿ'

ಮಾನ್ಯರೆ,

ಬೆಂಗಳೂರಿನ ಆನೇಕಲ್ ತಾಲೂಕಿನ ಸೂರ್ಯನಗರದಲ್ಲಿ ನಿರ್ಮಾಣಗೊಳ್ಳಲಿರುವ ದೇಶದ ಎರಡನೇ ಅತಿದೊಡ್ಡ ಅಂತರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ರಾಜ್ಯ ಸರ್ಕಾರ ಈಗಾಗಲೇ ಶಂಕುಸ್ಥಾಪನೆ ನೆರವೇರಿಸಿದ್ದು, ಸದರಿ ಈ ಕ್ರಿಕೆಟ್ ಕ್ರೀಡಾಂಗಣಕ್ಕೆ ಸಂವಿಧಾನ ಶಿಲ್ಪಿ 'ಡಾ.ಅಂಬೇಡ್ಕರ್ ಅಂತರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ' ಎಂದು ಹೆಸರು ಇಡಲು ಸರ್ಕಾರ ಆದ್ಯತೆ ನೀಡಲಿ.

ರಾಜಧಾನಿ ನವದೆಹಲಿಯ ಫಿರೋಜ್ ಷಾ ಕೋಟ್ಲಾ ಬಳಿ ಇರುವ ಅಂಬೇಡ್ಕರ್ ಮೈದಾನ ಸಾಕಷ್ಟು ಹೆಸರುವಾಸಿ ಆಗಿದೆ. ಇದು ಭಾರತದ ಅತ್ಯಂತ ಪ್ರಸಿದ್ಧ ಫುಟ್ಬಾಲ್ ಕ್ರೀಡಾಂಗಣವಾಗಿದ್ದು, ಇದು ಸುಮಾರು 50 ಸಾವಿರ ಆಸನಗಳ ಸಾಮರ್ಥ್ಯವನ್ನು ಹೊಂದಿದೆ. ನೆಹರು ಕಪ್‌ನಂತಹ ಅಂತರರಾಷ್ಟ್ರೀಯ ಫುಟ್‌ಬಾಲ್ ಪಂದ್ಯಾವಳಿಗಳನ್ನು ಆಯೋಜಿಸುತ್ತವೆ. ಇಲ್ಲೊಂದು ಗಮನಾರ್ಹ ವಿಷಯ ಏನೆಂದರೆ, ಅಂಬೇಡ್ಕರ್ ಹೆಸರಿನಲ್ಲಿ ಕ್ರಿಕೆಟ್ ಕ್ರೀಡೆಗೆ ಸಂಬಂಧಿಸಿದ ಒಂದೇ ಒಂದು ಅಂತರರಾಷ್ಟ್ರೀಯ ಮೈದಾನ ದೇಶದಲ್ಲಿ ಇನ್ನೂ ಕೂಡ ಕಾಣ ಸಿಗುವುದಿಲ್ಲ.

ಸದ್ಯ, ದೇಶದಲ್ಲಿ ಒಟ್ಟಾರೆಯಾಗಿ 80ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಗಳು ಇದ್ದು, ಹಲವಾರು ಮೈದಾನಗಳ ಹೆಸರು ಅದ್ವಿತೀಯ ಸಾಧನೆ ತೋರಿರುವ ರಾಷ್ಟ್ರ ನಾಯಕರ ಹೆಸರಿನಲ್ಲೂ ಇವೆ.

ಉದಾಹರಣೆಗೆ ಜವಾಹರಲಾಲ್ ನೆಹರೂ, ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಸರ್ದಾರ್ ವಲ್ಲಭಭಾಯಿ ಪಟೇಲ್ ಮತ್ತು ಅಟಲ್ ಬಿಹಾರಿ ವಾಜಪೇಯಿ, ನರೇಂದ್ರ ಮೋದಿ, ಅರುಣ್ ಜೇಟ್ಲಿ ಮುಂತಾದ ಪ್ರಮುಖ ರಾಜಕೀಯ ನಾಯಕರ ಹೆಸರನ್ನು ಬದಲಾದ ವರ್ತಮಾನದಲ್ಲಿ ಮೈದಾನಗಳಿಗೂ ಇಡಲಾಗಿದೆ.

ಈ ಮಾದರಿ ಅನ್ವಯ ಸದ್ಯ, ವಿಶ್ವ ದರ್ಜೆಯ ಅತ್ಯಾಧುನಿಕ ಸೌಲಭ್ಯ ಹೊಂದಿ ನಿರ್ಮಾಣಗೊಳ್ಳಲಿರುವ ಈ ನೂತನ ಕ್ರೀಡಾಂಗಣಕ್ಕೆ ಡಾ. ಅಂಬೇಡ್ಕರ್ ಅವರ ಹೆಸರು ಇಡಲು ಸರ್ಕಾರ ಆಸಕ್ತಿ ವಹಿಸುವ ಮುಖೇನ ಸಾಮಾಜಿಕ ನ್ಯಾಯದ ಪರ ಜೀವನಪರ್ಯಂತ ಹೋರಾಡಿದ ದಿವ್ಯ ಚೇತನ ಬಾಬಾಸಾಹೇಬರಿಗೆ ಗೌರವ ತೋರುವ ಕೆಲಸಕ್ಕೆ ಮುನ್ನುಡಿ ಬರೆಯಲಿ.

– ಅನಿಲ್ ಕುಮಾರ್, ನಂಜನಗೂಡು.

ಮಾನಸ ಗಂಗೋತ್ರಿಯ ಕಳಸ ರೌಂಡ್ ಕ್ಯಾಂಟೀನ್



ಮಾನ್ಯರೆ,

ಮೈಸೂರಿನ ಮಾನಸ ಗಂಗೋತ್ರಿಯ ಕಳಸಗಳಾದ ಬಯಲು ರಂಗಮಂದಿರವನ್ನು, ಗ್ರಂಥಾಲಯವನ್ನು, ರೌಂಡ್ ಕ್ಯಾಂಟೀನ್‌ನನ್ನು ಅಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ದಿನದಲ್ಲಿ ಒಮ್ಮೆಯಾದರೂ ಭೇಟಿ ನೀಡಿ ಕಾಲಕಳೆದು ಮನಸ್ಸು ಹಗುರ ಮಾಡಿಕೊಳ್ಳುವುದು ಸರ್ವೇಸಾಮಾನ್ಯವಾಗಿದೆ. ಸುಮಾರು 50 ವರ್ಷಗಳಿಂದ ವಿದ್ಯಾರ್ಥಿಗಳನ್ನು, ಬೋಧಕ – ಬೋಧಕೇತರ ಸಿಬ್ಬಂದಿಗಳನ್ನು ಭಾವನಾತ್ಮಕವಾಗಿ ಬೆಸೆದುಕೊಂಡಿರುವ ಮಾನಸ ಗಂಗೋತ್ರಿಯ ಈ ರೌಂಡ್ ಕ್ಯಾಂಟೀನ್ (ಉಪಹಾರ ಮಂದಿರ) ಬೆಳಿಗ್ಗೆ, ಮಧ್ಯಾಹ್ನ ಅಥವಾ ಸಂಜೆ ಸಮಯದಲ್ಲಿ ಅವರುಗಳ ನೆಚ್ಚಿನ ತಾಣವಾಗಿತ್ತು. ಕಳೆದ ಒಂದು ವರ್ಷದಿಂದ ರೌಂಡ್ ಕ್ಯಾಂಟೀನ್ ಮುಚ್ಚಿದ್ದು, ಅದರ ಒಳ ಮತ್ತು ಹೊರ ಆವರಣ ಕಸದ ರಾಶಿಗಳಿಂದ ತುಂಬಿ ತುಳುಕುತ್ತಿದೆ. ಅದರ ಕಿಟಕಿ ಗಾಜುಗಳು ಪುಡಿ ಪುಡಿಯಾಗಿದ್ದು, ಈ ದುಸ್ಥಿತಿಗೆ ಮೈಸೂರು ವಿಶ್ವವಿದ್ಯಾಲಯದ ಅಧಿಕಾರಿಗಳೇ ಹೊಣೆ ಎಂದರೆ ಅತಿಶಯೋಕ್ತಿಯಲ್ಲ. ಹಳೆಯ ವಿದ್ಯಾರ್ಥಿಗಳು ಈಗ ಕ್ಯಾಂಟೀನ್ ನನ್ನು ನೋಡಿದರೆ ಅದರ ದುಸ್ಥಿತಿಗೆ ಪರಿತಪಿಸದೇ ಇರುವುದಿಲ್ಲ. ವಿಶೇಷ ಆಕರ್ಷಣೆಯಾಗಿದ್ದ ಈ ರೌಂಡ್ ಕ್ಯಾಂಟೀನ್ ಇಲ್ಲದೆ ಕ್ಯಾಂಪಸ್‌ನಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ, ಕ್ಯಾಂಪಸ್ ಜೀವನ ಅಪೂರ್ಣ ಎಂದು ಅನಿಸಬಾರದು. ಆದ್ದರಿಂದ ಮೈಸೂರು ವಿವಿಯ ಆಡಳಿತ ಮಂಡಳಿ ಆದಷ್ಟು ಬೇಗನೆ ರೌಂಡ್ ಕ್ಯಾಂಟೀನ್ ಪುನರಾರಂಭ ಮಾಡಿಸುವತ್ತಾ ಗಮನಹರಿಸಿ ಮತ್ತೇ ಕ್ಯಾಂಟೀನ್‌ನ ಘತವೈಭವ ಮರುಕಳಿಸುವಂತೆ ಮಾಡುವುದು ಅತ್ಯಗತ್ಯ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಕ್ಯಾನ್, ಬಾಟೆಲ್‌ಗೆ ಪೆಟ್ರೋಲ್, ಡೀಸೆಲ್ ಹಾಕಲಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಗಗನಕ್ಕೇರಿದೆ. ಆದರೆ ಕೆಲವು ಬಂಕ್‌ಗಳಲ್ಲಿ ಕ್ಯಾನ್ ಹಾಗೂ ಬಾಟೆಲ್‌ಗಳಿಗೆ ಡೀಸೆಲ್ ಹಾಗೂ ಪೆಟ್ರೋಲ್ ಹಾಕುವುದನ್ನು ನಿಷೇಧಿಸಲಾಗಿದೆ ಎಂದು ಬಂಕ್‌ಗಳ ಮುಂದೆ ಬೋರ್ಡ್‌ಗಳನ್ನು ಹಾಕಿಕೊಂಡಿದ್ದಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ರೈತರು ತಮ್ಮ ತಮ್ಮ ಜಮೀನುಗಳಲ್ಲಿ ಉಳುಮೆ ಮಾಡಲು ಟ್ರ್ಯಾಕ್ಟರ್ ಹಾಗೂ ಇಟಾಚಿ, ಜೆಸಿಬಿ ಹಾಗೂ ಇತರೆ ಯಂತ್ರಗಳನ್ನು ಹೆಚ್ಚಾಗಿ ಬಳಕೆ ಮಾಡುತ್ತಿದ್ದಾರೆ. ಹೀಗಿರುವಾಗ ರೈತರು ಬಿತ್ತನೆ ಹಾಗೂ ಇತರೆ ಕೆಲಸ ಮಾಡುವ ಸಂದರ್ಭದಲ್ಲಿ ಏನಾದರು ಡೀಸೆಲ್ ಹಾಗೂ ಪೆಟ್ರೋಲ್ ಖಾಲಿಯಾದರೆ ಏನು ಮಾಡಬೇಕು. ಬಂಕ್‌ಗಳಿಗೆ ಹೋದರೆ ಈ ಎರಡು ಇಂಧನಗಳನ್ನು ಹಾಕುವುದಿಲ್ಲ. ಆದುದರಿಂದ ಈ ವಿಚಾರಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು ಈಗ ಮಾಡಿರುವ ನಿರ್ಧಾರವನ್ನು ತಕ್ಷಣವೇ ಕೈಬಿಡಬೇಕು ಎಂಬುದು ರೈತರ ಮನವಿ.

–ಸಿದ್ದಲಿಂಗೇಗೌಡ, ಹೈರಿಗೆ ಗ್ರಾಮ, ಹೆಚ್.ಡಿ.ಕೋಟೆ ತಾ.

ಆನೆಗೆ ಆನೆಯೇ ಶತ್ರುವಾಯ್ತಲ್ಲ!

ಮಾನ್ಯರೆ,


ಕೊಡಗಿನ ಪ್ರಸಿದ್ಧ ಪ್ರವಾಸಿ ತಾಣ ಹಾಗೂ ಸಾಕಾನೆಗಳ ಶಿಬಿರವಾದ ದುಬಾರೆಯಲ್ಲಿ ಇತ್ತೀಚೆಗೆ ಸಾಕಾನೆಗಳ ನಡುವೆ ನಡೆದ ಭೀಕರ ಕಾಳಗದಲ್ಲಿ ತೀವ್ರವಾಗಿ ಗಾಯಗೊಂಡಿದ್ದ 'ಮಾರ್ತಾಂಡ' ಆನೆ ಚಿಕಿತ್ಸೆ ಫಲಕಾರಿಯಾಗದೆ ಅಸು ನೀಗಿರುವುದು ನೋವಿನ ಸಂಗತಿಯಾಗಿದೆ. ಹಾಸನ ಜಿಲ್ಲೆ, ಆಲೂರಿನಲ್ಲಿ 2023ರಲ್ಲಿ ಸೆರೆ ಹಿಡಿಯಲಾಗಿದ್ದ 4,500 ಕೆಜಿ ತೂಕದ ಮಾರ್ತಾಂಡನಿಗೆ 53 ವರ್ಷ ವಯಸ್ಸಾಗಿತ್ತು. ತುಂಬಾ ಸೌಮ್ಯ ಸ್ವಭಾವಕ್ಕೆ ಹೆಸರಾಗಿದ್ದ ಮಾರ್ತಾಂಡ, ಅರಣ್ಯ ಇಲಾಖೆಯ ಹಲವಾರು ಕಾರ್ಯಾಚರಣೆಗಳಲ್ಲಿ ಭಾಗಿಯಾಗಿತ್ತೆಂದು ಅರಣ್ಯ ಇಲಾಖೆಯ ಮೂಲಗಳು ತಿಳಿಸಿವೆ. ಆನೆಗೆ ಸಿಂಹ ಶತ್ರು ಎಂದು ಹೇಳಲಾಗುತ್ತದೆ. ಆದರೆ, ಮಾರ್ತಾಂಡನಿಗೆ ಕಂಜನ್ ಎಂಬ ಮತ್ತೊಂದು ಆನೆಯೇ ಶತ್ರುವಾಗಿ ಪರಿಣಮಿಸಿದ್ದು ದುರದೃಷ್ಟಕರವಾಗಿದೆ. ಮಾರ್ತಾಂಡನಿಗೆ ಗೌರವಪೂರ್ವಕ ಶ್ರದ್ಧಾಂಜಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

'ಉದಯರವಿ' ಸ್ಮಾರಕವಾಗಿ ಬೆಳಗುತಿರಲಿ.....



ನಮ್ಮ ಮೈಸೂರನ್ನು ಸಾಂಸ್ಕೃತಿಕ ನಗರವೆಂದು ಕರೆಯುವುದಕ್ಕೆ ಕಾರಣರಾದವರು ಮೈಸೂರು ಸಂಸ್ಥಾನವನ್ನು ಆಳಿದ ರಾಜ–ಮಹಾರಾಜರು. ಅಭಿವೃದ್ಧಿಯ ಜೊತೆಗೆ ಸಾಹಿತ್ಯ, ಚಿತ್ರಕಲೆ, ನೃತ್ಯ, ಸಂಗೀತ, ನಾಟಕ, ಮುಂತಾದವುಗಳಿಗೆ ಹಿಂದಿನಿಂದಲೂ ಪ್ರೋತ್ಸಾಹ ನೀಡುತ್ತಾ ಬಂದಿದ್ದರಿಂದಾಗಿ ಮೈಸೂರು ಜಾಗತಿಕವಾಗಿ ಸಾಂಸ್ಕೃತಿಕ ನಗರವೆಂದು ಗುರುತಿಸಿಕೊಂಡಿದೆ. ಚಾಮುಂಡಿ ತಾಯಿ ನೆಲೆಸಿರುವ ಊರನ್ನು ಕರ್ಮಭೂಮಿಯನ್ನಾಗಿಸಿಕೊಂಡು, ಕುಪ್ಪಳ್ಳಿಯಿಂದ ಬಂದವರು ಕುಕ್ಕರಹಳ್ಳಿ ಕೆರೆಯ ದಂಡೆಯಲ್ಲಿ ಕುಳಿತು ಧ್ಯಾನಿಸಿ ಹಲವು ಪ್ರಕಾರಗಳಲ್ಲಿ ಬರೆದು ಸಾಹಿತ್ಯದಲ್ಲಿ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟು ರಾಷ್ಟ್ರಕವಿಯಾಗಿ ವಿಶ್ವಕ್ಕೆ ತಮ್ಮದೇ ಸೃಷ್ಟಿಯ ವಿಶ್ವಮಾನವ ಸಂದೇಶ ನೀಡಿದವರು ಮಹಾಕವಿ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪನವರು. ಅರ್ಥಾತ್ ಕುವೆಂಪುರವರು.



ಕುವೆಂಪು ಕಾವ್ಯನಾಮದಲ್ಲಿ ಕನ್ನಡ ಸಾಹಿತ್ಯದ ಕಂಪನ್ನು ಹರಡಿ, ತಾಯಿ ಕನ್ನಡಾಂಬೆಯ ಮುಕುಟ ಮಣಿಯಂತೆ ಪಳಗುಟ್ಟುತ್ತಾ ಅಕ್ಷರದೇಗುಲ ಉದಯರವಿಯ ಕಣಕಣದಲ್ಲಿ ಜಗದಕವಿ, ಯುಗದ ಕವಿಯಾಗಿ ನೆಲೆಸಿದ್ದಾರೆ. ಮೈಸೂರು ಮತ್ತು ಉದಯರವಿ ಇರುವವರೆಗೂ ರಾಜ್ಯದ ಕನ್ನಡಿಗರ ಪ್ರತೀ ಹೃದಯಗಳಲ್ಲಿ ನೆಲೆಸಿರುತ್ತಾರೆ. ಉದಯರವಿ ಬರಿ ಕಲ್ಲು, ಇಟ್ಟಿಗೆ ಮತ್ತು ಗಾರೆಗಳಿಂದ ನಿರ್ಮಿತವಾದ ಕಟ್ಟಡವಲ್ಲ. ಆ ಸೌಧದಲ್ಲಿ ಅದಕ್ಕೂ ಮೀರಿದ ಒಂದು ಅಗೋಚರ ಶಕ್ತಿಯೊಂದು ಇರುವುದು 16, ಮೇ 2026ರಂದು ಶನಿವಾರ ಸಂಜೆ ಆ ದೇಗುಲದೊಳಕ್ಕೆ ಮೊದಲ ಬಾರಿ ಪ್ರವೇಶ ಮಾಡಿದಾಗ, ನನ್ನ ಅರಿವಿಗೆ ಬಂತು. ಕುವೆಂಪುರವರು ಕುಳಿತುಕೊಳ್ಳುತ್ತಿದ್ದ ಬೆತ್ತದ ಚೇರು, ಟಿಫಾಯಿ, ಅವರ ಪಾದಗಳು ಸ್ಪರ್ಶಿಸಿದ ಮನೆಯ ಒಳಾಂಗಣ, ಮುಂದಿನ ಹೂದೋಟ ಎಲ್ಲವನ್ನೂ ಕಣ್ತುಂಬಿಕೊಂಡು ಅಳಿಯ ಡಾ.ಕೆ.ಚಿದಾನಂದಗೌಡರು ಮುಂದೆ ಇದ್ದಾಗ್ಯೂ ಮುಜುಗರಪಟ್ಟುಕೊಳ್ಳದೆ ಪದೇ ಪದೆ ಮುಟ್ಟಿ ಕಣ್ಣಿಗೆ ಒತ್ತುಕೊಳ್ಳುತ್ತಿದ್ದೆ. ಉದಯರವಿ ಮನೆಯ ನನ್ನ ಪ್ರವೇಶ ಜೀವಮಾನದ ಒಂದು ಸಾಧನೆ ಎಂದೇ ಭಾವಿಸಿದ್ದೇನೆ. ಉದಯರವಿ ಭೇಟಿಯಿಂದ ನನ್ನ ಹೃದಯದಲ್ಲಿ ಹೊಸಬೆಳಕೊಂದು ಚೆಲ್ಲಿತು, ಇದು ಜಂಬದ ಮಾತು ಅಥವಾ ಅತಿರೇಕದ ಮಾತೆಂದರೂ ನನಗದು ನೋ ಪ್ರಾಬ್ಲಂ. ಅದು ನಿಮ್ಮ ಪ್ರಾಬ್ಲಂ.

ಕುವೆಂಪುರವರ ಕುರಿತಾದ ಯಾವೊಂದು ಮಾಹಿತಿಯು ಗೌಪ್ಯವಾಗಿ ಉಳಿದಿಲ್ಲ. ಎಲ್ಲವೂ ಅಂತರ್ಜಾಲದ ಅಲೆಗಳಲ್ಲಿ ತೇಲುತ್ತಿವೆ. ಬೇಕೆಂದಾಗಲೆಲ್ಲ ಕ್ಷಣಮಾತ್ರದಲ್ಲಿ ತೆಗೆಯಬಹುದು. ಹಾಗಾಗಿ ಅವರನ್ನು ಪರಿಚಯಿಸುವ ಮೂರ್ಖತನಕ್ಕೆ ಹೋಗಲಾರೆ. ನೇರ ವಿಷಯಕ್ಕೆ ಬರುತ್ತೇನೆ. ಅದುವೇ ಕುವೆಂಪುರವರು ಜೀವಿಸಿದ್ದ ಉದಯರವಿ ನಿವಾಸ. ರಾಜಕುಮಾರ್‌ರವರು ನಟಿಸಿದ ಚಲನಚಿತ್ರ ಕಸ್ತೂರಿ ನಿವಾಸದಂತೆ, ಇದೊಂದು 'ಸಾಹಿತ್ಯ ನಿವಾಸ'ವಾಗಿರುವ ಸರಸ್ವತಿ ದೇಗುಲ. ಪ್ರತಿಫಲಾಕ್ಷೆಗಳಿಲ್ಲದೆ ರಸಋಷಿಯಾಗಿ, ವೈಚಾರಿಕತೆಯ ಹರಿಕಾರರಾಗಿ, ಕ್ರಾಂತಿಕಾರಿ ಕವಿಯಾಗಿ, ಮೌಢ್ಯತೆ, ಜಾತೀಯತೆ ಹಾಗೂ ಅಸಮಾನತೆಯ ವಿರುದ್ಧ ಸಾಹಿತ್ಯದ ಮೂಲಕ ಕಾವ್ಯದ 'ಪಾಂಚಜನ್ಯ'ವನ್ನು ಉದಯರವಿ ನಿವಾಸದಿಂದ ಕುವೆಂಪು ಮೊಳಗಿಸಿದರು.

> ನನಗೆ ಯಾವ ಜಾತಿ ದ್ವೇಷವಿಲ್ಲ ಎಂದು ಜಾತಿ ವ್ಯವಸ್ಥೆಯಿಂದ ಹೊರಬಂದ ಕುವೆಂಪು ಅವರ ಪಾಂಚಜನ್ಯವು ಮೊಳಗುತ್ತಾ ಸಾಹಿತ್ಯ ಮತ್ತು ಆಧ್ಯಾತ್ಮಿಕ ಚಿಂತನೆಗಳ ಮೂಲಕ ಜನಜಾಗೃತಿ ಮೂಡಿಸಬೇಕೆಂದರೆ ಕುವೆಂಪು ಅವರ ನಿವಾಸ 'ಉದಯರವಿ' ಸ್ಮಾರಕದಂತೆ ಸಂರಕ್ಷಿಸಿ, ಅಲ್ಲೊಂದು ಕಾವ್ಯಲೋಕವನ್ನು ಸೃಷ್ಟಿಸುವುದು ಮೈಸೂರಿನ ಪ್ರತಿಯೊಬ್ಬ ನಾಗರಿಕನ ಕರ್ತವ್ಯ.

ನನಗೆ ಯಾವ ಜಾತಿ ದ್ವೇಷವಿಲ್ಲ ಎಂದು ಜಾತಿ ವ್ಯವಸ್ಥೆಯಿಂದ ಹೊರಬಂದ ಕುವೆಂಪುರವರ ಪಾಂಚಜನ್ಯವು ಸದಾ ಮೊಳಗುತ್ತಾ ಆಧ್ಯಾತ್ಮಿಕ ಚಿಂತನೆಗಳ ಮೂಲಕ ಜನಜಾಗೃತಿ ಮೂಡಿಸಬೇಕೆಂದರೆ ಕುವೆಂಪುರವರ ನಿವಾಸ ಉದಯರವಿಯನ್ನು ಸ್ಮಾರಕದಂತೆ ಸಂರಕ್ಷಿಸಿ ಅಲ್ಲೊಂದು ಕಾವ್ಯಲೋಕವನ್ನು ಸೃಷ್ಟಿಸುವುದು ಮೈಸೂರಿನ ಪ್ರತಿಯೊಬ್ಬ ನಾಗರಿಕನ ಕರ್ತವ್ಯ.

ಯಾಕೋ, ಇವತ್ತು ಮೈಸೂರಲ್ಲಿ ಯಾವುದೇ ಯೋಜನೆಗಳು ಅನುಷ್ಠಾನಕ್ಕೆ ಬರಲಿ ಅಡೆ–ತಡೆಗಳಿಲ್ಲದೆ ನಿಗದಿತ ಕಾಲಕ್ಕೆ ಪೂರ್ಣವಾಗುವುದಿಲ್ಲ. ಬಹುಶಃ ಅದೇ ದಾರಿಯಲ್ಲಿ ಉದಯರವಿಯನ್ನು ಸ್ಮಾರಕವನ್ನಾಗಿಸುವ ಸರ್ಕಾರದ ನಡೆ ಸಾಗಿದೆ. ಕುವೆಂಪುರವರು 11, ನವೆಂಬರ್ 1994ರಲ್ಲಿ ಅಗಲಿ ಇಂದಿಗೆ 3 ದಶಕಗಳು ಕಳೆದಿವೆ. ಆರ್ಥಿಕವಾಗಿ ಸರ್ಕಾರಕ್ಕೆ ಹೊರೆಯಾಗದಂತಹ ಒಂದು ಪುಣ್ಯದ ಸಣ್ಣ ಕೆಲಸಕ್ಕೆ, ಇಷ್ಟೊಂದು ಸಮಯ ಕಳೆದರೂ ಮಾಡಿಲ್ಲವೆಂದರೆ ಒಬ್ಬ ರಾಷ್ಟ್ರಕವಿಗೆ, ಮಹಾನ್ ಸಾಧಕನಿಗೆ ಇರುವ ಗೌರವ ಇಷ್ಟೇ?, ಎಂಬ ಪ್ರಶ್ನೆ ಮೂಡದೆ ಇರದು!. ಕೇವಲ ಲಕ್ಷಗಳಲ್ಲಿ ಮುಗಿದು ಹೋಗುತ್ತಿದ್ದ ಸ್ಮಾರಕಕ್ಕೆ ಇಂದು ಕೋಟಿಗಳು ಬೇಕಾಗುತ್ತದೆ. ಆದರೂ ಅದು ದೊಡ್ಡ ಮೊತ್ತವೇನಲ್ಲ.

ಸ್ಮಾರಕದ ಹೊಣೆಯನ್ನು ಸರ್ಕಾರವೇ ಮಾಡುವುದಕ್ಕಿಂತ ಅನುದಾನ ಮತ್ತು ವಾರ್ಷಿಕ ನಿರ್ವಹಣಾ ವೆಚ್ಚದೊಂದಿಗೆ ಕುವೆಂಪುರವರ ಕುಟುಂಬದ ಟ್ರಸ್ಟ್‌ಗೆ ವಹಿಸಿದ್ದರೆ, ಇಷ್ಟೊತ್ತಿಗೆ ಕಾವ್ಯದ ದೊಡ್ಡ ಆಲದ ಮರವಾಗಿ ಬೆಳೆದು ಕಾವ್ಯಾಸಕ್ತರಿಗೆ ನೆರಳಾಗುತ್ತಿತ್ತು.

ಸ್ಮಾರಕವನ್ನು ಸ್ಥಾಪಿಸಲು ಸ್ಪಷ್ಟ ನಿರ್ಧಾರವನ್ನು ಕೈಗೊಳ್ಳದೆ, ಎಲ್ಲಾ ಸರ್ಕಾರಗಳು ನಾಳೆ... ನಾಳೆ... ಎನ್ನುತ್ತಲೇ ಮುಂದೂಡುತ್ತಾ ಬಂದು ಮೂವತ್ತು ವರ್ಷ ಕಳೆದಾಯಿತು. ಜನ್ಮಸ್ಥಳದಲ್ಲಿ ಕವಿಶೈಲ ಮಾಡುವಲ್ಲಿ ತೋರಿದ ಇಚ್ಛಾಶಕ್ತಿ ಕರ್ಮಭೂಮಿ ಮೈಸೂರಿನಲ್ಲಿ ತೋರದಿರುವುದು ಸಾಂಸ್ಕೃತಿಕ ನಗರಕ್ಕೆ ಅಂಟಿದ ಶಾಪದ ಫಲವಿರಬಹುದು. ಕುಪ್ಪಳ್ಳಿಯಲ್ಲಿ 'ಕವಿಶೈಲ' ಮಾಡಿದಂತೆ ಮೈಸೂರಿನಲ್ಲಿ 'ಕವಿಶ್ರೇಷ್ಠ' ಅಂದೇ ಮಾಡಬಹುದಿತ್ತು. ಇದರಲ್ಲೂ ರಾಜಕೀಯವೇನಾದರೂ ನಡೆಯಿತೇ? ಎಂಬುದು ಮೈಸೂರು ಜನತೆಗೆ ಸಂಶಯವಿದೆ.

ಕುವೆಂಪುರವರು 'ಮನುಜ ಮತ ವಿಶ್ವ ಪಥ'ದಲ್ಲಿ ಹೇಳಿರುವಂತೆ 'ನಾಳೆ ಎಂದರಾಗದು, ಮುಂದೆ ಎಂದರಾಗದು, ಇಂದೆ ನೀನು ನಿರ್ಣಯಿಸಬೇಕು, ಇಂದೆ ಎತ್ತಿ ಪೊರೆಯಬೇಕು. ಬೆಂಕಿಗೆ ಬಿದ್ದವರನ್ನು ನಾಳೆ ಎತ್ತುತ್ತೇನೆಂದರೆ ದೊರೆಯುವುದೇನು?, ಬೂದಿಯಲ್ಲವೆ! ನೀರಿಗೆ ಬಿದ್ದವರನ್ನು ನಾಳೆ ಎತ್ತುತ್ತೇನೆಂದರೆ ಲಭಿಸುವುದೇನು? ಹೆಣವಲ್ಲವೆ!' ಕುವೆಂಪು ಅವರ ಮೈಸೂರು ಸ್ಮಾರಕ ಸ್ಥಾಪನೆಯಲ್ಲೂ ಇದೇ ಆಗಿರುವುದು ನಿರ್ಣಯಕ್ಕೆ ಏಕಿಷ್ಟು ಮೀನಾಮೇಷ ಎಣಿಸುತ್ತಿದ್ದಾರೋ..? ಮೈಸೂರಿನ ಶಾಪವೇ?.

ಇಲ್ಲಿವರೆಗೆ ಆಗಿದ್ದು ಆಗಿದೆ, ಇಂದಿನ ಪೀಳಿಗೆಯವರು ಮುಂದಿನ ಪೀಳಿಗೆಗೆ ಕೊಂಡಿಯಾಗಿದ್ದಾರೆ, ಅವರೆಲ್ಲಾ ಒಬ್ಬೊಬ್ಬರೇ ಮರೆಯಾಗುತ್ತಿದ್ದಾರೆ. ವಿಳಂಬ ಮಾಡದೆ ಸರ್ಕಾರವು ಕುವೆಂಪು ಕುಟುಂಬದವರನ್ನು ಭೇಟಿ ಮಾಡಿ ಅವರಿಗೆ ಸಲ್ಲಬೇಕಾಗಿರುವ ಗೌರವವನ್ನು ಕೊಟ್ಟು ಅವರ ಅಭಿಲಾಷೆಯಂತೆ ಸ್ಮಾರಕದ ಕೆಲಸಗಳು ತ್ವರಿತವಾಗಿ ನಡೆಯಲಿ.

'ಜಢವೆಂಬುದೇ ಇಲ್ಲ, ಚೇತನವೇ ಎಲ್ಲಾ' ಎಂಬ ಕುವೆಂಪುರವರ ಪ್ರೇರಣಾ ಹೇಳಿಕೆ ಅವರದೇ ವಿಷಯದಲ್ಲಿ ಚೇತನವೇ ಇಲ್ಲ, ಜಡವೇ ಎಲ್ಲಾ ಎಂಬಂತಾಗಿದೆ. ಕುವೆಂಪುರವರು 20ನೇ ಶತಮಾನ ಕಂಡ ಶ್ರೇಷ್ಠ ಕವಿ. ಸಮಕಾಲೀನ ಮತ್ತೊಬ್ಬ ಮೇರುಕವಿ ಬೇಂದ್ರೆಯವರು ಇವರನ್ನು 'ಯುಗದ ಕವಿ ಜಗದ ಕವಿ' ಎಂದು ಕೊಂಡಾಡಿದರು. ಯುಗದ ಕವಿಯನ್ನು ಜಗತ್ತು ಇರುವವರೆಗೂ ಉಳಿಸಿಕೊಳ್ಳುವುದು ಕನ್ನಡಿಗರ ಜವಾಬ್ದಾರಿ.

ವಿಶ್ವಮಾನವ ಸಂದೇಶ ನೀಡಿದ ಸಂತ. ಕನ್ನಡದ ಮೊದಲನೆಯ ಜ್ಞಾನಪೀಠ ಪ್ರಶಸ್ತಿ, ಎರಡನೆಯ ರಾಷ್ಟ್ರಕವಿಯಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಮೊದಲ ಬಾರಿಗೆ ಕನ್ನಡಕ್ಕೆ ತಂದುಕೊಟ್ಟವರು. ಇವಲ್ಲದೆ ಇತರೆ ಪ್ರಶಸ್ತಿಗಳಿಗೆ ಲೆಕ್ಕವಿಲ್ಲ. ಇಂತಹ ಕವಿಯನ್ನು ಮೈಸೂರು ಮರೆಯುವ ಹಂತ ತಲುಪಿದೆ ಎಂದರೆ ಕನ್ನಡಿಗರು ಯೋಚಿಸಬೇಕಾಗಿದೆ. ಸರ್ಕಾರದಲ್ಲಿ ಹಣದ ಕೊರತೆ ಇದ್ದರೆ, ರಾಜ್ಯದ ಜನತೆಗೆ ಒಂದು ಕರೆಕೊಟ್ಟರೆ ಸಾಕು; ಯಾರೂ ಹಿಂದೆ ಸರಿಯುವುದಿಲ್ಲ ಇವರು ಕವಿ ಮಾತ್ರವಾಗಿರದೆ, ಜಾತಿಯ ಸಂಕೋಲೆಗಳಿಂದ ಹೊರಬಂದವರು. ಹಾಗಾಗಿ ಜಾತ್ಯಾತೀತವಾಗಿ ಇವ ನಮ್ಮವನೆಂದು ಕನ್ನಡಿಗರು ಅಪ್ಪಿ ಮುಂದೆ ಬರುತ್ತಾರೆ.

ಮ್ಯೂಸಿಯಂನಲ್ಲಿ ಕುವೆಂಪುರವರಿಗೆ ಸಂಬಂಧಿಸಿದ ವಸ್ತು, ಪುಸ್ತಕಗಳಿನ್ನಿಟ್ಟರೆ ಸಾಲದು ಮತ್ತದೇ ಜಡವೆಂಬುದನ್ನು ಕಾಣಬೇಕಾದೀತು. ಸ್ಮಾರಕದ ಜೊತೆಗೆ ಕುವೆಂಪು ಅವರಿಗೆ ಸಂಬಂಧಿಸಿದ ಹಾಗೆ ಅವರ ಕೃತಿಗಳ ಅಭ್ಯಾಸ, ಕನ್ನಡ ಸಾಹಿತ್ಯ ಹಾಗೂ ಭಾಷೆಗೆ ಪೂರಕವಾಗಿ ಮೈಸೂರು ವಿಶ್ವವಿದ್ಯಾಲಯ ಸಹಕಾರದೊಂದಿಗೆ ಡಿಪ್ಲೊಮಾ ಕೋರ್ಸ್ ಪ್ರಾರಂಭಿಸಿ, ಉದಯರವಿಯು ಚೇತನವಾಗಿರುವಂತೆ ಮಕ್ಕಳು ಅಲ್ಲಿ ಸದಾ ಕಲಿಯುತ್ತಿರಲಿ. ಕುವೆಂಪು ಅವರನ್ನು ನೆನೆಯುವ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿದ್ದರೆ ಸ್ಮಾರಕ ನಿಶ್ಯಬ್ಧವಾಗಿರದೆ ಕನ್ನಡ ಡಿಂಡಿಮದ ಹಿಂಪಿನ ಶಬ್ಧ ಕಿವಿಯಲ್ಲಿ ಗುಯ್‌ಗುಡುವಂತಾಗುವುದು.

ಸ್ಮಾರಕದ ವಿಚಾರವಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವ ಹಂತದಲ್ಲಿ ಇದೆಯೋ ಕಾಣೆ(ಕೆಲವು ತಿಂಗಳುಗಳ ಹಿಂದೆ ಕನ್ನಡ–ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಅವರು ಸ್ಮಾರಕದ ವಿಷಯವಾಗಿ ಉದಯರವಿಗೆ ಭೇಟಿಯಾಗಿದ್ದನ್ನು ಪತ್ರಿಕೆಗಳಲ್ಲಿ ಓದಿದ ನೆನಪು). ಆದರೆ ನಿಮ್ಮ ತಕರಾರುಗಳು ಏನೇ ಇದ್ದರು ನಿಲ್ಲಿಸಿ, ಮುಖ್ಯಮಂತ್ರಿಗಳು ನಮ್ಮ ಮೈಸೂರಿನವರೇ ಇದ್ದಾರೆ. ಅವರು ಕೂಡ ಕನ್ನಡ ಚಳುವಳಿ ಮತ್ತು ಕನ್ನಡ ಭಾಷೆಯ ಅನುಷ್ಠಾನದ ಪ್ರಕ್ರಿಯೆಯಲ್ಲಿ ಭಾಗವಹಿಸಿದವರು. ಅವರು ಮನಸ್ಸು ಮಾಡಿದರೆ ಇದು ದೊಡ್ಡ ಕೆಲಸವೇನಲ್ಲ. ಚಿಟಿಕೆ ಹೊಡೆಯುವ ಕ್ಷಣದಲ್ಲಿ ಮಾಡುವ ಸಾಮರ್ಥ್ಯದವರು. ಈಗ ವಿಳಂಬವಾಗಿದ್ದಕ್ಕೆ ಚಿಂತಿಸಿ ಫಲವಿಲ್ಲ. ಕುವೆಂಪುರವರು ಅಂತ್ಯಕಾಲದವರೆಗೂ ಮೈಸೂರಿನಲ್ಲಿ ಇದ್ದುಕೊಂಡು ಮಾಡಿದ ಮಹತ್ತರ ಸಾಧನೆಗೆ ಇಲ್ಲೊಂದು ಸ್ಮಾರಕ ನಿರ್ಮಿಸುವ ಮೂಲಕ ಗೌರವ ಸಮರ್ಪಿಸೋಣ. ಎಲ್ಲಾದರೂ ಕಟ್ಟು, ಹೇಗಾದರೂ ಕಟ್ಟು, ಆದರೆ ಮೈಸೂರಿನಲ್ಲೂ ಒಂದು ಭವ್ಯ ಸ್ಮಾರಕ ಕಟ್ಟು! ಆ ಮೂಲಕ ಮೈಸೂರು ನಗರದ ಮರಣೋತ್ತರ ಪೌರಸನ್ಮಾನ ಸಿಗಲಿ.

ಲೆಗಸಿ ಕ್ಲಬ್ ಆಫ್ ಮೈಸೂರಿನ ಸಂಸ್ಥಾಪಕ ಅಧ್ಯಕ್ಷ ಡಿ.ವಿ.ದಯಾನಂದ್ ಸಾಗರ್ ಅವರು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡರನ್ನು ಉದಯರವಿಯಲ್ಲಿ ಕುವೆಂಪುರವರ ಪುತ್ರಿ ತಾರಿಣಿ ಮತ್ತು ಅಳಿಯ ಡಾ.ಕೆ.ಚಿದಾನಂದಗೌಡ ಅವರನ್ನು ಭೇಟಿ ಮಾಡಿಸಿದ್ದು, ಭೇಟಿಯಿಂದಾಗಿ ರಾಷ್ಟ್ರಕವಿ ಕುವೆಂಪು ಅವರ ಸಾಹಿತ್ಯ ಪರಂಪರೆ ಮತ್ತು ಸಾಮಾಜಿಕ ಚಿಂತನೆಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಶಾಸಕರ ಪ್ರಯತ್ನಕ್ಕೆ ಹೊಸಚೈತನ್ಯ ದೊರೆತಂತಾಗಿದೆ. ಈ ಬಗ್ಗೆ ವಿಧಾನಸಭೆಯಲ್ಲೂ ಪ್ರಸ್ತಾಪಿಸಿರುವುದು ಪತ್ರಿಕೆಗಳಲ್ಲಿ ಸುದ್ದಿಯಾಗಿದೆ.

ಕ್ಷಮಿಸಿಬಿಡಿ ಕುವೆಂಪು, ಸ್ಮಾರಕ ನಿರ್ಮಿಸಲು ಶಾನೆ ವಿಳಂಬವಾಗಿದೆ. ನಾವು ಮೈಸೂರಿಗರು ಕಟ್ಟೇ ಕಟ್ಟುವೆವು ಒಂದು ದಿನ ನಿಮಗೊಂದು ಭವ್ಯ ಸ್ಮಾರಕವನ್ನು. ಲೇಖನದಲ್ಲಿ ಪ್ರಸ್ತಾಪಿಸಿರುವ ವಿಷಯಗಳಲ್ಲಿ ಲೋಪವಿದ್ದರೆ ಕುವೆಂಪು ಕುಟುಂಬದ ಕ್ಷಮೆ ಇರಲೆಂದು ಕೋರುತ್ತಾ.. ಸ್ಮಾರಕ ನಿರ್ಮಾಣದ ಜಾಗೃತಿ ಕನ್ನಡಿಗರ ಹೃದಯಗಳಲ್ಲಿ ಉದಯವಾಗಲಿ ಎಂಬ ಆಶಯದೊಂದಿಗೆ ಮುಂದಿನ ನಡೆ ಹೇಗಿರಬೇಕೆಂಬುದನ್ನು ನಿಮಗೆ ಬಿಡುತ್ತೇನೆ.



ಮಿರ್ಲೆ ಚಂದ್ರಶೇಖರ
ಹವ್ಯಾಸ ಬರಹಗಾರರು
ಮೊ: 9916129654

ಎಲ್ಲೆಂದರಲ್ಲಿ ಕಸ ಎಸೆಯುವ ಚಾಳಿ ವಿದ್ಯಾವಂತರಲ್ಲೇ ಹೆಚ್ಚಿರುವುದು ಸಮಾಜದ ದೊಡ್ಡ ವಿಪರ್ಯಾಸ...!

ಮೈಸೂರು, ಸುಂದರ ಇತಿಹಾಸ, ಸ್ವಚ್ಛತೆ ಮತ್ತು ಹಸಿರಿನಿಂದಾಗಿ ಜಗತ್ಪ್ರಸಿದ್ಧವಾಗಿದೆ. ಮೈಸೂರು ಮಹಾ ರಾಜರು ವಿಶೇಷವಾಗಿ ನಾಲ್ವಡಿ ಕೃಷ್ಣರಾಜ ಒಡೆಯರ್ ನಗರವನ್ನು ಯೋಜನಾ ಬದ್ಧವಾಗಿ ಕಟ್ಟಿದರು. ವಿಶಾಲವಾದ ರಸ್ತೆಗಳು, ಸುಂದರ ಉದ್ಯಾನವನಗಳು ಮತ್ತು ಸಾಂಸ್ಕೃತಿಕ ಕಟ್ಟಡಗಳನ್ನು ನಿರ್ಮಿಸಿ ಸೌಂದರ್ಯದ ತಳಪಾಯ ಹಾಕಿದರು.



ಮೈಸೂರು ದೇಶದ ಅತ್ಯಂತ ಸ್ವಚ್ಛ ನಗರಗಳಲ್ಲಿ ಒಂದಾಗಿದೆ. ಉತ್ತಮ ತ್ಯಾಜ್ಯ ನಿರ್ವಹಣೆ ಮತ್ತು ಸ್ಥಳೀಯ ಆಡಳಿತದ ಕಟ್ಟುನಿಟ್ಟಿನ ಕ್ರಮಗಳು ಸೌಂದರ್ಯವನ್ನು ಕಾಪಾಡಿಕೊಳ್ಳಲು ಪ್ರಮುಖ ಕಾರಣ. ಈ ನಿಟ್ಟಿನಲ್ಲಿ ಸಾರ್ವಜನಿಕರ ಸಹಕಾರ ಮಹತ್ವಪೂರ್ಣವಾದುದು.

ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲೆಂದರಲ್ಲಿ ಕಸ ಎಸೆಯುವುದರಿಂದ ನಗರದ ಸೌಂದರ್ಯ ಹಾಳಾಗುವುದಲ್ಲದೆ, ಪರಿಸರ ಮಾಲಿನ್ಯ ಮತ್ತು ಸಾಂಕ್ರಾಮಿಕ ರೋಗಗಳು ಹರಡುತ್ತವೆ. ಸ್ವಚ್ಛತೆಗೆ ಒತ್ತು ನೀಡುವ ನಿಟ್ಟಿನಲ್ಲಿ ಸರ್ಕಾರ ಮತ್ತು ಸ್ಥಳೀಯ ಆಡಳಿತಗಳು ಕಠಿಣ ಕ್ರಮಗಳನ್ನು ಕೈಗೊಳ್ಳುತ್ತಿವೆ. ಆದರೆ ಭಾರತದ ಸ್ವಚ್ಛ ನಗರಿ ಎಂದೇ ಹೆಸರುವಾಸಿಯಾಗಿರುವ ಮೈಸೂರಿನ ಸೌಂದರ್ಯಕ್ಕೆ ಎಲ್ಲೆಂದರಲ್ಲಿ ಕಸ ಎಸೆಯುವ ಸಾರ್ವಜನಿಕರ ಬೇಜವಾಬ್ದಾರಿ ನಡವಳಿಕೆಯಿಂದ ಭಾರಿ ಧಕ್ಕೆಯಾಗುತ್ತಿದೆ. ನಿತ್ಯದ ಕಸವನ್ನು ರಸ್ತೆಬದಿ, ಪಾರ್ಕ್‌ಗಳು ಮತ್ತು ಹೊರ ವರ್ತುಲ ರಸ್ತೆಗಳಲ್ಲಿ ಬಿಸಾಡುತ್ತಿರುವುದು ನಗರದ ನೈರ್ಮಲ್ಯಕ್ಕೆ ಕಂಟಕವಾಗಿದೆ.

ಪೌರಾಡಳಿತ ಸಂಸ್ಥೆಗಳ ಕಸದ ಗಾಡಿ ಬಂದಾಗ ಹಸಿ ಕಸ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ನೀಡುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ವಿದ್ಯಾವಂತರು ಅಥವಾ ಉನ್ನತ ಪದವಿ ಪಡೆದವರಲ್ಲಿ ಕಸ ಎಸೆಯುವ ಮನೋಭಾವ ಹೆಚ್ಚಾಗಿ ಕಂಡುಬರುವುದು ಇಂದಿನ ಸಮಾಜದ ದೊಡ್ಡ ವಿಪರ್ಯಾಸ. ಸಾಕ್ಷರತೆಗಿಂತಲೂ ಹೆಚ್ಚಾಗಿ, ಪರಿಸರ ಪ್ರಜ್ಞೆ ಮತ್ತು ಸಾಮಾಜಿಕ ಜವಾಬ್ದಾರಿಯ ಕೊರತೆಯೇ ಈ ಮನೋಭಾವಕ್ಕೆ ಮೂಲ ಕಾರಣವಾಗಿದೆ.

ರಸ್ತೆಗಳಲ್ಲಿ ಅಥವಾ ಎಲ್ಲೆಂದರಲ್ಲಿ ಕಸ ಎಸೆಯುವವರ ವಿರುದ್ಧ ಸ್ಥಳೀಯ ಸಂಸ್ಥೆಗಳು ಕಟ್ಟುನಿಟ್ಟಿನ ಕ್ರಮ ಕೈಗೊಂಡು ದಂಡ ವಿಧಿಸಿದರೂ ಎಲ್ಲೆಂದರಲ್ಲಿ ಕಸ ಎಸೆಯುವುದು ಕಡಿಮೆ ಆಗಿಲ್ಲ. ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ, ಚರಂಡಿ ಅಥವಾ ಖಾಲಿ ನಿವೇಶನಗಳು, ಹೀಗೆ ಎಲ್ಲೆಂದರಲ್ಲಿ ಕಸ ಎಸೆಯುವುದು ಶಿಕ್ಷಾರ್ಹ ಅಪರಾಧ. ನಿಯಮ ಉಲ್ಲಂಘಿಸಿ ಕಸ ಹಾಕುವವರಿಗೆ ಪಾಲಿಕೆಯು 500ರಿಂದ 1 ಸಾವಿರ ರೂ.ವರೆಗೆ ದಂಡ ವಿಧಿಸುತ್ತದೆ. ಅಲ್ಲದೇ ನಿಮ್ಮ ವಾರ್ಡ್‌ನಲ್ಲಿ ಯಾರಾದರೂ ಎಲ್ಲೆಂದರಲ್ಲಿ ಕಸ ಎಸೆದರೆ, ನೀವು ಸಾಕ್ಷಿ ಸಮೇತ(ಫೋಟೋ ಹಾಗೂ ವಿಡಿಯೋ) ಪಾಲಿಕೆ ಅಧಿಕಾರಿಗಳಿಗೆ ಮಾಹಿತಿ ನೀಡಬಹುದು. ಮಾಹಿತಿದಾರರ ಬಗ್ಗೆ ಗೌಪ್ಯತೆ ಕಾಪಾಡಿಕೊಂಡು, ತಪ್ಪಿತಸ್ಥರಿಗೆ ದಂಡ ವಿಧಿಸಲಾಗುತ್ತದೆ.

ನಾನು ಹಾಗೂ ನನ್ನ ಗೆಳೆಯ ಗಣೇಶ್ ಪ್ರತಿದಿನ ಬೆಳಿಗ್ಗೆ ವಾಯು ವಿಹಾರಕ್ಕೆ ಹೋಗುವ ಸಮಯದಲ್ಲಿ ಕಸ ಎಸೆಯುವವರು ಕಂಡಾಗ ಕಸ ಎಸೆಯದಂತೆ ಅವರಿಗೆ ವಿನಮ್ರವಾಗಿ ತಿಳಿಸಿ, ಇದರಿಂದ ಪರಿಸರ ಹಾಗೂ ಆರೋಗ್ಯದ ಮೇಲಾಗುವ ದುಷ್ಪರಿಣಾಮಗಳ ಬಗ್ಗೆ ವಿವರಿಸಿದ್ದೇವೆ. ಕೆಲವರು ಇದಕ್ಕೆ ಸ್ಪಂದಿಸಿದ್ದು, ಇನ್ನು ಕೆಲವರು ನಮ್ಮೊಂದಿಗೆ ಜಗಳವಾಡಿ ಹೋಗಿ ದ್ದಾರೆ. ಇನ್ನು ಕೆಲವರು 'ನನ್ನ ಮನೆ ಸ್ವಚ್ಛವಾಗಿದ್ದರೆ ಸಾಕು, ಬೇರೆಯವರ ಪರಿಸ್ಥಿತಿ ಏನಾದರೂ ಆಗಲಿ' ಎಂಬ ನಿರ್ಲಕ್ಷ್ಯದ ಮನೋಭಾವನೆಯಿಂದ ಕದ್ದು ಮುಚ್ಚಿ ಕಸ ಹಾಕಿ ಶರವೇಗದಲ್ಲಿ ಮಾಯವಾಗುತ್ತಾರೆ.

ವಿಜಯನಗರ 4ನೇ ಹಂತದಲ್ಲಿರುವ ನಮ್ಮ ಸಂಬಂಧಿ ಮನೆಯ ಪಕ್ಕದ ರಸ್ತೆಯಲ್ಲಿ ಎಲ್ಲರೂ ಕಸ ಸುರಿದು, ತ್ಯಾಜ್ಯದ ಗುಡ್ಡವೇ ನಿರ್ಮಾಣವಾಗಿ ದುರ್ವಾಸನೆ ಮೂಗಿಗೆ ಬಡಿಯುತ್ತಿತ್ತು. ಈ ಬಗ್ಗೆ ನಾನು ಹೂಟಗಳ್ಳಿ ನಗರ ಸಭೆ ಅಧಿಕಾರಿಗಳಿಗೆ ತಿಳಿಸಿದೆ. ನಂತರ ಆ ಜಾಗವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿ, ಅಲ್ಲಿ ಸಸಿಗಳನ್ನು ನೆಟ್ಟು ಸುಂದರವಾದ ಸ್ಥಳವಾಗಿ ಬದಲಿಸಲಾಯಿತು. ಆದರೂ ವಿದ್ಯಾವಂತರಾದವರು ಅದೇ ಸ್ಥಳದಲ್ಲಿ ಕಸ ಹಾಗೂ ಇನ್ನಿತರೆ ತ್ಯಾಜ್ಯವನ್ನು ಸುರಿದು ಮತ್ತೆ ಅದೇ ದುಃಸ್ಥಿತಿ ತಂದರು. ಜನರಲ್ಲಿ ಜಾಗೃತಿಯ ಕೊರತೆಯೇ ಅಥವಾ ಅವರಲ್ಲಿ ಪರಿಸರದ ಪ್ರಜ್ಞೆ ಇಲವೇ ಎಂದು ಗೊಣಗಿಕೊಂಡು ಏನೂ ಮಾಡಲಾಗದೇ ಸುಮ್ಮನಾದೆವು.

ಇದನ್ನೆಲ್ಲಾ ನೋಡಿದ ಮೇಲೆ ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆದವರಿಗೆ ವಿಧಿಸುವ ಶಿಕ್ಷೆ ಅಥವಾ ದಂಡದ ಬಗ್ಗೆ ಇವರಿಗೆ ಭಯ ಇಲ್ಲವೇ ಎಂಬ ಪ್ರಶ್ನೆ ಕಾಡುತ್ತದೆ. ಇಲ್ಲವೇ ನಾನು ಓದಿದ್ದೇನೆ. ಆದರೆ ನನ್ನ ಸ್ವಚ್ಛತೆಯ ಕೆಲಸವನ್ನು ಪಾಲಿಕೆ ಅಥವಾ ಸ್ವಚ್ಛತಾ ಸಿಬ್ಬಂದಿಯೇ ಮಾಡಬೇಕೆಂಬ ಭಾವನೆಯಿಂದ ಈ ರೀತಿ ವರ್ತಿಸುತ್ತಾರೋ ತಿಳಿಯದು. ಇದನ್ನೆಲ್ಲಾ ಕಂಡ ಮೇಲೆ ಶಿಕ್ಷಣದ ಜೊತೆಗೆ ಪರಿಸರ ಜಾಗೃತಿಯನ್ನು ಬಾಲ್ಯದಿಂದಲೇ ಕಡ್ಡಾಯವಾಗಿ ಬೆಳೆಸಬೇಕು ಎಂಬುದು ಅರಿವಾಯಿತು. ಸ್ವಚ್ಛ ಭಾರತ ಮತ್ತು ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಪ್ರತಿಯೊಬ್ಬ ನಾಗರಿಕನೂ ಸ್ವಯಂಪ್ರೇರಿತನಾಗಿ ಜವಾಬ್ದಾರಿಯುತವಾಗಿ ವರ್ತಿಸುವುದು ಅತ್ಯಗತ್ಯ. ಸ್ವಚ್ಛತೆಯೇ ನೈಜ ಆರೋಗ್ಯ ಮತ್ತು ಪ್ರಗತಿಯ ಸಂಕೇತವಾಗಿದ್ದು, ಈ ಬಗ್ಗೆ ಜನರಲ್ಲಿ ಅರಿವು ಮೂಡದ ಹೊರತು ಗಂಭೀರ ಕಸದ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗುವುದಿಲ್ಲ. ಹೇಸಿಗೆ ಮಾಡುವವರು ತಮ್ಮದೇ ಸಂತತಿಯ ಸೃಷ್ಟಿಸುವುದರಲ್ಲಿ ಸಂಶಯವೇ ಇಲ್ಲ.



ಟಿ.ಕೆ.ಹರೀಶ್,
ಹಿರಿಯ ಸಹಾಯಕ ನಿರ್ದೇಶಕರು,
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಎಸ್‌ಐಆರ್ ಮೂಲಕ ಮತಾಧಿಕಾರ ಹರಣದ ವಿರುದ್ಧ ಹೋರಾಟಕ್ಕೆ ಕಾಂಗ್ರೆಸ್ ಸನ್ನದ್ಧ

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಕಾರ್ಯಾಗಾರದಲ್ಲಿ ಒಮ್ಮತದ ನಿರ್ಣಯ

ಮೈಸೂರು, ಮೇ 25(ಎಂಕೆ)– ಎಸ್‌ಐಆರ್(ವಿಶೇಷ ತೀವ್ರ ಪರಿಷ್ಕರಣೆ) ಮತದಾರರ ಪಟ್ಟಿ ಪರಿಷ್ಕರಣೆಯಲ್ಲ, ಮತಾಧಿಕಾರದ ಹರಣ. ಆದ್ದರಿಂದ ದೇಶದಲ್ಲಿ ಪ್ರಜಾಪ್ರಭುತ್ವದ ವ್ಯವಸ್ಥೆ ಜಾರಿಗೆ ಬರಲು ಕಾರಣವಾದ ಕಾಂಗ್ರೆಸ್ ಪಕ್ಷವೇ ಮತಾಧಿಕಾರವನ್ನು ಉಳಿಸಿಕೊಳ್ಳುವ ಹೋರಾಟ ಮಾಡಬೇಕು ಎಂದು ಕರೆ ನೀಡಲಾಯಿತು.

ಮೈಸೂರಿನ ಜೆಪಿ ಫಾರ್ಚೂನ್ ಹೋಟೆಲ್‌ನಲ್ಲಿ ಸೋಮವಾರ ಮೈಸೂರು, ಕೊಡಗು ಮತ್ತು ಚಾಮರಾಜನಗರ ಜಿಲ್ಲಾ ಮತ್ತು ನಗರ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ 'ಎಸ್‌ಐಆರ್ ಮತ್ತು ವೋಟ್ ಮ್ಯಾಪಿಂಗ್' ಕುರಿತ ಕಾರ್ಯಾಗಾರದಲ್ಲಿ ರಾಜ್ಯದ ಪ್ರತಿಯೊಬ್ಬ ಮತದಾರರು, ಮತದಾರರ ಪಟ್ಟಿಯಲ್ಲಿ ಉಳಿಯುವಂತೆ ಮಾಡಬೇಕು ಎಂಬ ಸಂಕಲ್ಪ ಮಾಡಲಾಯಿತು.



ಮೈಸೂರಿನ ಜೆಪಿ ಫಾರ್ಚೂನ್ ಹೋಟೆಲ್‌ನಲ್ಲಿ ಸೋಮವಾರ ಮೈಸೂರು, ಕೊಡಗು ಮತ್ತು ಚಾಮರಾಜನಗರದ ನಗರ ಮತ್ತು ಜಿಲ್ಲಾ ಕಾಂಗ್ರೆಸ್ ವತಿಯಿಂದ 'ಎಸ್‌ಐಆರ್ ಮತ್ತು ವೋಟ್ ಮ್ಯಾಪಿಂಗ್' ಕುರಿತ ಕಾರ್ಯಾಗಾರದಲ್ಲಿ ಜಾಗೃತ ಕರ್ನಾಟಕ ಟೀಂ ಮುಖ್ಯಸ್ಥ ವಾಸು ಮಾತನಾಡಿದರು.

ಎಸ್‌ಐಆರ್ ಕುರಿತು ಮಾಹಿತಿ ನೀಡಿದ ಜಾಗೃತ ಕರ್ನಾಟಕ ಟೀಂ ಮುಖ್ಯಸ್ಥ ವಾಸು, ಮತದಾರರ ಪರಿಷ್ಕರಣೆಗೆ ದೇಶದಲ್ಲಿ ಯಾರ ವಿರೋಧವೂ ಇಲ್ಲ. ಆದರೆ, ಎಸ್‌ಐಆರ್ ಹೆಸರಿನಲ್ಲಿ ಮತದಾರರನ್ನು ಹೊರ ಹಾಕುವ ಕೆಲಸ ನಡೆಯುತ್ತಿದೆ. ರಾಜ್ಯದ ಪ್ರತಿಯೊಬ್ಬ ಮತದಾರರು ಹೊಸದಾಗಿ ಅರ್ಜಿ ಸಲ್ಲಿಸಬೇಕು ಎಂದರು.

ಮತದಾರರ ಪಟ್ಟಿಗೆ ಈ ಮೊದಲು ನಿರಂತರ ನವೀಕರಣದ ಜೊತೆಗೆ ವರ್ಷಕ್ಕೊಮ್ಮೆ (ಜೂ.25ರೊಳಗೆ) ಸಾರಾಂಶ ಪರಿಷ್ಕರಣೆ ಹಾಗೂ ಹತ್ತು ವರ್ಷಕ್ಕೊಮ್ಮೆ ತೀವ್ರ ಪರಿಷ್ಕರಣೆ ನಡೆಯುತ್ತಿತ್ತು. ಆದರೆ, ಈಗ ಹೊಸದಾಗಿಯೇ ಎನುಮರೇಷನ್ ಫಾರಂ ನೀಡಿ ಹೊಸದಾಗಿ ಪಟ್ಟಿ ತಯಾರಿಸುತ್ತಿದ್ದು, 2002 ಮತ್ತು 2025ರ ಮತದಾರರ ಪಟ್ಟಿಯನ್ನು ಹೊಂದಾಣಿಕೆ ಮಾಡಲಾಗುವುದು ಎಂದು ತಿಳಿಸಿದರು.

ಎಸ್‌ಐಆರ್‌ನಿಂದಾಗಿ ತಮಿಳುನಾಡಿನಲ್ಲಿ 71 ಲಕ್ಷ, ಬಿಹಾರದಲ್ಲಿ 47 ಲಕ್ಷ, ಗುಜರಾತ್‌ನಲ್ಲಿ 68 ಲಕ್ಷ, ಮಧ್ಯಪ್ರದೇಶದಲ್ಲಿ 34 ಲಕ್ಷ, ರಾಜಸ್ಥಾನದಲ್ಲಿ 31 ಲಕ್ಷ, ಛತ್ತೀಸ್ ಘಡದಲ್ಲಿ 25 ಲಕ್ಷ, ಕೇರಳದಲ್ಲಿ 9 ಲಕ್ಷ, ಉತ್ತರಪ್ರದೇಶದಲ್ಲಿ 2.04 ಕೋಟಿ ಹಾಗೂ ಪಶ್ಚಿಮ ಬಂಗಾಳದಲ್ಲಿ 91 ಲಕ್ಷ ಮತದಾರರು ಮತದಾರರ ಪಟ್ಟಿಯಿಂದ ಡಿಲೀಟ್ ಆಗಿದ್ದು, ಮುಂದಿನ ಸರದಿ ಕರ್ನಾಟಕದ್ದಾಗಿದೆ ಎಂದು ಎಚ್ಚರಿಸಿದರು.

ಬಿಎಲ್‌ಎಗಳ ನೇಮಕ ಮಾಡಿ: ರಾಜ್ಯದಲ್ಲಿ ಜೂ.30ರಿಂದ ಎಸ್‌ಐಆರ್ ಆರಂಭವಾಗಲಿದ್ದು, ಚುನಾವಣಾ ಆಯೋಗದ ಮ್ಯಾನುಯೆಲ್ ಪ್ರಕಾರವೇ ಆಯಾ ಬೂತ್ ವ್ಯಾಪ್ತಿಯ ಬಿಎಲ್‌ಒಗಳೊಂದಿಗೆ ರಾಜಕೀಯ ಪಕ್ಷಗಳ ಬಿಎಲ್‌ಎಗಳನ್ನು ನಿಯೋಜಿಸಿ, ಸೂಕ್ತ ದಾಖಲೆಗಳನ್ನು ಒದಗಿಸುವ ಮೂಲಕ ಮತದಾರರ ಪಟ್ಟಿಯಿಂದ ಯಾರೊಬ್ಬರನ್ನು ಕೈ ಬಿಡದಂತೆ ಎಚ್ಚರ ವಹಿಸಬೇಕು. ಹಾಗೆಯೇ ಮತದಾರರ ನೆರವು ಕೇಂದ್ರ ಸ್ಥಾಪನೆ, ಎಸ್‌ಐಆರ್ ಮಾಹಿತಿಯುಳ್ಳ ಕರಪತ್ರಗಳ ವಿತರಣೆ ಮೂಲಕ ಮತದಾನದ ಮಹತ್ವ ತಿಳಿಸುವ ಕಾರ್ಯವನ್ನು ಒಟ್ಟಾಗಿ ಮಾಡಬೇಕಿದೆ. ಕಾಂಗ್ರೆಸ್ ರಾಜ್ಯದ ಜನತೆಗೆ ಮನೆ ಬಾಗಿಲಿಗೆ ಹೋಗಲು ಇದೊಂದು ಉತ್ತಮ ಅವಕಾಶವಾಗಿದೆ ಎಂದು ಹೇಳಿದರು. ಈ ವೇಳೆ

> **ಮುಖ್ಯವಾಗಿ ಎಸ್‌ಐಆರ್ ಮೂಲಕ ಮತದಾರರ ಪಟ್ಟಿಯಿಂದ ಡಿಲೀಟ್ ಆಗಿರುವುದು ಮಧ್ಯಮ, ಬಡ ಹಾಗೂ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ. ಅದರಲ್ಲೂ ಕಾಂಗ್ರೆಸ್ ಮತದಾರರನ್ನೇ ಪಟ್ಟಿಯಿಂದ ಹೊರಗಿಡುವ ಹುನ್ನಾರ ನಡೆಸಲಾಗುತ್ತಿದೆ. ಇದಕ್ಕೆ ಪಶ್ಚಿಮಬಂಗಾಳದ ಚುನಾವಣಾ ಫಲಿತಾಂಶ ಪ್ರತ್ಯಕ್ಷ ಸಾಕ್ಷಿ.**
> **–ವಾಸು, ಜಾಗೃತ ಕರ್ನಾಟಕ ಟೀಂ ಮುಖ್ಯಸ್ಥ**

ಸಭೆಯಲ್ಲಿ ಶಾಸಕರಾದ ತನ್ವೀರ್ ಸೇಠ್, ಅನಿಲ್ ಚಿಕ್ಕಮಾದು, ಎ.ಆರ್.ಕೃಷ್ಣಮೂರ್ತಿ, ಕೆ.ಹರೀಶ್‌ಗೌಡ, ಗಣೇಶ್ ಪ್ರಸಾದ್, ರವಿಶಂಕರ್, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಹೆಚ್.ಪಿ.ಮಂಜುನಾಥ್, ನರೇಂದ್ರ, ಬೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ, ಮೃಗಾಲಯದ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ, ಕೆಪಿಸಿಸಿ ಉಪಾಧ್ಯಕ್ಷ ಚಂದ್ರಮೌಳಿ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಸಿ.ಬಸವರಾಜು, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಕೊಡಗು ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ, ಚಾಮರಾಜನಗರ ಜಿಲ್ಲಾಧ್ಯಕ್ಷ ಮರಿಸ್ವಾಮಿ, ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಡಿಸಿಸಿ ವಕ್ತಾರ ಹುಣಸೂರು ಬಸವಣ್ಣ, ಕಾರ್ಯದರ್ಶಿ ಉತ್ತನಹಳ್ಳಿ ಶಿವಣ್ಣ, ಶಿವಪ್ರಸಾದ್, ಕೆ.ಮಹೇಶ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ತಂಬಾಕು ಉತ್ಪನ್ನ ಕಳ್ಳ ಸಾಗಾಣೆ...! ಜೈಲು ವಾರ್ಡನ್‌ಗೆ ಜೈಲು!



ಮೈಸೂರು, ಮೇ 25(ಜಿಎ)–ಜೈಲು ವಾರ್ಡನ್ ಜೈಲು ಸೇರಿದ್ದಾರೆ! ಜೈಲಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಿದ್ದವನು, ನಿಷೇಧಿತ ವಸ್ತುಗಳು ಜೈಲಿನೊಳಗೆ ಬರದಂತೆ ತಡೆಯಬೇಕಿದ್ದ ಇದೇ ಜೈಲು ವಾರ್ಡನ್ ತಂಬಾಕು ಉತ್ಪನ್ನಗಳ ಜೈಲಿನೊಳಗೆ ಕಳ್ಳಸಾಗಣೆ ಮಾಡಲು ಹೋಗಿ ಸಿಕ್ಕಿಬಿದ್ದು, ಕಂಬಿ ಎಣಿಸುತ್ತಿದ್ದಾನೆ. ಈ ಒಂದು ಘಟನೆಗೆ ಮೈಸೂರು ಕೇಂದ್ರ ಕಾರಾಗೃಹ ಸಾಕ್ಷಿಯಾಗಿದೆ.

ಬಂಧಿತ ಹೆಚ್.ಆರ್.ರಮೇಶ್, ಜೈಲು ವಾರ್ಡರ್ ಆಗಿ ಕಾರ್ಯನಿರ್ವಹಿಸುತ್ತಿದ್ದ. ಬಂಧನದ ಬಳಿಕ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಸದ್ಯ ರಮೇಶ್‌ರನ್ನು ನಂಜನಗೂಡು ಜೈಲಿನಲ್ಲಿಡಲಾಗಿದೆ. ಈ ಸಂಬಂಧ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೈಲಿನ ಆರೋಗ್ಯ ಕೇಂದ್ರದಲ್ಲಿ ಅನಾರೋಗ್ಯಕ್ಕೀಡಾದ ಖೈದಿಗಳನ್ನು ನೋಡಿಕೊಳ್ಳಲು ರಮೇಶ್‌ನ ನಿಯೋಜಿಸಲಾಗಿತ್ತು. ಈತ, ವಿಚಾರಾಣಾಧಿನ ಖೈದಿ ಸಯ್ಯದ್ ಶಕೀಬ್ ಅಲಿಯಾಸ್ 'ಪಾನಿಪುರಿ' ಜೊತೆ ನಿರಂತರವಾಗಿ, ಅನುಮಾನಾಸ್ಪದವಾಗಿ ಮಾತನಾಡುತ್ತಿರುವುದು, ಸಂಪರ್ಕದಲ್ಲಿರುವುದು ಸಿಸಿಟಿವಿ ಕ್ಯಾಮರಾದಲ್ಲಿ ಕಂಡುಬಂದ ಹಿನ್ನೆಲೆಯಲ್ಲಿ ಜೈಲು ಅಧಿಕಾರಿಗಳು ಅವನ ಮೇಲೆ ನಿಗಾ ವಹಿಸಿದ್ದರು.

ಮೇ 22ರಂದು ಸಂಜೆ ಸುಮಾರು 5.45ರ ವೇಳೆಗೆ ರಮೇಶ್ ಕರ್ತವ್ಯ ಮುಗಿದರೂ, ಜೈಲು ಆವರಣ ಪ್ರವೇಶಿಸಲು ಯತ್ನಿಸಿದಾಗ, ಸಹಾಯಕ ಜೈಲರ್ ಎನ್.ಶಿವಕುಮಾರ್ ಅವರು ಜೈಲರ್ ಎಸ್.ಬಿ.ಕುಂದರನಾದ ಅವರ ಸಮ್ಮುಖದಲ್ಲಿ ತಪಾಸಣೆ ನಡೆಸಿದ್ದಾರೆ. ಈ ವೇಳೆ ರಮೇಶ್ ಒಳಉಡುಪು ಹಾಗೂ ಸಾಕ್ಸ್‌ಗಳಲ್ಲಿ ಅಡಗಿಸಿದ್ದ ನಿಷೇಧಿತ ವಸ್ತುಗಳು ಪತ್ತೆಯಾಗಿವೆ.

ವಶಪಡಿಸಿಕೊಂಡ ವಸ್ತುಗಳಲ್ಲಿ 10 ಗ್ರಾಂ ತೂಕದ ಮೂರು ಪ್ಯಾಕೆಟ್ ಚೂರು ತಂಬಾಕು, 6 ಗ್ರಾಂ ತೂಕದ ಎರಡು ಪ್ಯಾಕೆಟ್ ಫಿಲ್ಟರ್ ತಂಬಾಕು ಪುಡಿ, ನಾಲ್ಕು ಪ್ಯಾಕೆಟ್ ಬೀಡಿಗಳು ಸೇರಿವೆ. ಜೈಲು ಸುಧಾರಣಾ ಕಾಯ್ದೆ ಅಡಿಯಲ್ಲಿ ಇವು ನಿಷೇಧಿತ ವಸ್ತುಗಳಾಗಿವೆ ಎಂದು ಜೈಲು ಅಧಿಕಾರಿಗಳು ತಿಳಿಸಿದ್ದಾರೆ.

ಘಟನೆಯ ಮಾಹಿತಿಯನ್ನು ಮೇಲಧಿಕಾರಿಗಳಿಗೆ ನೀಡಲಾಗಿದ್ದು, ಸಹಾಯಕ ಜೈಲು ಅಧೀಕ್ಷಕಿ ಎಂ.ದೀಪಾ ಅವರು ಮಂಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಾದ ಬಳಿಕ ಆತನ ಬಂಧಿಸಿ ಕೋರ್ಟ್‌ಗೆ ಹಾಜರುಪಡಿಸಿದ್ದು, ನ್ಯಾಯಾಲಯವೂ ನ್ಯಾಯಾಂಗ ಬಂಧನ ವಿಧಿಸಿದೆ.

ನಾನಾ ದಾಖಲೆಗಳ ಬಹುಮುಖ ಪ್ರತಿಭೆ ಯುಕ್ತಾಗೆ 'ಆರ್ಯಭಟ' ಪುರಸ್ಕಾರ

ಮೈಸೂರು, ಮೇ 25– ವಿಶೇಷ ಪ್ರತಿಭೆ ಮೂಲಕ ಹಲವು ದಾಖಲೆ ಮಾಡಿರುವ ಮೈಸೂರಿನ ಪುಟ್ಟ ಬಾಲಕಿ, ಆರ್ಯಭಟ ಅಂತಾರಾಷ್ಟ್ರೀಯ ಪ್ರಶಸ್ತಿಗೆ ಭಾಜನಳಾಗಿದ್ದಾಳೆ.

ಮೈಸೂರಿನ ಎಕ್ಸೆಲ್ ಪಬ್ಲಿಕ್ ಸ್ಕೂಲ್‌ನ ಒಂದನೇ ತರಗತಿ ವಿದ್ಯಾರ್ಥಿನಿ ಯುಕ್ತಾ ಶೈವ ಬಹುಮುಖ ಪ್ರತಿಭೆ. ಈ ಹಿನ್ನೆಲೆಯಲ್ಲಿ ಆರ್ಯಭಟ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಕೊಡಮಾಡುವ 'ಆರ್ಯಭಟ ಅಂತಾರಾಷ್ಟ್ರೀಯ ಪ್ರಶಸ್ತಿ'ಯನ್ನು ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ಗಣ್ಯರಿಂದ ಯುಕ್ತಾ ಶೈವ ಸ್ವೀಕರಿಸಿದ್ದಾಳೆ. ಈಕೆ ಭಾರತೀಯ ಸೇನೆಯಲ್ಲಿ ಮೇಜರ್ ಆಗಿ ಸೇವೆ ಸಲ್ಲಿಸುತ್ತಿರುವ ಸುಪ್ರೀತ್ ಹೆಚ್.ಸಿ. ಮತ್ತು ಕಲಾಕೃತಿಯ ಕಲಾವಿದೆ ಹಾಗೂ ಎಸ್‌ಜೆಸಿಇ ಕಾಲೇಜಿನ ಮಾಜಿ ಉಪನ್ಯಾಸಕಿ ಕೃತಿಕಾ ಹೆಚ್.ಎಸ್. ದಂಪತಿಯ ಪುತ್ರಿ.

ಬಾಲ್ಯದಿಂದಲೇ ಅದ್ಭುತ ನೆನಪಿನ ಶಕ್ತಿ ಮತ್ತು ಕಲಿಯುವ ಆಸಕ್ತಿ ಹೊಂದಿದ್ದ ಯುಕ್ತಾ, ಹಂತ ಹಂತವಾಗಿ ಹಲವು ದಾಖಲೆ ಮಾಡುವ ಮೂಲಕ ಇದೀಗ ಬಹುಮುಖ ಪ್ರತಿಭೆಯಾಗಿ ಹೊರಹೊಮ್ಮಿದ್ದಾಳೆ. ಪ್ರತಿಭೆಯಿದ್ದರೂ ಸಾಧನೆ ಸುಲಭ ಸಾಧ್ಯವಲ್ಲ. ಅದಕ್ಕೆ ಶಿಸ್ತು ಮತ್ತು ನಿರಂತರ ಪರಿಶ್ರಮ ಅತ್ಯವಶ್ಯ ಎನ್ನುವುದಕ್ಕೆ ಈ ಬಾಲಕಿ ಸಾಕ್ಷಿಯಾಗಿದ್ದಾಳೆ. ಮಕ್ಕಳು ಮೊಬೈಲ್ ಹಾಗೂ ಟಿವಿಗೆ ಅಂಟಿಕೊಂಡಿರುವ ಪ್ರಸ್ತುತ ಯುಕ್ತಾಳ ದಿನಚರಿ, ಅಭ್ಯಾಸ, ಹವ್ಯಾಸಗಳು ಮಾದರಿಯಾಗಿವೆ.

ಹತ್ತಾರು ದಾಖಲೆ: ಐದು ವರ್ಷ ಮೂರು ತಿಂಗಳ ಪ್ರಾಯದಲ್ಲೇ ಯುಕ್ತಾ ಅನೇಕ ಪ್ರತಿಷ್ಠಿತ ದಾಖಲೆ ಪುಸ್ತಕಗಳಲ್ಲಿ ಸ್ಥಾನ ಪಡೆದಿದ್ದಾಳೆ. ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್, ಕರ್ನಾಟಕ ಅಚೀವರ್ಸ್ ಬುಕ್ ಆಫ್ ರೆಕಾರ್ಡ್ಸ್, ಬ್ರಿಟಿಷ್ ವರ್ಲ್ಡ್ ರೆಕಾರ್ಡ್, ನೋಬಲ್ ವರ್ಲ್ಡ್ ರೆಕಾರ್ಡ್, ಕಲಾಂಸ್ ವರ್ಲ್ಡ್ ರೆಕಾರ್ಡ್ಸ್(2025) ಸೇರಿದಂತೆ ಹತ್ತಾರು ದಾಖಲೆಗಳು ಇವಳ ಹೆಸರಿನಲ್ಲಿರುವುದು ಗಮನಾರ್ಹ.



ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಬಾಲ ಪ್ರತಿಭೆ ಯುಕ್ತಾ ಶೈವಗೆ ಗಣ್ಯರಿಂದ ಆರ್ಯಭಟ 'ಅಂತಾರಾಷ್ಟ್ರೀಯ ಪ್ರಶಸ್ತಿ' ನೀಡಲಾಯಿತು.

ಗೌರವ–ಪುರಸ್ಕಾರಗಳಿಗೆ ಭಾಜನ: ಆರ್ಯಭಟ ಅಂತರಾಷ್ಟ್ರೀಯ ಪ್ರಶಸ್ತಿ ಜೊತೆಗೆ ನ್ಯಾಷನಲ್ ಬುಕ್ ಆಫ್ ರೆಕಾರ್ಡ್ಸ್‌ನಿಂದ ಭಾರತ ವಿಭೂಷಣ, ಸ್ವರ್ಣ ಭಾರತ ಫೌಂಡೇಶನ್‌ನಿಂದ ಇಂಡಿಯನ್ ಐಕಾನ್ ಅವಾರ್ಡ್–2026, ಇಂಡಿಯನ್ ಫೋರಂ ವತಿಯಿಂದ ರಾಷ್ಟ್ರೀಯ ಬಾಲ ಪುರಸ್ಕಾರ, ಸ್ವರ್ಣ ಭಾರತ ಫೌಂಡೇಶನ್ ವತಿಯಿಂದ ಇಂಡಿಯನ್ ಐಕಾನ್ ಅವಾರ್ಡ್–2026, 9 ಫಿಗರ್ ಮೀಡಿಯಾ ಮತ್ತು ಬೆಂಗಳೂರು ಔಟ್‌ರೀಚ್ ಸಂಸ್ಥೆಯ ವತಿಯಿಂದ ವಂದೇ ಮಾತರಂ ಪ್ರಶಸ್ತಿ', ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್‌ನಿಂದ ವಚನ ಗಾನ ವಾಗ್ದೇವಿ ಬಿರುದು ಸೇರಿದಂತೆ ವಿವಿಧ ಸಂಸ್ಥೆಗಳ ಗೌರವ–ಪುರಸ್ಕಾರಕ್ಕೆ ಯುಕ್ತಾ ಶೈವ ಭಾಜನಳಾಗಿದ್ದಾಳೆ. ಅತ್ಯಂತ ಕಡಿಮೆ ಸಮಯದಲ್ಲಿ ಸಂಕೀರ್ಣ ವಿಷಯಗಳನ್ನು ನೆನಪಿಟ್ಟುಕೊಂಡು ಪ್ರಸ್ತುತಪಡಿಸುವ ಇವಳ ಸಾಮರ್ಥ್ಯಕ್ಕೆ 'ಅಸಾಧಾರಣ ಗ್ರಹಿಕೆ ಶಕ್ತಿ ಹೊಂದಿರುವ ಪ್ರತಿಭಾನ್ವಿತ ಮಗು' ಎಂಬ ಬಿರುದು ಲಭಿಸಿದೆ. ಅಲ್ಲದೆ, ಮೈಸೂರು ಆಕಾಶವಾಣಿಯ 'ಚೈತನ್ಯ ಚಿಲುಮೆ–ಮಕ್ಕಳ ಮಂಟಪ' ಕಾರ್ಯಕ್ರಮದಲ್ಲೂ ಇವಳ ಸಾಧನೆ ಮೂಡಿಬಂದಿದೆ.

ಬಹುಮುಖ ಪ್ರತಿಭೆ: 20 ಶ್ಲೋಕಗಳನ್ನು ಕೇವಲ 2 ನಿಮಿಷ 40 ಸೆಕೆಂಡುಗಳಲ್ಲಿ ವಾಚಿಸುವುದು. 25ಕ್ಕೂ ಹೆಚ್ಚು ಕನ್ನಡ ವಚನಗಳು, 30ಕ್ಕೂ ಹೆಚ್ಚು ಪದ್ಯಗಳು ಹಾಗೂ 23 ಭಕ್ತಿಗೀತೆ, ಜಾನಪದ ಮತ್ತು ದೇಶಭಕ್ತಿ ಗೀತೆಗಳನ್ನು ನಿರರ್ಗಳವಾಗಿ ಹಾಡುವುದು. 95ಕ್ಕೂ ಹೆಚ್ಚು ಹಾಡುಗಳ ಕಂಠಪಾಠ ಸೇರಿದಂತೆ ಅನೇಕ ಪ್ರತಿಭೆಗಳು ಯುಕ್ತಾಗೆ ಒಲಿದಿವೆ. 3 ವರ್ಷದವಳಿದ್ದಾಗಿನಿಂದಲೇ ಭರತನಾಟ್ಯ ಮತ್ತು ಶಾಸ್ತ್ರೀಯ ಸಂಗೀತವನ್ನೂ ಕಲಿಯುತ್ತಿದ್ದಾಳೆ. ಹೀಗೆ, ಕಲೆ–ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುವ ಈ ಪುಟ್ಟ ಬಾಲಕಿ, ತನ್ನ ಶಿಸ್ತುಬದ್ಧ ಜೀವನ ಮತ್ತು ಪರಿಶ್ರಮದಿಂದ ಇಂದಿನ ಪೀಳಿಗೆಗೆ ಪ್ರೇರಣೆಯಾಗಿದ್ದಾಳೆ.

ನಿಯಮ ಉಲ್ಲಂಘನೆ ಆರೋಪ; ಎಂಪೈರ್ ಹೋಟೆಲ್ ವಿರುದ್ಧ ಡಿಸಿಪಿಗೆ ಜಯ ಕರ್ನಾಟಕ ಸಂಘಟನೆ ದೂರು

ಮೈಸೂರು,ಮೇ 25(ಎಂಕೆ)–ಮೈಸೂರಿನ ವಿವಿ ಮೊಹಲ್ಲಾದಲ್ಲಿರುವ ಎಂಪೈರ್ ಹೋಟೆಲ್ ಕಾನೂನು ನಿಯಮ ಉಲ್ಲಂಘಿಸಿ ತಡರಾತ್ರಿಯವರೆಗೂ ಕಾರ್ಯಾಚರಿಸುತ್ತಿದ್ದು, ಕೂಡಲೇ ಹೋಟೆಲ್ ಮಾಲೀಕರ ವಿರುದ್ಧ ಕ್ರಮಕೈಗೊಳ್ಳುವಂತೆ ಒತ್ತಾಯಿಸಿ ಜಯ ಕರ್ನಾಟಕ ಸಂಘಟನೆ ವತಿಯಿಂದ ಮೈಸೂರು ನಗರ ಉಪ ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಲಾಗಿದೆ. ಹೋಟೆಲ್, ರೆಸ್ಟೋರೆಂಟ್‌ಗಳಿಗೆ ರಾತ್ರಿ 11 ಗಂಟೆಯವರೆಗೆ ಕಾರ್ಯಾಚರಿಸಲು ಕಾನೂನಿನಲ್ಲಿ ಅವಕಾಶವಿದೆ. ಆದರೆ, ಎಂಪೈರ್ ಹೋಟೆಲ್ ಮಾಲೀಕರು ಕಾನೂನು ನಿಯಮ ಉಲ್ಲಂಘಿಸಿ ತಡರಾತ್ರಿ 3 ಗಂಟೆವರೆಗೂ ಹೋಟೆಲ್ ನಡೆಸುತ್ತಿದ್ದಾರೆ ಎಂದು ದೂರಿನಲ್ಲಿ ಜಯ ಕರ್ನಾಟಕ ಸಂಘಟನೆಯ ಶ್ರೀಹರ್ಷ ದೂರಿದ್ದಾರೆ.

ರಾತ್ರಿ 10 ಗಂಟೆಯಾಗುತ್ತಿದ್ದಂತೆ ಸಣ್ಣ–ಪುಟ್ಟ ಹೋಟೆಲ್‌ಗಳ ಬಾಗಿಲು ಮುಚ್ಚಿಸುವ ಪೊಲೀಸರು, ಎಂಪೈರ್ ಹೋಟೆಲ್ ತಡರಾತ್ರಿವರೆಗೂ ತೆರೆದಿದ್ದರೂ ಕ್ರಮ ವಹಿಸುತ್ತಿಲ್ಲವೇಕೇ ಎಂದು ಪ್ರಶ್ನಿಸಿರುವ ಅವರು, ಒಬ್ಬೊಬ್ಬರಿಗೆ ಒಂದೊಂದು ರೀತಿಯ ಕಾನೂನು ಪಾಲನೆಯಾಗುತ್ತಿದೆ. ಇದರಿಂದ ಬೇರೆ ಹೋಟೆಲ್ ವ್ಯಾಪಾರಿಗಳಿಗೆ ಅನ್ಯಾಯವಾಗಲಿದೆ. ಆದ್ದರಿಂದ ಕಾನೂನು ಎಲ್ಲರಿಗೂ ಒಂದೇ ರೀತಿ ಅನ್ವಯವಾಗಬೇಕು. ಈ ನಿಟ್ಟಿನಲ್ಲಿ ಕೂಡಲೇ ಎಂಪೈರ್ ಹೋಟೆಲ್ ಮಾಲೀಕರ ವಿರುದ್ಧ ಕ್ರಮ ಜರುಗಿಸುವಂತೆ ಅವರು ಆಗ್ರಹಿಸಿದ್ದಾರೆ.

ಮೌಲ್ಯಮಾಪನ ಕೇಂದ್ರದ ಸುತ್ತ ನಿಷೇಧಾಜ್ಞೆ


ಮೈಸೂರು, ಮೇ 25–ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಿರ್ದೇಶನದಂತೆ ಮೇ 26ರಿಂದ ಮೇ 31ರವರೆಗೆ 2025–26ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮೌಲ್ಯಮಾಪನ ಕಾರ್ಯ ಮೈಸೂರು ನಗರದ 6 ಕೇಂದ್ರಗಳಲ್ಲಿ ನಡೆಯಲಿದೆ. ಮೌಲ್ಯಮಾಪನದ ಪಾವಿತ್ರ್ಯತೆ ಕಾಪಾಡುವ ಸಲುವಾಗಿ ಮೌಲ್ಯಮಾಪನ ಕೇಂದ್ರಗಳಿಗೆ ಅನಗತ್ಯ ವ್ಯಕ್ತಿಗಳು, ಸಾರ್ವಜನಿಕರ ಪ್ರವೇಶ ನಿಷೇಧಿಸಬೇಕಾಗಿರುವುದರಿಂದ ಮೌಲ್ಯಮಾಪನ ಕಾರ್ಯ ಮುಗಿಯುವವರೆಗೂ ಕೇಂದ್ರಗಳ 200 ಮೀಟರ್ ವ್ಯಾಪ್ತಿ ಪ್ರದೇಶದ ಸುತ್ತಲೂ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಮೌಲ್ಯಮಾಪನ ಕೇಂದ್ರಗಳು: ಗೋಪಾಲಸ್ವಾಮಿ ಶಿಶುವಿಹಾರ ಹಿರಿಯ ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆ, ಲಕ್ಷ್ಮೀಪುರಂ, ಮೈಸೂರು, ಚಿನ್ಮಯ ವಿದ್ಯಾಲಯ, ಜಯಲಕ್ಷ್ಮೀಪುರಂ, ಮೈಸೂರು, ಜ್ಞಾನಗಂಗಾ ಪ್ರೌಢಶಾಲೆ ಕುವೆಂಪುನಗರ ಮೈಸೂರು, ಗುಡ್ ಶೆಫರ್ಡ್ ಕಾನ್ವೆಂಟ್ ಪ್ರೌಢಶಾಲೆ, ಲಷ್ಕರ್ ಮೊಹಲ್ಲಾ, ಮೈಸೂರು, ಸೇಂಟ್ ಫಿಲೋಮಿನಾ ಪ್ರೌಢಶಾಲೆ ಎನ್.ಆರ್.ಮೊಹಲ್ಲಾ ಮೈಸೂರು, ನಿರ್ಮಲ ಪ್ರೌಢಶಾಲೆ, ವಿ.ವಿ.ಮೊಹಲ್ಲಾ ಮೈಸೂರು. ಈ ಮೌಲ್ಯಮಾಪನ ಕೇಂದ್ರಗಳಿಗೆ ಸಂಬಂಧಪಟ್ಟ ಅಧಿಕಾರಿ ಮತ್ತು ಸಿಬ್ಬಂದಿ ಹೊರತುಪಡಿಸಿ ಇತರ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು. ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದೆಂದು ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ ಎಂದು ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆ–ಸೆಟ್, ಯುಜಿಸಿ–ನೆಟ್ ಪರೀಕ್ಷೆಗೆ ಉಚಿತ ತರಬೇತಿ

ಮೈಸೂರು: ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮೂಲಕ ನಡೆಸಲಿರುವ ರಾಜ್ಯ ಮಟ್ಟದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ (ಕೆ–ಸೆಟ್) ಮತ್ತು ನವದೆಹಲಿಯ ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗದವರು ನಡೆಸಲಿರುವ ರಾಷ್ಟ್ರಮಟ್ಟದ ಕಾಲೇಜು ಸಹಾಯಕ ಪ್ರಾಧ್ಯಾಪಕರ (ಯುಜಿಸಿ–ನೆಟ್) ಮತ್ತು ಕಿರಿಯ ಶಿಷ್ಯ ವೇತನ ಸಂಶೋಧನ ಸಹಾಯಕರ (ಜೆಆರ್‌ಎಫ್) ಅರ್ಹತಾ ಪರೀಕ್ಷೆಗಳಿಗೆ 45 ದಿನಗಳ ತರಬೇತಿ ನೀಡಲಾಗುತ್ತದೆ. ಆಸಕ್ತರು ಜೂ.1ರೊಳಗಾಗಿ ಸಂಜೆ 5.30 ರಿಂದ 7.30ರವರೆಗೆ ಮೈಸೂರಿನ ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜಿನಲ್ಲಿರುವ ಜ್ಞಾನಬುತ್ತಿ ಸಂಸ್ಥೆಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಯೋಜಕ ಕೆ.ವೈ.ನಾಗೇಂದ್ರ, ದೂ: 8296788251 ಹಾಗೂ ಸಿ.ಕೆ.ಕಿರಣ್ ಕೌಶಿಕ್, ದೂ: 9972830857 ಸಂಪರ್ಕಿಸಬಹುದೆಂದು ಕಾರ್ಯದರ್ಶಿ ಹೆಚ್.ಬಾಲಕೃಷ್ಣ (9448117455) ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುವೆಂಪುನಗರದ ಕೆಲವೆಡೆ ಮಣ್ಣು ಮಿಶ್ರಿತ ನೀರು ಪೂರೈಕೆ; ಆತಂಕ





ಕುವೆಂಪುನಗರದ ಕೆಲ ಪ್ರದೇಶಗಳಲ್ಲಿ ಮಣ್ಣು ಮಿಶ್ರಿತ ಕಲುಷಿತ ನೀರು ಪೂರೈಕೆ.

ಮೈಸೂರು, ಮೇ 25–ಮೈಸೂರಿನ ಕುವೆಂಪುನಗರದ ಕೆ–ಬ್ಲಾಕ್, ಐ– ಬ್ಲಾಕ್‌ನಲ್ಲಿ ಕಲುಷಿತ ನೀರು ಪೂರೈಕೆಯಾಗುತ್ತಿದೆ ಎಂದು ಸ್ಥಳೀಯರು ಆತಂಕಕ್ಕೀಡಾಗಿದ್ದಾರೆ. ಕಳೆದ ಕೆಲವು ದಿನಗಳಿಂದ ಜಸ್ಕೋ ಪೈಪ್‌ಲೈನ್‌ನಲ್ಲಿ ಸರಬರಾಜು ಮಾಡುತ್ತಿರುವ ನೀರು ಕಲುಷಿತವಾಗಿದೆ. ಪೂರೈಕೆಯಾದ ನೀರಲ್ಲಿ ನಿರಂತರವಾಗಿ ಮಣ್ಣು ಮಿಶ್ರಿತವಾಗಿರುತ್ತದೆ. ನಲ್ಲಿಗೆ ಬಟ್ಟೆ ಅಥವಾ ಜಾಲರಿ ಅಳವಡಿಸಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ. ಆ ನೀರನ್ನು ಕುಡಿಯುವ ಮಾತಿರಲಿ ಸ್ನಾನ ಇನ್ನಿತರ ನಿತ್ಯ ಕಾರ್ಯಗಳಿಗೆ ಬಳಸಿಕೊಳ್ಳುವುದಕ್ಕೂ ಭಯವಾಗುತ್ತಿದೆ ಎಂದು ಜನ ಅಳಲು ತೋಡಿಕೊಂಡಿದ್ದಾರೆ.

ಅನಿವಾರ್ಯ ಸಂದರ್ಭದಲ್ಲಿ ಈ ನೀರನ್ನು ಕುದಿಸಿ, ಬಳಸುವುದಕ್ಕೂ ಸಾಧ್ಯವಿಲ್ಲ. ಹಿರಿಯರು ಹಾಗೂ ಮಕ್ಕಳಲ್ಲಿ ಚರ್ಮದ ಸಮಸ್ಯೆ ಕಾಣಿಸುತ್ತಿವೆ. ಅನಾರೋಗ್ಯಪೀಡಿತರು ಈ ನೀರು ಬಳಕೆ ಮಾಡಿದರಂತೂ ಮತ್ತಷ್ಟು ಸಮಸ್ಯೆಗೀಡಾಗುತ್ತಾರೆ. ಮಣ್ಣು ಮಿಶ್ರಿತ ನೀರು ಬಳಸಿ ಜನರಿಗೆ ಗಂಭೀರ ಸಮಸ್ಯೆ ಉಂಟಾದರೆ ಯಾರು ಹೊಣೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೂಡಲೇ ಪಾಲಿಕೆ ಅಧಿಕಾರಿಗಳು ಪರಿಶೀಲನೆ ನಡೆಸಿ, ಶುದ್ಧ ಕುಡಿಯುವ ನೀರು ಪೂರೈಕೆಗೆ ಕ್ರಮ ವಹಿಸಬೇಕು. ಕಲುಷಿತ ನೀರು ಸೇವನೆ ಅಥವಾ ಬಳಕೆಯಿಂದ ಜನರ ಆರೋಗ್ಯದಲ್ಲಿ ವ್ಯತ್ಯಾಸವಾದರೆ ಅದಕ್ಕೆ ಪಾಲಿಕೆ ಅಧಿಕಾರಿಗಳೇ ನೇರ ಕಾರಣರಾಗುತ್ತಾರೆ ಎಂದು ಎಚ್ಚರಿಸಿದ್ದಾರೆ

> **ಪ್ರತಿಯೊಬ್ಬರಿಗೂ ಶುದ್ಧ ಕುಡಿಯುವ ನೀರು ಪೂರೈಸುವುದು ನಗರಪಾಲಿಕೆ ಆದ್ಯತೆ ಆಗಿರಬೇಕು. ಆದರೆ, ಕೆಲ ದಿನಗಳಿಂದ ಮಣ್ಣು ಮಿಶ್ರಿತ ನೀರು ಪೂರೈಕೆಯಾಗುತ್ತಿರುವ ಬಗ್ಗೆ ಪಾಲಿಕೆಗೆ ಮಾಹಿತಿ ನೀಡಿದ್ದರೂ ಕ್ರಮ ವಹಿಸಿಲ್ಲ. ಈಗಲಾದರೂ ಪಾಲಿಕೆ ಅಧಿಕಾರಿಗಳು ಎಚ್ಚೆತ್ತುಕೊಂಡು, ನಮ್ಮ ಸಮಸ್ಯೆಗೆ ಸ್ಪಂದಿಸಬೇಕು. –ಸ್ಥಳೀಯ ನಿವಾಸಿಗಳು.**

ವಿದ್ಯಾರ್ಥಿನಿಲಯ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು: ಮೈಸೂರಿನ ಚಾಮುಂಡಿಬೆಟ್ಟದಲ್ಲಿರುವ ಟಿ.ಎಸ್.ಸುಬ್ಬಣ್ಣ ಸಾರ್ವಜನಿಕ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ 2026–27ನೇ ಸಾಲಿನ ಪ್ರವೇಶಾತಿಗೆ 5ರಿಂದ 10ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಅಗತ್ಯ ದಾಖಲೆಗಳೊಡನೆ ಅರ್ಜಿ ಸಲ್ಲಿಸಲು ಜೂನ್ 8 ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ಮೊ: 9483730741 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ರಾಜ್ಯ, ದೇಶಕ್ಕೆ ತಮಿಳುನಾಡಿನ ಟಿವಿಕೆ ಥರ ಪಕ್ಷ, ವಿಜಯ್ ರೀತಿಯ ನಾಯಕನ ಅವಶ್ಯಕತೆ ಇದೆ

ಈಗಿನ ರಾಜಕೀಯ ಥೂ...ಥೂ... ಎಂದ ಎಂಎಲ್‌ಸಿ ವಿಶ್ವನಾಥ್

ಮೈಸೂರು, ಮೇ 25(ಜಿಎ)–ರಾಜ್ಯ, ದೇಶಕ್ಕೆ ಹೊಸ ಪಕ್ಷ ಮತ್ತು ನಾಯಕನ ಅಗತ್ಯವಿದೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ತಿಳಿಸಿದ್ದಾರೆ.

ಮೈಸೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ತಮಿಳುನಾಡಿನ ವಿಜಯ್ ರೀತಿ ದೇಶಕ್ಕೆ ಮತ್ತು ರಾಜ್ಯಕ್ಕೆ ಹೊಸ ಪಕ್ಷ ಹಾಗೂ ಹೊಸ ನಾಯಕರ ಅವಶ್ಯಕತೆ ಇದೆ. ಜಾತಿ, ಧರ್ಮ, ಭಾಷೆ ಎಂದು ಇನ್ನೂ ಎಷ್ಟು ವರ್ಷ ಓಟು ಕೇಳುತ್ತೀರಾ ಎಂಬ ವಿಜಯ್ ಹೇಳಿಕೆ ಸರಿ ಇದೆ. ಅವರ ಮಾತಿಗೆ ನನ್ನ ಬೆಂಬಲವಿದೆ ಎಂದು ಹೇಳಿದರು.

ವಿಜಯ್ ಅವರ ಟಿವಿಕೆ ರೀತಿ ನಮ್ಮ ರಾಜ್ಯದಲ್ಲೂ ಬೇರೆ ಪಕ್ಷ ಬರಬೇಕು. ವಿಜಯ್ ಕೊಟ್ಟಿರುವ ಎಲ್ಲಾ ಭರವಸೆಗಳನ್ನು ಈಡೇರಿಸುವುದು ಕಷ್ಟ, ಆದರೆ ಯಾವ ರೀತಿ ಗ್ಯಾರಂಟಿ ಅನುಷ್ಠಾನಕ್ಕೆ ತರುತ್ತಾರೆಂದು ನೋಡಬೇಕಿದೆ. ಕಾಕ್ರೋಚ್ ಪಾರ್ಟಿ ಅಂತಹವರು ಮುಂದೆ ಬರಬೇಕು. ದೇಶದಲ್ಲಿ ಬದಲಾವಣೆ ಆಗಬೇಕು ಎಂದರು.

ರಾಜ್ಯಸಭೆಗೆ ಹೆಚ್.ಡಿ.ದೇವೇಗೌಡರ ಆಯ್ಕೆ ಕುರಿತು ಪ್ರತಿಕ್ರಿಯಿಸಿ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಮತ್ತೊಮ್ಮೆ ರಾಜ್ಯಸಭೆಗೆ ಆಯ್ಕೆ ಮಾಡಬೇಕು. ದೇವೇಗೌಡರು ದೇಶ ಕಂಡ ಅತ್ಯಂತ ಹಿರಿಯ ರಾಜಕಾರಣಿಗಳಲ್ಲಿ ಒಬ್ಬರಾಗಿದ್ದಾರೆ. ಅವರ ರಾಜಕೀಯ ಅನುಭವ ಮುಂದೆಯೂ ಅಗತ್ಯವಿದೆ. ಹಾಗಾಗಿ ಅವರನ್ನು ಮತ್ತೊಂದು ಅವಧಿಗೆ ರಾಜ್ಯಸಭೆಗೆ ಆಯ್ಕೆ ಮಾಡಬೇಕು. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಕೂಡ ಒಲವು ಹೊಂದಿದ್ದಾರೆ ಎಂದರು.



ವಿಶೇಷ ಏನಿಲ್ಲ: ರಾಜ್ಯಕ್ಕೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಭೇಟಿ ಕುರಿತು ಮಾತನಾಡಿ, ಪಕ್ಷ ಬಲವರ್ಧನೆ ಮಾಡಬೇಕು. ಹೀಗಾಗಿ ಅವರು ರಾಜ್ಯಕ್ಕೆ ಬಂದಿದ್ದಾರೆ. ಕಾರ್ಯಕರ್ತರಿಗೆ ಪಕ್ಷವನ್ನು ಅಧಿಕಾರಕ್ಕೆ ತರಲು ಸಲಹೆ ಸೂಚನೆ ಕೊಡುತ್ತಾರೆ. ಅದರಲ್ಲಿ ವಿಶೇಷತೆ ಏನಿಲ್ಲ. ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ವಿಚಾರ ರಾಜಕೀಯದ ಬಗ್ಗೆ ನಾನು ಮಾತನಾಡಲ್ಲ. ಈಗಿನ ರಾಜಕೀಯ ವ್ಯವಸ್ಥೆ ಕುಲಗೆಟ್ಟು ಹೋಗಿದೆ. ವಿಜಯೇಂದ್ರ, ಅಶೋಕ್, ಸಿದ್ದರಾಮಯ್ಯ ಯಾರಿಗೂ ನೈತಿಕತೆ ಇಲ್ಲ. ಯಾವುದೇ ರಾಜಕೀಯ ಪಕ್ಷಕ್ಕೂ ನೈತಿಕತೆ ಇಲ್ಲ. ಈಗಿನ ರಾಜಕೀಯ ಥೂ... ಥೂ... ಎಂದು ಬೇಸರ ವ್ಯಕ್ತಪಡಿಸಿದರು.

ದಿನೇ ದಿನೆ ಪೆಟ್ರೋಲ್ ಡೀಸೆಲ್ ಬೆಲೆ ಹೆಚ್ಚುತ್ತಿದೆ. ಹೀಗೇ ಆದರೆ ಎತ್ತಿನ ಗಾಡಿ ಓಡಿಸಬೇಕಷ್ಟೇ. ಟಾಂಗಾ ಗಾಡಿ ಯಲ್ಲೂ ಓಡಾಡಬೇಕಾಗುತ್ತೆ. ಈ ದೇಶವನ್ನು ದೇವರೇ ಕಾಪಾಡಬೇಕು ಎಂದು ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆಗೆ ವಿಶ್ವನಾಥ್ ವ್ಯಂಗ್ಯವಾಡಿದರು.

ಹಣಕಾಸು ವಿಚಾರಕ್ಕೆ ಸಂಬಂಧಿಸಿದಂತೆ ತಮ್ಮ ಮೇಲೆ ಎಫ್‌ಐಆರ್ ದಾಖಲಾಗಿರುವ ಬಗ್ಗೆ ಪ್ರತಿಕ್ರಿಯಿಸಿ, ಯಾವೋನ್ರೀ ಅವನು ಕೋಟೆಹುಂಡಿ ಮಹದೇವು. ನಾನೊಬ್ಬ ಹಿರಿಯ ರಾಜಕಾರಣಿ, ಅವನ ಜೊತೆಗೆ ನನ್ನನ್ನು ಹೋಲಿಕೆ ಮಾಡ್ಬೇಡಿ. ನಾನು ಕೋಟೆಹುಂಡಿ ಮಹದೇವು ಬಳಿ ಯಾವುದೇ ಹಣ ಪಡೆದಿಲ್ಲ. ನನ್ನ ಮೇಲೆ ಸುಳ್ಳು ಆರೋಪ ಮಾಡಲಾಗಿದೆ ಎಂದು ಹೇಳಿದರು.

ಎಂ.ಟಿ.ಬಿನಾಗರಾಜ್ ಹಾಗೂ ನಾನು ಒಳ್ಳೆಯ ಸ್ನೇಹಿತರು. ನನಗೆ ಹಣ ಕೊಟ್ಟಿದ್ದರೆ ಎಂಟಿಬಿ ನಾಗರಾಜ್ ಕೇಳುತ್ತಾರೆ. ಮಧ್ಯದಲ್ಲಿ ಇವನ್ಯಾರ್ರೀ ಕೇಳೋಕೆ?. ನಾನು ಹಿರಿಯ ನಾಯಕ, ನನ್ನ ಬಗ್ಗೆ ಮಾತನಾಡುವ ಮೊದಲು ಯೋಚನೆ ಮಾಡಲಿ. ನಾನು ಕೂಡ ಒಬ್ಬ ವಕೀಲ. ಈಗಾಗಲೇ ನನ್ನ ಮೇಲೆ ಐದು ಕೇಸು ಹಾಕಿದ್ದಾರೆ. ಸಚಿವ ಭೈರತಿ ಸುರೇಶ್ 50 ಕೋಟಿ ಮಾನನಷ್ಟ ಮೊಕದ್ದಮೆ ಹಾಕಿದ್ದಾನೆ. ನನ್ನ ಮೇಲೆ ಕೇಸ್ ಹಾಕಿರುವವರೆಲ್ಲ ಸಿದ್ದರಾಮಯ್ಯನ ಚೇಲಾಗಳು ಎಂದು ಕಿಡಿಕಾರಿದರು.

ಶಿಕ್ಷಣ ಸಚಿವರಿಂದ ರಾಜ್ಯದಲ್ಲಿ ಶಿಕ್ಷಣ ವ್ಯವಸ್ಥೆ ಹಾಳು

- ಇಂಗ್ಲಿಷ್ ಮೀಡಿಯಂ ಶಾಲೆಗೆ ಶಿಕ್ಷಕರು ಎಲ್ಲಿದ್ದಾರೆ?
- 6ನೇ ತರಗತಿ ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಏಕೆ?
- ಶಿಕ್ಷಣ ಸಚಿವರು ಬರೀ ಬೊಗಳೆ ಬಿಡುತ್ತಿದ್ದಾರೆ

ಮೈಸೂರು, ಮೇ 25(ಜಿಎ)–ಶಿಕ್ಷಣ ಸಚಿವರಿಂದ ರಾಜ್ಯದಲ್ಲಿ ಶಿಕ್ಷಣ ವ್ಯವಸ್ಥೆ ಹಾಳಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಶಾಲಾ ಶಿಕ್ಷಣದ ಬಗ್ಗೆ ಶಿಕ್ಷಣ ಸಚಿವರು ಸಾಹಿತಿ ದೇವನೂರು ಮಹದೇವ ಅವರನ್ನು ಭೇಟಿ ಮಾಡಿದ ಬಳಿಕ ಹಲವು ನಿರ್ಧಾರಗಳನ್ನು ತೆಗೆದುಕೊಳ್ಳಲು ಹೊರಟಿದ್ದಾರೆ. ಆದರೆ, ಕಳೆದ ಮೂರು ವರ್ಷಗಳಿಂದ ಶಿಕ್ಷಣ ಸಚಿವರು ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಹಾಳು ಮಾಡಿದ್ದಾರೆ ಎಂದು ಕಿಡಿಕಾರಿದರು.

ಈ ಸಾಲಿನಿಂದಲೇ ಆಂಗ್ಲ ಮಾಧ್ಯಮದಲ್ಲಿ ಶಿಕ್ಷಣ ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಆಂಗ್ಲ ಮಾಧ್ಯಮದಲ್ಲಿ ಬೋಧನೆ ಮಾಡಲು ಶಿಕ್ಷಕರು ಎಲ್ಲಿದ್ದಾರೆ? 6ನೇ ತರಗತಿಯಿಂದಲೇ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಆದರೆ, ಆ ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಏಕೆ? ಪಿಯುಸಿ ಓದಿರುವವರೇ ಪರೀಕ್ಷೆಗಳಲ್ಲಿ ಫೇಲ್ ಆಗುತ್ತಿದ್ದಾರೆ. ಮತ್ತೊಂದೆಡೆ 3ನೇ ತರಗತಿಯಿಂದ ದೈಹಿಕ ಶಿಕ್ಷಣ, ಕಲೆ, ಸಾಹಿತ್ಯ ಬೋಧನೆ ಮಾಡುತ್ತೇವೆ ಎಂದಿದ್ದಾರೆ. ಇದಕ್ಕೆಲ್ಲ ಶಿಕ್ಷಕರು ಎಲ್ಲಿದ್ದಾರೆ. ಶಿಕ್ಷಣ ಸಚಿವರು ಬರೀ ಬೊಗಳೆ ಬಿಡುತ್ತಿದ್ದಾರೆ. ಹೀಗೆ ಶಿಕ್ಷಣ ಕ್ಷೇತ್ರವನ್ನು ಅಧೋಗತಿಗೆ ಕೊಂಡೊಯ್ಯುತ್ತಿದ್ದಾರೆ ಎಂದು ವ್ಯಂಗ್ಯವಾಡಿದರು.

ಐದು ವರ್ಷಗಳಲ್ಲಿ ಎಲ್ಲಾ ಖಾಸಗಿ ಶಾಲೆಗಳನ್ನು ಮುಚ್ಚಿಸಿ ಸರ್ಕಾರಿ ಶಾಲೆಗಳನ್ನಾಗಿ ಮಾಡುತ್ತೇವೆ ಅಂದಿದ್ದಾರೆ. ಅದು ಸಾಧ್ಯವೇ. ಶಿಕ್ಷಣ ತಜ್ಞರ ಸಮಿತಿಯನ್ನೇ ಮಾಡಿಲ್ಲ. ಯಾವುದೇ ಮಾರ್ಗ ಸೂಚಿಗಳನ್ನು ಪ್ರಕಟಿಸಿಲ್ಲ. ಮಕ್ಕಳ ಮುಗ್ಧ ಮನಸ್ಸಿನ ಮೇಲೆ ಒತ್ತಡ ಹೇರಲು ಹೊರಟಿದ್ದಾರೆ. ಶಿಕ್ಷಣ ಸಚಿವರಿಗೆ ನೈತಿಕತೆ ಇಲ್ಲ. ಶಿಕ್ಷಣ ಸಚಿವರ ಹೇಳಿಕೆ ನಗೆಪಾಟಲಿನಂತಿವೆ. ಇದು ರಾಜ್ಯ ಸರ್ಕಾರದ 6ನೇ ಗ್ಯಾರಂಟಿಯಾಗಿದ್ದು ಬರೀ ಸುಳ್ಳಿನ ಕಂತೆಯಾಗಿದೆ. ಸಿಎಂ ಸಿದ್ದರಾಮಯ್ಯ ಇತ್ತ ಗಮನ ಹರಿಸಬೇಕು. ಶಿಕ್ಷಣ ಸಚಿವ ಮಧುಬಂಗಾರಪ್ಪರನ್ನು ಬದಲಿಸಿ ಅನುಭವವಿರುವ ಶಾಸಕನಿಗೆ ಶಿಕ್ಷಣ ಖಾತೆ ನೀಡಬೇಕು ಎಂದು ತಿಳಿಸಿದರು.

ಭ್ರಷ್ಟಾಚಾರ, ಮುಖ್ಯಾಧಿಕಾರಿಯ ಸರ್ವಾಧಿಕಾರಿ ಧೋರಣೆ ಖಂಡಿಸಿ

ಮಾಜಿ ಸಚಿವ ಸಿಎಸ್‌ಪಿ ನೇತೃತ್ವದಲ್ಲಿ ಪುರಸಭೆಗೆ ಮುತ್ತಿಗೆ

ಶ್ರೀರಂಗಪಟ್ಟಣ–ಜೇವರ್ಗಿ ಮುಖ್ಯರಸ್ತೆಯಲ್ಲಿ ರಸ್ತೆ ತಡೆ

ಪುರಸಭೆಯಲ್ಲಿ ಕಂಡುಕೇಳರಿಯದ ಭ್ರಷ್ಟಾಚಾರ ನಡೆಯುತ್ತಿದೆ. ಇಲ್ಲಿನ ಮುಖ್ಯಾಧಿಕಾರಿ ಸತೀಶ್‌ಕುಮಾರ್ ಜನರಿಂದ ಕೋಟಿಗಟ್ಟಲೆ ಹಣ ವಸೂಲಿ ಮಾಡುತ್ತಿದ್ದಾನೆ. ಜಿಲ್ಲಾಧಿಕಾರಿಗಳ ಆದೇಶವನ್ನೇ ತಿರುಚುತ್ತಿದ್ದಾನೆ, ಕೆಳಮಟ್ಟದ ಅಧಿಕಾರಿಗಳು, ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕರಿಗೆ ಬ್ಲಾಕ್ ಮೇಲ್ ಮಾಡುತ್ತಿದ್ದಾನೆ. ಈತ ನಡೆಸಿರುವ ಭ್ರಷ್ಟಾಚಾರದ ಬಗ್ಗೆ ದಾಖಲೆಗಳಿವೆ, ಈತನ ಮೇಲೆ ಲೋಕಾಯುಕ್ತ ರೇಡ್ ಸೇರಿದಂತೆ ಹಲವು ಆರೋಪಗಳಿವೆ ಜಿಲ್ಲಾಧಿಕಾರಿಗಳು ದಾಖಲೆ ಪರಿಶೀಲಿಸಿ ಕೆಲಸದಿಂದ ವಜಾಗೊಳಿಸಬೇಕು.
– ಸಿ.ಎಸ್.ಪುಟ್ಟರಾಜು, ಮಾಜಿ ಸಚಿವರು.





ಪಾಂಡವಪುರದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಭಾರೀ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ನಂತರ ಪುರಸಭೆಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಪಾಂಡವಪುರ: ಪುರಸಭೆ ಭ್ರಷ್ಟಾಚಾರ, ಮುಖ್ಯಾಧಿಕಾರಿಯ ಸರ್ವಾಧಿಕಾರಿ ಧೋರಣೆ ಖಂಡಿಸಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರ ನೇತೃತ್ವದಲ್ಲಿ ಪಟ್ಟಣದ ನಿವಾಸಿಗಳು ಹಾಗೂ ಜೆಡಿಎಸ್ ಪಕ್ಷದ ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿ ಪಾಂಡವಪುರ ಪುರಸಭೆಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಐದು ದೀಪದ ವೃತ್ತದಲ್ಲಿ ಬೃಹತ್ ಸಂಖ್ಯೆಯಲ್ಲಿ ಜಮಾಯಿಸಿದ ಪಟ್ಟಣದ ನಿವಾಸಿಗಳು ಹಾಗೂ ಜೆಡಿಎಸ್ ಪಕ್ಷದ ಕಾರ್ಯಕರ್ತರು ಸಿ.ಎಸ್.ಪುಟ್ಟರಾಜು ಅವರ ನೇತೃತ್ವದಲ್ಲಿ ಶ್ರೀರಂಗಪಟ್ಟಣ–ಜೇವರ್ಗಿ ಮುಖ್ಯರಸ್ತೆ ತಡೆದು ಪ್ರತಿಭಟನೆ ನಡೆಸಿ, ಬಳಿಕ ಪಟ್ಟಣದ ಪುರಸಭೆವರೆಗೂ ಮೆರವಣಿಗೆಯಲ್ಲಿ ತೆರಳಿ, ಮುತ್ತಿಗೆ ಹಾಕಿ ಪುರಸಭೆ ಮುಖ್ಯಾಧಿಕಾರಿ ಹಾಗೂ ಶಾಸಕರ ವಿರುದ್ಧ ಆಕ್ರೋಶ ಹೊರಹಾಕಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಉಪವಿಭಾಗೀಯ ಕೇಂದ್ರ ಸ್ಥಾನವಾಗಿದ್ದರೂ ಸಣ್ಣ ಹಳ್ಳಿಯಂತಿದ್ದ ಪಟ್ಟಣವನ್ನು ನಾನು ಶಾಸಕನಾದ ಬಳಿಕ ಬಸ್ ನಿಲ್ದಾಣ, ಡಿಪೋ, ಕ್ರೀಡಾಂಗಣ, 100 ಹಾಸಿಗೆಯ ಆಸ್ಪತ್ರೆ, ಪಾರ್ಕ್‌ಗಳು, ಅಗ್ನಿಶಾಮಕ ಠಾಣೆ, ರಸ್ತೆಗಳು ಸೇರಿದಂತೆ ಸಾಕಷ್ಟು ಅಭಿವೃದ್ಧಿಪಡಿಸಿದ್ದೇನೆ. 2006ರ ನನ್ನ ಶಾಸಕ ಅವಧಿಯಲ್ಲಿ ಪಟ್ಟಣದಲ್ಲಿ 550ಕ್ಕೂ ಅಧಿಕ ನಿವೇಶನ ಹಂಚಿಕೆ ಮಾಡಿದ್ದೇನೆ. ಅರ್ಜಿದಾರರ ಅರ್ಜಿ ಶುಲ್ಕವನ್ನು ಸಹ ನನ್ನ ಶಾಸಕರ ಸಂಬಳದಿಂದಲೇ ಭರಿಸಿದ್ದೇನೆ. ಇದೀಗ ಹಂಚಿಕೆ ಮಾಡಲು ಮುಂದಾಗಿರುವ 175 ನಿವೇಶನಗಳನ್ನು ಸಹ ನಾವೆ ಗುರುತಿಸಿ ಇಟ್ಟಿದ್ದೆವು. 175 ಸೈಟು ಹಂಚಿಕೆ ಬದಲು ಮತ್ತಷ್ಟು ಬಡಜನರಿಗೆ ನಿವೇಶನ ಹಂಚಿಕೆ ಮಾಡಬೇಕೆಂದು ಚಂದ್ರೆ ಬಡಾವಣೆಯ ಬಳಿ ಸುಮಾರು 25 ಎಕರೆ ಸರಕಾರಿ ಜಮೀನನ್ನು ಗುರುತಿಸಿ ನಿವೇಶನ ಮಾರ್ಪಾಡು ಮಾಡಲು ಮುಂದಾಗಿದ್ದೆ. ಬದಲಾದ ರಾಜಕೀಯದಿಂದ ಅದು ಸಾಧ್ಯವಾಗಲಿಲ್ಲ. ಶಾಸಕರು ನ್ಯಾಯಯುತವಾಗಿ ನಿವೇಶನ ಹಂಚಿಕೆ ಮಾಡಬೇಕು, ಆಯಾ ಬಡಾವಣೆಯ ಬಡವರಿಗೆ ಅಲ್ಲಿಯೇ ನಿವೇಶನ ಹಂಚಿಕೆ ಮಾಡುವ ಕೆಲಸಕ್ಕೆ ಮುಂದಾಗಬೇಕು. ಶಾಸಕರಿಗೆ ಬಡವರ ಬಗ್ಗೆ ಕಳಕಳಿ ಇದ್ದರೆ ಈಗಾಗಲೆ ಗುರುತಿಸಿರುವ 25 ಎಕರೆ ಜಮೀನಿನಲ್ಲಿ ನಿವೇಶನ ರಚಿಸಿ ಒಟ್ಟಿಗೆ ಹಂಚಿಕೆ ಮಾಡಿ ಎಂದರು.

ಜಿಪಂ ಮಾಜಿ ಸದಸ್ಯ ಎಚ್.ಮಂಜುನಾಥ್ ಮಾತನಾಡಿ, ಕ್ಷೇತ್ರದಲ್ಲಿ ಶಾಸಕರ ಹಿಡಿತ ಇಲ್ಲದ ಕಾರಣ, ಎಲ್ಲಾ ಇಲಾಖೆಯಲ್ಲೂ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಶಾಸಕರು ಅಧಿಕಾರಿಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳುವಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟುವಲ್ಲಿ ವಿಫಲರಾಗಿದ್ದಾರೆ ಎಂದರು.

ಪುರಸಭೆ ಮಾಜಿ ಅಧ್ಯಕ್ಷ ಆರ್.ಸೋಮಶೇಖರ್ ಮಾತನಾಡಿ, ಪಟ್ಟಣದಲ್ಲಿ ಸಾವಿರಾರು ಮಂದಿ ಬಡವರು ಇದ್ದಾರೆ. ಶಾಸಕರು ನಿವೇಶನ ಹಂಚಿಕೆ ಮಾಡುವುದಾದರೆ ಮತ್ತಷ್ಟು ನಿವೇಶನಗಳನ್ನು ಗುರುತಿಸಿ ಎಲ್ಲರಿಗೂ ಹಂಚಿಕೆ ಮಾಡಿ, ಪುರಸಭೆಯಲ್ಲಿ ಭ್ರಷ್ಟಾಚಾರ ನಡೆಸುತ್ತಿರುವ ಮುಖ್ಯಾಧಿಕಾರಿ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ಒತ್ತಾಯಿಸಿದರು.

ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್, ಜಿಪಂ ಮಾಜಿ ಸದಸ್ಯ ಸಿ.ಅಶೋಕ್, ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಪುರಸಭೆ ಮಾಜಿ ಸದಸ್ಯರಾದ ಎಂ.ಗಿರೀಶ್, ಹಾರೋಹಳ್ಳಿ ಕೃಷ್ಣ, ಚಂದ್ರು, ಶಿವಕುಮಾರ್, ಜ್ಯೋತಿಲಕ್ಷ್ಮಿ, ಸುನೀತ, ಅರ್ಚನಚಂದ್ರು, ಚಿಕ್ಕಾಡೆಗಿರೀಶ್, ನಿರ್ದೇಶಕ ಪಿ.ಎಲ್. ಆದರ್ಶ, ರಾಮಕೃಷ್ಣೇಗೌಡ, ಬೊಮ್ಮರಾಜು, ಮಾಣಿಕ್ಯನಹಳ್ಳಿ ಅಶೋಕ್, ಹೇಮಾವತಿ ರಾಜೇಶ್, ಎಚ್‌ಎಸ್‌ವಿ ಸ್ವಾಮೀಗೌಡ, ಬಕೋಡಿ, ರಾಚಯ್ಯ ಹಾಜರಿದ್ದರು.

ಬೊಪ್ಪಸಮುದ್ರ ನಾಲೆಯಲ್ಲಿ ಸಂಶಯಾಸ್ಪದವಾಗಿ ಸಿಕ್ಕ ಯುವಕನ ಶವ

ಭಾರತೀನಗರ, ಮೇ 25– ಇಲ್ಲಿಗೆ ಸಮೀಪದ ಬೊಪ್ಪಸಮುದ್ರ ವಿಶ್ವೇಶ್ವರಯ್ಯ ನಾಲೆಯಲ್ಲಿ ಯುವಕನ ಶವವೊಂದು ಸಿಕ್ಕಿದ್ದು, ಯುವಕ ಸಂಶಯಾಸ್ಪದವಾಗಿ ಸಾವನ್ನಪ್ಪಿದ್ದಾನೆಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಮಂಡ್ಯ ಬಳಿಯ ಹೌಸಿಂಗ್ ಬೋರ್ಡ್ ನಿವಾಸಿ ಜಾವೇಗ್ (28) ಸಾವನ್ನಪ್ಪಿದ ಯುವಕ ಎಂದು ಗುರುತಿಸಲಾಗಿದೆ.

ಕಳೆದ ಶನಿವಾರ ಜಾವೇಗ್ ಹಾಗೂ ಆತನ ಸ್ನೇಹಿತರು ಇದೇ ಮಂಡ್ಯ ತಾಲೂಕಿನ ಭೂತನಹೊಸೂರು ಗ್ರಾಮದ ಬಳಿಯ ವಿಸಿ ನಾಲೆಯ ಬಳಿ ಪಾರ್ಟಿಮಾಡಲು ಹೋಗಿದ್ದರು.

ಈ ಸಂದರ್ಭದಲ್ಲಿ ಸ್ನೇಹಿತರ ನಡುವೆ ಮಾತಿನ ಚಕಮಕಿ ನಡೆದಿದೆ ಎನ್ನಲಾಗಿದ್ದು, ತಕ್ಷಣವೇ ಜಾವೇಗ್ ವಿಸಿ ನಾಲೆಗೆ ಹಾರಿದ್ದಾನೆಂದು ತಿಳಿದು ಬಂದಿದೆ. ಭಾನುವಾರ ಮಧ್ಯಾಹ್ನದ ವೇಳೆಗೆ ಶವವು ಬೊಪ್ಪಸಮುದ್ರ ಬಳಿಯ ನಾಲೆಯಲ್ಲಿ ಕಂಡುಬಂದಿದೆ.

ರೈತರು ಹೊಲಕ್ಕೆ ಹೋಗುವ ಸಂದರ್ಭ ಶವಕಾಣಿಸಿದ್ದು ತಕ್ಷಣವೇ ಪೊಲೀಸರಿಗೆ ವಿಷಯ ತಿಳಿಸಿದ್ದಾರೆ. ತಕ್ಷಣವೇ ಗ್ರಾಮಸ್ಥರ ಸಹಕಾರೊಂದಿಗೆ ಶವವನ್ನು ಹೊರಕ್ಕೆ ತೆಗೆಸಿ ಮಂಡ್ಯ ಆಸ್ಪತ್ರೆಗೆ ಸ್ಥಳಾಂತರಿಸಿದ್ದಾರೆ. ನಂತರ ಈತ ಹೌಸಿಂಗ್ ಬೋರ್ಡ್ ನಿವಾಸಿ ಜಾವೇಗ್ ಎಂದು ತಿಳಿದು ಬಂದಿದ್ದು, ಯುವಕನ ತಂದೆ–ತಾಯಿ ಮನವಿ ಮೇರೆಗೆ ಶವವನ್ನು ವಾರಸುದಾರರಿಗೆ ಒಪ್ಪಿಸಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಕೆ.ಎಂ.ದೊಡ್ಡಿ ಪೊಲೀಸರು ಜಾವೇಗ್ ಪೋಷಕರು ನೀಡಿದ ಕೊಲೆಯ ಯತ್ನಕ್ಕೆ ಸಂಬಂಧಿಸಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದು, ಆರಕ್ಷಕ ನಿರೀಕ್ಷಕ ಅನೀಲ್ ರವರ ನೇತೃತ್ವದಲ್ಲಿ ಪ್ರಕರಣ ಬೇದಿಸಲು ತಂಡ ರಚಿಸಲಾಗಿದೆ.

ಬಲಮುರಿಯಲ್ಲಿ ಪ್ರವಾಸಿಗರ ಸುರಕ್ಷತೆಗೆ ಆದ್ಯತೆ ನೀಡಿ

ಪ್ರವಾಸಿಗರು ಸುರಕ್ಷತಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು- ಡಾ.ಕುಮಾರ



ಜಿಲ್ಲಾಧಿಕಾರಿ ಡಾ.ಕುಮಾರ್ ತಮ್ಮ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿದರು.

ಮಂಡ್ಯ, ಮೇ 25– ಶ್ರೀರಂಗಪಟ್ಟಣ ತಾಲೂಕಿನ ಬಲಮುರಿ ಪ್ರವಾಸಿ ತಾಣಗಳಲ್ಲಿ ಕಾವೇರಿ ನದಿಗೆ ಇಳಿದು ಹಲವರು ಪ್ರಾಣ ಕಳೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಬಲಮುರಿ ಪ್ರವಾಸಿಗರ ಸುರಕ್ಷತೆಗೆ ಹೆಚ್ಚು ಆದ್ಯತೆಗೆ ಕ್ರಮ ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಸೂಚಿಸಿದ್ದಾರೆ.

ಇಂದು ತಮ್ಮ ಕಚೇರಿಯಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಬಲಮುರಿ ಪ್ರವಾಸಿ ತಾಣಗಳಲ್ಲಿ ಕಾವೇರಿ ನದಿಗೆ ಇಳಿದು ಹಲವರು ಪ್ರಾಣ ಕಳೆದುಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮ ಸಂಬಂಧ ಸಭೆ ನಡೆಸಿ ಮಾತನಾಡಿದರು.


ಪ್ರವಾಸಿಗರ ಸುರಕ್ಷತೆಗೆ ಹೆಚ್ಚು ಆದ್ಯತೆಗೆ ಪೊಲೀಸ್ ಇಲಾಖೆ, ಪ್ರವಾಸೋದ್ಯಮ ಇಲಾಖೆ ಹಾಗೂ ಕಾವೇರಿ ನೀರಾವರಿ ನಿಗಮದಿಂದ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು. ಬಲಮುರಿ ಮತ್ತು ಸುತ್ತಮುತ್ತಲಿನ ಅಪಾಯಕಾರಿ ಸ್ಥಳಗಳಲ್ಲಿ ಸಾರ್ವಜನಿಕರು ಹಾಗೂ ಪ್ರವಾಸಿಗರು ನದಿಗೆ ಇಳಿಯುವುದನ್ನು ಮತ್ತು ಈಜುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ ಹಾಗೂ ಸುರಕ್ಷತೆ ಇಲ್ಲದ ತೆಪ್ಪ ಬಳಸುವುದು ನಿಷೇಧಿಸಿದೆ ಎಂದು ಅವರು ತಿಳಿಸಿದರು.

ಪ್ರವಾಸೋದ್ಯಮ ಇಲಾಖೆ, ಕಾವೇರಿ ನೀರಾವರಿ ನಿಗಮ, ತಾಲೂಕು ತಹಸೀಲ್ದಾರ್ ಹಾಗೂ ಪೊಲೀಸ್ ಇನ್‌ಸ್ಪೆಕ್ಟರ್ ಸೇರಿದಂತೆ ಸಮಿತಿ ರಚಿಸಲಾಗಿದೆ. ಎಚ್ಚರಿಕೆ ಫಲಕಗಳ ಅಳವಡಿಕೆ ನದಿಯ ನೀರಿನ ತೀವ್ರತೆ ಹಾಗೂ ನೀರಿನ ಆಳದ ಅರಿವಿಲ್ಲದೆ ಪ್ರವಾಸಿಗರು ಪ್ರಾಣ ಕಳೆದುಕೊಳ್ಳುತ್ತಿರುವುದರಿಂದ, ನದಿ ಪಾತ್ರದ ಅಪಾಯಕಾರಿ ವಲಯಗಳಲ್ಲಿ ದೊಡ್ಡದಾದ ಎಚ್ಚರಿಕೆ ಮತ್ತು ಸೂಚನಾ ಫಲಕಗಳನ್ನು ಪ್ರದರ್ಶಿಸಲು ಕ್ರಮ ಕೈಗೊಳ್ಳಬೇಕು ಎಂದು ಅವರು ತಿಳಿಸಿದರು.

ಪ್ರವಾಸಿಗರಿಗೆ ಸ್ಥಳ ಬಗ್ಗೆ ಮಾರ್ಗದರ್ಶನ ನೀಡಲು ಹೋಂ ಗಾರ್ಡ್ ನೇಮಕ ಮಾಡಬೇಕು. ಸಿಸಿ ಕ್ಯಾಮೆರಾ ಅಳವಡಿಸಬೇಕು ಹಾಗೂ ಧ್ವನಿವರ್ಧಕ ಮೂಲಕ ಪ್ರವಾಸಿಗರಿಗೆ ಮಾಹಿತಿ ನೀಡಬೇಕು ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್ಪಿ ಡಾ.ಶೋಭಾರಾಣಿ, ನದಿಯ ತಟದಲ್ಲಿ ಪ್ರವಾಸಿಗರಿಗೆ ಎಚ್ಚರಿಕೆ ನೀಡಲು ಗೃಹರಕ್ಷಕ ದಳದ ಸಿಬ್ಬಂದಿಯನ್ನು ನಿಯೋಜಿಸಬೇಕು ಹಾಗೂ ಬಲಮುರಿಯಿಂದ ಪೊಲೀಸರು ನಿರಂತರ ನಿಗಾವಹಿಸುತ್ತಾರೆ ಎಂದರು.

ಕಾರು ಡಿಕ್ಕಿ: ಬೈಕ್ ಸವಾರ ಸಾವು



ಹಲಗೂರು: ಸಮೀಪದ ಡಿ.ಹಲಸಹಳ್ಳಿ ಗ್ರಾಮದ ಶಿರಡಿ ಸಾಯಿ ಬಾಬಾ ದೇವಸ್ಥಾನ ಸಮೀಪ ಇನ್ನೋವಾ ಕಾರು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಸೋಮವಾರ ಸಂಭವಿಸಿದೆ.

ಮೃತರನ್ನು ಹುಲ್ಲಹಳ್ಳಿ ಗ್ರಾಮದ ನಿವಾಸಿ ಶಿವಣ್ಣ (48) ಎಂದು ಗುರುತಿಸಲಾಗಿದೆ. ಹಲಗೂರು ಕಡೆಯಿಂದ ಮಳವಳ್ಳಿ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಸಾಗುತ್ತಿದ್ದ ಇನ್ನೋವಾ ಕಾರು, ಮಳವಳ್ಳಿ ಕಡೆಗೆ ಬರುತ್ತಿದ್ದ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಈ ದುರ್ಘಟನೆ ಸಂಭವಿಸಿದೆ ಎಂದು ತಿಳಿದುಬಂದಿದೆ.

ಅಪಘಾತದಲ್ಲಿ ಬೈಕ್‌ನ ಹಿಂಬದಿ ಸವಾರ ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಳವಳ್ಳಿ ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ಹಲಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿ ನಿಲಯಗಳಿಗೆ ಅರ್ಜಿ ಆಹ್ವಾನ

ಮಂಡ್ಯ, ಮೇ 25– ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮಂಡ್ಯ ತಾಲೂಕಿನ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿಗೆ (ಪಿಯುಸಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪ.ಜಾ/ಪ.ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ಅರ್ಹ ವಿದ್ಯಾರ್ಥಿಗಳಿಂದ 2025–26ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಜೂ.15 ಕೊನೆ ದಿನ. ವಿದ್ಯಾರ್ಥಿನಿಲಯದಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ಅರ್ಹತಾ ವಿದ್ಯಾರ್ಥಿ ವೇತನ ಹೊರತುಪಡಿಸಿ ಇತರೆ ಯಾವುದೇ ವಿದ್ಯಾರ್ಥಿ ವೇತನಕ್ಕೆ ಅರ್ಹರಾಗಿರುವುದಿಲ್ಲ. ಅರ್ಜಿ ಸಲ್ಲಿಸಲು http://shp. karnataka.gov.in/bcwd ಸಂಪರ್ಕಿಸುವಂತೆ ಮಂಡ್ಯ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ತಾಲೂಕು ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಕಾಂಗ್ರೆಸ್ ಗೊಂದಲಕ್ಕೆ ಇಂದು ಪರಿಹಾರ

ನಾನು ಬದ್ಧನಾಗಿರುತ್ತೇನೆ. ಕೊನೆಯವರೆಗೂ ನನ್ನ ಪ್ರಯತ್ನವನ್ನು ಮುಂದುವರೆಸುವುದಾಗಿಯೂ ಸಿದ್ದರಾಮಯ್ಯ ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ. ಅಷ್ಟೇ ಅಲ್ಲ, ವರಿಷ್ಠರ ಮೇಲೆ ಒತ್ತಡ ಹೇರುವ ಉದ್ದೇಶದಿಂದಲೇ ದೆಹಲಿಗೆ ತಮ್ಮ ಆಪ್ತ ಸಚಿವರಾದ ಡಾ. ಪರಮೇಶ್ವರ್, ಎಂ.ಬಿ.ಪಾಟೀಲ್, ದಿನೇಶ್ ಗುಂಡೂರಾವ್, ಬೈರತಿ ಸುರೇಶ್, ಸತೀಶ್ ಜಾರಕಿಹೊಳಿ, ಡಾ. ಹೆಚ್.ಸಿ. ಮಹದೇವಪ್ಪ, ಕೆ.ಜೆ. ಜಾರ್ಜ್ ಸೇರಿದಂತೆ ಕೆಲವು ಸಚಿವರು, ಶಾಸಕರನ್ನು ತಮ್ಮ ಜೊತೆ ಕರೆದುಕೊಂಡು ಹೋಗಿದ್ದಾರೆ.

2028ಕ್ಕೆ ಇದೇ ಡಿಕೆಶಿ... ಇದೇ ಸರ್ಕಾರ...!

ಗೃಹ ಸಚಿವ ಅಮಿತ್ ಶಾ ಅವರು ರಾಜ್ಯದಲ್ಲಿ ಬಿಜೆಪಿಗೆ 122 ಸೀಟು ಬರುತ್ತೆ ಎಂದಿದ್ರು. ಇದೇ ಸಂದರ್ಭದಲ್ಲಿ ಡಿಕೆ ಶಿವ ಕುಮಾರ್ ಅವರು, ಬರೆದಿಟ್ಟುಕೊಳ್ಳಿ 136 ಸೀಟುಗಳ ಮೂಲಕ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತೆ ಎಂದಿದ್ದರು. ಈ ಭವಿಷ್ಯ ನಿಜವಾಗಿತ್ತು. ಇದೀಗ ಮತ್ತೊಂದು ಭವಿಷ್ಯ ನುಡಿದಿರುವ ಡಿಕೆಶಿ, 2028ರ ವಿಧಾನಸಭಾ ಚುನಾವಣೆಯಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆ ಎಂದಿದ್ದಾರೆ. ಆದಾಗ್ಯೂ, ಸಿಎಂ ಆಗುವ ಕುರಿತ ಪ್ರಶ್ನೆಗೆ ಉತ್ತರಿಸದೆ ಮೌನವಾದ ಡಿಸಿಎಂ, ಇನ್ನು, ದೇಶದಲ್ಲಿನ ದರ ಏರಿಕೆ ಕುರಿತು ಉಲ್ಲೇಖಿಸಿ ಕೇಂದ್ರದ ವಿರುದ್ಧ ವಾಗ್ದಾಳಿ ನಡೆಸಿದರು. ಮೇ 30ಕ್ಕೆ ಪ್ರತಿಭಟನೆ ನಡೆಸುತ್ತೇವೆ ಎಂದರು. ಇದೇ ಸಂದರ್ಭದಲ್ಲಿ ದೆಹಲಿಗೆ ಹೋಗುತ್ತಿದ್ದೀರಾ ಎಂಬ ಪ್ರಶ್ನೆಗೆ, ಹೈಕಮಾಂಡ್ ನಾಯಕರು ಕರೆದರೆ ಮಾತ್ರ ಹೋಗುತ್ತೇನೆ ಎಂದು ಡಿಸಿಎಂ ಉತ್ತರಿಸಿದರು.

ಅತ್ಯಾಧುನಿಕ ಆಂಬುಲೆನ್ಸ್ ಸೇವೆ

ಕೇಂದ್ರ ಅತ್ಯಂತ ಸಹಕಾರಿಯಾಗಿದೆ. ರಾಜ್ಯದಲ್ಲಿ ಸುಮಾರು 18 ವರ್ಷಗಳಿಂದ 108 ಆಂಬುಲೆನ್ಸ್ ಸೇವೆ ನಡೆಯುತ್ತಿದೆ. 2025–26 ರ ಬಜೆಟ್ ಘೋಷಣೆಯಂತೆ 108 ತುರ್ತು ಆಂಬುಲೆನ್ಸ್ ಸೇವೆಗಳ ನಿರ್ವಹಣೆಗೆ ಮೀಸಲಾದ ವ್ಯವಸ್ಥೆಯನ್ನು ರೂಪಿಸಲಾಗಿದೆ. ಈ ಸೇವೆ ಪರಿಣಾಮಕಾರಿಯಾಗಿ ಜನರಿಗೆ ಲಭಿಸುವಂತಾಗುವುದು ಮುಖ್ಯ. ಸರ್ಕಾರದ ಗುಣಮಟ್ಟದ ಆರೋಗ್ಯ ಸೇವೆಯಿಂದ ಜನರ ವಿಶ್ವಾಸ ಹೆಚ್ಚುತ್ತದೆ ಎಂದರು.

ತುರ್ತು ಚಿಕಿತ್ಸೆಗೆ ಆದ್ಯತೆ: ರಸ್ತೆ ಅಪಘಾತಗಳು, ಹೆರಿಗೆ, ಹೃದಯರೋಗಿ ಸೇರಿದಂತೆ ಹಲವು ಕ್ಲಿಷ್ಟ ಸಂದರ್ಭಗಳಲ್ಲಿ ತುರ್ತು ಚಿಕಿತ್ಸೆಯ ಅತ್ಯವಶ್ಯವಾಗಿದ್ದು, ಆ ಗೋಲ್ಡನ್ ಅವರ್‌ನಲ್ಲಿ ಚಿಕಿತ್ಸೆ ದೊರೆತರೆ, ರೋಗಿಗಳು ಬದುಕುವ ಸಾಧ್ಯತೆ ಹೆಚ್ಚಿರುತ್ತದೆ. ಗೋಲ್ಡನ್ ಅವರ್‌ನಲ್ಲಿ ದೊರೆತ ಚಿಕಿತ್ಸೆಯಲ್ಲಿ ಸುಮಾರು ಶೇ.80 ರಷ್ಟು ಜನರು ಬದುಕುಳಿದಿದ್ದಾರೆ. ಜೀವನ್ಮರಣದ ಹೋರಾಟದಲ್ಲಿ ತುರ್ತು ಚಿಕಿತ್ಸೆ ಹೆಚ್ಚಿನ ಮಹತ್ವವನ್ನು ಹೊಂದಿದೆ. ಬೆಂಗಳೂರು ನಗರದಲ್ಲಿ 65 ರಿಂದ 70 ಆಂಬುಲೆನ್ಸ್ ಗಳಿದ್ದು, ತುರ್ತು ಚಿಕಿತ್ಸೆಗೆ ನೆರವಾಗಿವೆ. 108 ಆಂಬುಲೆನ್ಸ್ ವ್ಯವಸ್ಥೆ ಖಾಸಗಿ ಯವರ ಕೈಯಲ್ಲಿದ್ದಾಗ, ಅವರ ಹೊಣೆಗಾರಿಕೆಯನ್ನು ಪ್ರಶ್ನಿಸುವಂತಿರಲಿಲ್ಲ. ಆದರೆ ಪ್ರಸ್ತುತ ಈ ವ್ಯವಸ್ಥೆ ಸರ್ಕಾರದ ಅಧೀನದಲ್ಲಿರುವುದರಿಂದ ಈ ಸೇವೆಯ ಹೊಣೆಗಾರಿಕೆ ಹೆಚ್ಚಿದೆ ಎಂದರು.

ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತಮ್ಮ ಆರೋಗ್ಯ ಸಮಸ್ಯೆಗೆ ನೆರವು ಕೇಳಿ ಬರುವ ಜನರು, ಸರ್ಕಾರದ ಧನಸಹಾಯವನ್ನು ಬಯಸುತ್ತಾರೆ. ಆದರೆ ಜನರು ಖಾಸಗಿ ಆಸ್ಪತ್ರೆಗೆ ಹೋಗಿ, ಸರ್ಕಾರದಿಂದ ಧನಸಹಾಯ ಕೇಳುವ ಬದಲು, ಚಿಕಿತ್ಸೆಗೆ ಸರ್ಕಾರಿ ಆಸ್ಪತ್ರೆಗೆ ಹೋಗಬೇಕು. ಕ್ಯಾನ್ಸರ್ ಸೇರಿದಂತೆ ಹಲವು ಕಾಯಿಲೆಗಳಿಗೆ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ದುಬಾರಿಯಾಗಿದ್ದು, ಸರ್ಕಾರಿ ಆಸ್ಪತ್ರೆಯಲ್ಲಿ ಗುಣಮಟ್ಟದ ಚಿಕಿತ್ಸೆಯ ವ್ಯವಸ್ಥೆಯಿದೆ. ಸಾಮಾನ್ಯ ಜನರಿಗೆ ಗುಣಮಟ್ಟದ ಆರೋಗ್ಯ ವ್ಯವಸ್ಥೆಯನ್ನು ನೀಡಲು ಆರೋಗ್ಯ ಕ್ಷೇತ್ರದ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ ಎಂದರು.

ಯುವತಿಯರು ಸೇರಿದಂತೆ ನಾಲ್ವರ ಬಂಧನ

ದೇವಸ್ಥಾನದ ಹತ್ತಿರದ ಮನೆ ಮೇಲೆ ದಾಳಿ ಮಾಡಿದ ಪೊಲೀಸರು, ಮಾದಕ ವಸ್ತುವನ್ನು ಸೇವನೆ ಮಾಡಿದ್ದಲ್ಲದೆ, ಮಾರಾಟ ಮಾಡಲು ಸಂಗ್ರಹಿಸಿ ಸ್ವಾಧೀನದಲ್ಲಿಟ್ಟಿದ್ದ ಹಿನ್ನೆಲೆಯಲ್ಲಿ ಇವರನ್ನು ಬಂಧಿಸಿದ್ದಾರೆ. ಬಂಧಿತರಿಂದ ಡಿಜಿಟಲ್ ಸ್ಕೇಲ್ ಮತ್ತು ಬಸ್ ಟಿಕೆಟ್‌ಗಳನ್ನು ಸಹ ವಶಪಡಿಸಿಕೊಳ್ಳಲಾಗಿದೆ. ಈ ಸಂಬಂಧ ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸ್ ಆಯುಕ್ತರು, ಉಪ ಪೊಲೀಸ್ ಆಯುಕ್ತರು ಹಾಗೂ ಸಿಸಿಬಿ ಘಟಕದ ಎಸಿಪಿ ಅವರ ಮಾರ್ಗದರ್ಶನದಲ್ಲಿ ಸಿಸಿಬಿ, ಒಸಿಡಬ್ಲ್ಯೂ ವಿಭಾಗದ ಅಧಿಕಾರಿ ಮತ್ತು ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ಸಿಸಿಬಿ ಘಟಕದ ಎಸಿಪಿ ಮಹಮ್ಮದ್ ಶರೀಫ್ ರಾವುತರ್, ಇನ್‌ಸ್ಪೆಕ್ಟರ್ ಶಬ್ಬಿರ್ ಹುಸೇನ್ ಮತ್ತು ಪಿಎಸ್‌ಐ ಕೆ.ಲೇಪಾಕ್ಷ, ರೇವಣಸಿದ್ದಪ್ಪ, ಸಿಬ್ಬಂದಿಯಾದ ಮಧುಕುಮಾರ್, ಚೇತನ್, ಯಶವಂತಕುಮಾರ್, ಕಿರಣ್ ರಾಥೋಡ್, ಸಂತೋಷ್ ಪವಾರ್, ದೇವರಾಜ, ರಾಜೇಸಾಬ, ಹಜರತ್ ಆಲಿ ನಾಯ್ಕರ್, ಸಿದ್ದರಾಜು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ತಂಗಿ ಮಗನ ಕೊಲೆಗೆ ಸೋದರ ಮಾವನಿಂದ ಸುಪಾರಿ

ನೀಡಬೇಕೆಂದು ಅವರ ತಂಗಿ ಮಗ ಪ್ರವೀಣ್ ಕುಮಾರ್ ಬೇಡಿಕೆ ಮುಂದಿಟ್ಟಿದ್ದಾನೆ.

ಅರ್ಧ ಆಸ್ತಿ ನೀಡಲು ಸಾಧ್ಯವಿಲ್ಲ, ಬೇಕಾದರೆ ಸ್ವಲ್ಪ ಭಾಗ ನೀಡುವುದಾಗಿ ರಾಜೀ ಪಂಚಾಯಿತಿ ವೇಳೆ ರಾಜು ಹೇಳಿದ್ದಾನೆ. ಹಾಗಾಗಿ ಸಂಧಾನ ವಿಫಲವಾಗಿದೆ. ಆದರೆ, ನನ್ನ ತಾಯಿಗೆ ಬರಬೇಕಾದ ಅರ್ಧ ಆಸ್ತಿ ನೀಡಲೇಬೇಕೆಂದು ಪ್ರವೀಣ್ ಕುಮಾರ್ ಪಟ್ಟು ಹಿಡಿದಿದ್ದಾನೆ.

ಪ್ರವೀಣ್ ಕುಮಾರ್ ಕೇಳಿದಷ್ಟು ಆಸ್ತಿ ನೀಡಲು ಸಿದ್ಧನಿಲ್ಲದ ಸೌದೆ ರಾಜು, ತಂಗಿ ಮಗನನ್ನೇ ಮುಗಿಸಲು ನಿರ್ಧರಿಸಿ, ಸುಪಾರಿ ನೀಡಲು ತೀರ್ಮಾನಿಸಿದ್ದಾನೆ. ಅದರಂತೆ ಸುಳ್ಯ ಮೂಲದ ಶಫಿ ಮೂಲಕ ಪಿರಿಯಾಪಟ್ಟಣದ ಶಿವಪ್ಪ ಬಡಾವಣೆಯ ಮೀರ್ ಹುಸೇನ್ ಅಲಿ ಅಲಿಯಾಸ್ ಸುಲ್ತಾನ್‌ನನ್ನು ಸಂಪರ್ಕಿಸಿ, ತಂಗಿ ಮಗ ಪ್ರವೀಣ್ ಕುಮಾರ್ ಕೊಲೆಗೆ 30 ಲಕ್ಷಕ್ಕೆ ಸುಪಾರಿ ನೀಡಿದ್ದಾನೆ. ಇದಕ್ಕಾಗಿ 7 ಲಕ್ಷ ಮುಂಗಡವನ್ನು ಸಹ ನೀಡಿದ್ದಾನೆ.

ಪ್ರವೀಣ್ ಕುಮಾರ್ ಕೊಲೆ ಮಾಡುವ ಸಂಬಂಧ ಮೀರ್ ಹುಸೇನ್ ಅಲಿ ಹುಣಸೂರಿನ ರೌಡಿಶೀಟರ್ ನಯಾಜ್ ಅಹ್ಮದ್ ಜೊತೆ ಸಮಾಲೋಚನೆ ನಡೆಸಿದ್ದಾನೆ. ತರುವಾಯ ಈ ಇಬ್ಬರು ಸೇರಿಕೊಂಡು 6 ಕೊಲೆ ಸೇರಿದಂತೆ 12 ವಿವಿಧ ಅಪರಾಧ ಪ್ರಕರಣದಲ್ಲಿ ಭಾಗಿಯಾಗಿರುವ ಕುಖ್ಯಾತ ರೌಡಿ ಮೈಸೂರಿನ ಹಬೀದ್ ಪಾಷ, ಅಯಾಜ್ ಪಾಷ ಅಲಿಯಾಸ್ ಹೀರೊ ಹಾಗೂ ಹಮೀನುಲ್ಲಾ ಇವರಿಗೆ 30 ಲಕ್ಷಕ್ಕೆ ಪ್ರವೀಣ್ ಕುಮಾರ್ ಕೊಲೆಗೆ ಸುಪಾರಿ ನೀಡಿದ್ದಾರೆ. ಅಂತೆಯೇ ಅಯಾಜ್ ಪಾಷಾ ಅಲಿಯಾಸ್ ಹೀರೊ ಹಾಗೂ ಹಬೀದ್ ಪಾಷ ಅವರು ಪ್ರವೀಣ್ ಕುಮಾರ್ ಕೊಲೆಗೆ ಸ್ಕೆಚ್ ರೆಡಿ ಮಾಡಿದ್ದಾರೆ. ಅದರಂತೆ ಏ.1ರಂದು ಮುಖಕ್ಕೆ ಮಾಸ್ಕ್ ಹಾಗೂ ಹೆಲ್ಮೆಟ್‌ಧರಿಸಿ ಇಬ್ಬರು ಪಲ್ಸರ್ ಬೈಕ್‌ನಲ್ಲಿ, ಮತ್ತಿಬ್ಬರು ಕಾರಿನಲ್ಲಿ ಹೊರಟಿದ್ದಾರೆ. ಅಂದು ಸಂಜೆ 6.45 ಗಂಟೆಯಲ್ಲಿ ಪಿರಿಯಾಪಟ್ಟಣದ ಹಿಟ್ನಹಳ್ಳಿ ಗ್ರಾಮದ ಕೆರೆ ಹತ್ತಿರ ಪ್ರವೀಣ್ ಕುಮಾರ್ ದ್ವಿಚಕ್ರ ವಾಹನದಲ್ಲಿ ಹೋಗುವಾಗ ಕಾರಿನಿಂದ ಡಿಕ್ಕಿ ಹೊಡೆಸಿ, ಕೊಲೆಗೆ ಯತ್ನಿಸಿದ್ದಾರೆ.

ಆದರೆ, ಕೆಳಗೆ ಬಿದ್ದರೂ ಪಾತಕಿಗಳ ಕೈಗೆ ಸಿಗದ ಪ್ರವೀಣ್ ಕುಮಾರ್ ಅಲ್ಲಿಂದ ತಪ್ಪಿಸಿಕೊಂಡು ಓಡಿ ಹೋಗಿ, ಅಂದೇ ಪಿರಿಯಾಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾನೆ. ಅಲ್ಲದೆ ಪೊಲೀಸರಲ್ಲಿ ಆಸ್ತಿ ವಿಚಾರವಾಗಿ ನನ್ನ ಕೊಲೆ ಮಾಡಿಸಲು ತನ್ನ ಸೋದರ ಮಾವ ಸೌದೆ ರಾಜು ಸಂಚು ರೂಪಿಸಿರಬಹುದು ಎಂದು ಅನುಮಾನ ಕೂಡ ವ್ಯಕ್ತಪಡಿಸಿದ್ದಾನೆ.

ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಹುಣಸೂರು ಡಿವೈಎಸ್ಪಿ ರವಿ ನೇತೃತ್ವದಲ್ಲಿ ವಿಶೇಷ ತಂಡ ರಚನೆಯಾಗಿದೆ. ಇನ್ಸ್‌ಪೆಕ್ಟರ್‌ಗಳಾದ ಎಂ.ವಿ.ಗೋವಿಂದರಾಜು, ಎಂ.ಕೆ.ದೀಪಕ್, ಸಬ್ ಇನ್‌ಸ್ಪೆಕ್ಟರ್‌ಗಳಾದ ಬಿ.ಹೆಚ್.ಜಗದೀಶ್, ಅಜಯ್ ಕುಮಾರ್, ರವಿಕುಮಾರ್ ತಂಡದಲ್ಲಿದ್ದರು. ಪ್ರಕರಣ ಭೇದಿಸಲು ಕಾರ್ಯಾಚರಣೆ ಶುರು ಮಾಡಿದ್ದಾರೆ. ಪ್ರವೀಣ್ ಕುಮಾರ್ ಅನುಮಾನ ವ್ಯಕ್ತಪಡಿಸಿದ್ದ ಸೌದೆ ರಾಜುವನ್ನು ವಶಕ್ಕೆ ಪಡೆದು ವಿಚಾರಣೆ ಮಾಡಲಾಗಿ ಇಡೀ ಸುಪಾರಿ ಕೊಲೆ ಪ್ರಕರಣ ಬಟಾ ಬಯಲಾಗಿದೆ.

ಈ ಕೊಲೆ ಯತ್ನ ಪ್ರಕರಣದಲ್ಲಿ ಬೆಟ್ಟದಪುರ ಗ್ರಾಮದ ರಾಜು ಅಲಿಯಾಸ್ ಸೌದೆ ರಾಜು, ಪಿರಿಯಾಪಟ್ಟಣದ ಶಿವಪ್ಪ ಬಡಾವಣೆಯ ಮೀರ್ ಹುಸೇನ್ ಅಲಿ ಅಲಿಯಾಸ್ ಸುಲ್ತಾನ್, ಹುಣಸೂರಿನ ನಯಾಜ್ ಅಹ್ಮದ್, ಮೈಸೂರಿನ ಶಾಂತಿನಗರದ ಹಬೀದ್ ಪಾಷ ಅಲಿಯಾಸ್ ಭಯ್ಯಾ ಅಲಿಯಾಸ್ ಇಬ್ರಾಹಿಂ ಅಲಿಯಾಸ್ ಉಸ್ಮಾನ್, ಕೆ.ಆರ್.ಮೊಹಲ್ಲಾದ ಅಯಾಜ್ ಪಾಷ ಹಾಗೂ ಅಮೀನುಲ್ಲಾ ಅವರನ್ನು ಬಂಧಿಸಲಾಗಿದೆ.

ಅಲ್ಲದೆ ಆರೋಪಿಗಳಿಂದ ಕೃತ್ಯಕ್ಕೆ ಬಳಸಿದ ಲಾಂಗು, 4 ಮೊಬೈಲ್ ಫೋನ್, 10 ಸಾವಿರ ನಗದು, ಪಲ್ಸರ್ ಬೈಕ್ ಹಾಗೂ ಒಂದು ಕಾರನ್ನು ವಶಪಡಿಸಿಕೊಳ್ಳಲಾಗಿದೆ.

ಇತರೆ ಅಪರಾಧ ಕೃತ್ಯದ ಹಬೀಬ್ ಪಾಷಾ ಇನ್ನು ಆಕ್ಟಿವ್

■ 2015ರಲ್ಲಿ ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮುನ್ನಿ ಎಂಬ ಮಹಿಳೆ ವೇಶ್ಯಾವಾಟಿಕೆಯಲ್ಲಿ ತೊಡಗಿದ್ದಾಗಿ ಆರೋಪಿಸಿ ಆಕೆಯ ಹತ್ಯೆ.

■ 2008ರಲ್ಲಿ ಇದೇ ಠಾಣೆ ವ್ಯಾಪ್ತಿಯ ರಾಜೀವ್‌ನಗರದ ಮಾದೇಗೌಡ ಸರ್ಕಲ್ ಬಳಿ ಸಲೂನ್ ನಡೆಸುತ್ತಿದ್ದ ಶಶಿಕುಮಾರ್ ಹತ್ಯೆ.

■ 2010ರಲ್ಲಿ ಹುಣಸೂರು ನಗರದ ಕೆಎಫ್‌ಡಿ ಕಾರ್ಯಕರ್ತ ಗೌಸ್‌ಖಾನ್ ಪತ್ನಿಯೊಂದಿಗೆ ಅಕ್ರಮ ಸಂಬಂಧ ಹೊಂದಿದ್ದಾನೆಂದು ಶಂಕಿಸಿ ತ್ಯಾಗರಾಜ ಪಿಳ್ಳೈ ಎಂಬಾತನ ಹತ್ಯೆ.

■ 2009ರಲ್ಲಿ ಮಂಡಿ ಠಾಣೆ ವ್ಯಾಪ್ತಿಯ ಸೆಂಟ್ ಫಿಲೋಮಿನಾ ಚರ್ಚ್ ಸಮೀಪ ಪುಸ್ತಕ ವ್ಯಾಪಾರಿ ಹರೀಶ್ ಹತ್ಯೆ.

■ 2009ರಲ್ಲಿ ಲಷ್ಕರ್ ಠಾಣೆ ವ್ಯಾಪ್ತಿಯ ಆನಂದ್ ಪೈ ಕೈ ಕತ್ತರಿಸಿ, ಆತನ ಸ್ನೇಹಿತ ರಮೇಶ್‌ನನ್ನು ಹತ್ಯೆ ಮಾಡಿದ್ದು.

■ 2009ರಲ್ಲಿ ಎನ್.ಆರ್.ಠಾಣೆ ವ್ಯಾಪ್ತಿಯ ಸಿವಿ ರಸ್ತೆಯಲ್ಲಿ ಬಿಜೆಪಿ ಮುಖಂಡ ಗಿರಿಧರ್ ಕೊಲೆ ಯತ್ನ.

■ 2010ರಲ್ಲಿ ಮಂಗಳೂರು ಉತ್ತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ವ್ಯಾಪಾರಿ ಜಗದೀಶ್ ಶೆಣೈ ಹತ್ಯೆಗೆ ಸಂಚು.

■ 2010ರಲ್ಲಿ ಮೂಡಬಿದಿರೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಆರ್‌ಎಸ್‌ಎಸ್ ಕಾರ್ಯಕರ್ತ ಹಾಗೂ ನ್ಯಾಯವಾದಿ ಶಾಂತಿಪ್ರಸಾದ್ ಕೊಲೆ ಯತ್ನ.

■ ಶಾಸಕ ತನ್ವೀರ್ ಸೇಠ್ ಬದುಕಿರುವವರೆಗೂ ಎನ್.ಆರ್.ಕ್ಷೇತ್ರದಲ್ಲಿ ಎಸ್‌ಡಿಪಿಐ ಗೆಲ್ಲಲ್ಲು ಸಾಧ್ಯವಿಲ್ಲ ಎಂಬ ಕಾರಣದಿಂದ ಫರ್ಹಾನ್ ಜೊತೆ ಸೇರಿ 2019ರಲ್ಲಿ ಅವರ ಹತ್ಯೆಗೆ ಯತ್ನಿಸಿದ್ದ.

ನಯಾಜ್ ಅಹಮ್ಮದ್ ವಿರುದ್ಧದ ಪ್ರಕರಣ

■ 2017ರಲ್ಲಿ ಕುಶಾಲನಗರದಲ್ಲಿ ನಡೆದ ಹಿಂದೂ ಸಮಾಜೋತ್ಸವದ ವೇಳೆ ನಡೆದ ಹತ್ಯೆ ಪ್ರಕರಣ. ■ ಹುಣಸೂರು ನಗರ ಠಾಣೆಯಲ್ಲಿ 2021 ಹಾಗೂ 2025ರಲ್ಲಿ ಮೂರು ಪ್ರಕರಣ ದಾಖಲು.

ಖತರ್ನಾಕ್‌ಗಳ ನೆಲೆ

ನಟೋರಿಯಸ್ ಹಬೀಬ್ ಪಾಷ ಮೂಲತಃ ಹುಣಸೂರಿನವನು. ಸಾಮಿಲ್‌ನಲ್ಲಿ ಕೆಲಸ ಮಾಡಿಕೊಂಡಿದ್ದ ಈತ, ಕೆಎಫ್‌ಡಿ ಕಾರ್ಯಕರ್ತನಾಗಿ ಮೈಸೂರು ಹಾಗೂ ಹುಣಸೂರಿನಲ್ಲಿ ಹೆಚ್ಚು ಸಕ್ರಿಯವಾಗಿದ್ದ. ಇದೇ ವೇಳೆ ಮೈಸೂರಿನ ಶಾಂತಿನಗರದ ಯುವತಿಯನ್ನು ವಿವಾಹವಾಗಿ ಇಲ್ಲೇ ನೆಲೆಸಿದ್ದಾನೆ. ಹಬೀಬ್‌ಗೆ ಭೈಯ್ಯಾ, ಇಬ್ರಾಹಿಂ, ಉಸ್ಮಾನ್ ಹೀಗೆ ಹಲವು ಹೆಸರುಗಳಿವೆ. 2018ರಲ್ಲಿ ಅಂದಿನ ಡಿಸಿಪಿ ವಿಷ್ಣುವರ್ಧನ್ ಅವರು ಕೆಪಿ ಆಕ್ಟ್ ಕಲಂ 55(ಎ) ಅಡಿಯಲ್ಲಿ ಹಬೀಬ್‌ನನ್ನು ಆರು ತಿಂಗಳು ಗಡಿಪಾರು ಮಾಡಿದ್ದರು. ಇನ್ನು ಪಿಎಫ್‌ಐ ಹಾಗೂ ಎಸ್‌ಡಿಪಿಐನಲ್ಲಿ ಗುರುತಿಸಿಕೊಂಡಿದ್ದ ನಯಾಜ್ ಅಹಮ್ಮದ್, ಮೂಲತಃ ಮಡಿಕೇರಿಯ ರಾಣಿಪೇಟೆಯವನು. ನಂತರದಲ್ಲಿ ಡ್ರೈವರ್ ಕೆಲಸ ಮಾಡಿಕೊಂಡು ಹುಣಸೂರು ಪಟ್ಟಣದಲ್ಲಿ ನೆಲೆಸಿದ್ದಾನೆ.

ಬೌರಿಂಗ್ ಆಸ್ಪತ್ರೆ ತಡೆಗೋಡೆ ಕುಸಿತ ದುರಂತ: ಕೊನೆಗೂ ಎಫ್‌ಐಆರ್ ದಾಖಲು

ಬೆಂಗಳೂರು: ಬೌರಿಂಗ್ ಆಸ್ಪತ್ರೆ ಆವರಣದ ತಡೆಗೋಡೆ ಕುಸಿದು ಏಳು ಮಂದಿ ಮೃತಪಟ್ಟು, ಹಲವರು ಗಾಯಗೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ದುರಂತ ಸಂಭವಿಸಿ 21 ದಿನಗಳಾದ ಮೇಲೆ ಪುಲಿಕೇಶಿನಗರ ಉಪ ವಿಭಾಗ ವ್ಯಾಪ್ತಿಯ ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎಂಜಿನಿಯರಿಂಗ್ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಚಂದ್ರು ಅವರು ನೀಡಿದ ದೂರಿನ ಮೇಲೆ ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್ 106(1) ಅಡಿ ಚೆನ್ನೈನ ಎಎಸ್‌ಆರ್ ಟ್ರೇಡರ್ಸ್ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ನಗರದಲ್ಲಿ ಏಪ್ರಿಲ್ 30ರ ಸಂಜೆ ಧಾರಾಕಾರ ಮಳೆ ಸುರಿದಿತ್ತು. ಆಗ ಬೌರಿಂಗ್ ಆಸ್ಪತ್ರೆಯ ತಡೆಗೋಡೆ ಕುಸಿದಿದ್ದರಿಂದ ಸಾವು? ನೋವಿಗೆ ಕಾರಣವಾಗಿತ್ತು. ಘಟನೆ ನಡೆದು 21 ದಿನ ಕಳೆದ ಮೇಲೆ ಅಂದರೆ ಮೇ 20ಕ್ಕೆ ಪ್ರಕರಣ ದಾಖಲಾಗಿದೆ. ಇದಕ್ಕೂ ಮೊದಲು ಅಸಹಜ ಸಾವು ಪ್ರಕರಣ ದಾಖಲಾಗಿತ್ತು ಬೌರಿಂಗ್ ಅಂಡ್ ಲೇಡಿ ಕರ್ಜನ್ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನೂತನ ಕಟ್ಟಡ ನಿರ್ಮಾಣಕ್ಕಾಗಿ ನಿವೇಶನದಲ್ಲಿದ್ದ ಹಳೆಯ ಕಟ್ಟಡಗಳನ್ನು ತೆರವುಗೊಳಿಸುವ ಕಾಮಗಾರಿಯನ್ನು ಚೆನ್ನೈನ ಎಎಸ್‌ಆರ್ ಟ್ರೇಡರ್ಸ್ ಹೆಸರಿನ ಗುತ್ತಿಗೆ ಸಂಸ್ಥೆಗೆ ನೀಡಲಾಗಿತ್ತು ಗುತ್ತಿಗೆ ಸಂಸ್ಥೆಯು ವೈಜ್ಞಾನಿಕವಾಗಿ ತ್ಯಾಜ್ಯವನ್ನು ವಿಲೇವಾರಿ ಮಾಡದೇ ಕಟ್ಟಡಗಳನ್ನು ನೆಲಸಮಗೊಳಿಸಿದ್ದ ಸ್ಥಳದಲ್ಲೇ ಬಿಟ್ಟು ಹೋಗಿರುವುದು ದುರಂತಕ್ಕೆ ಕಾರಣವಾಗಿದೆ.

ಬೌರಿಂಗ್ ಆಸ್ಪತ್ರೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಭೇಟಿ ನೀಡಿದ್ದ ವೇಳೆ ತ್ಯಾಜ್ಯವನ್ನು ವಿಲೇವಾರಿ ಮಾಡದೇ ಸ್ಥಳದಲ್ಲೇ ಬಿಟ್ಟು ಹೋಗಿರುವ ಗುತ್ತಿಗೆ ಸಂಸ್ಥೆಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸುವಂತೆ ಸೂಚನೆ ನೀಡಿದ್ದರು. ಅದರಂತೆ ಸಂಸ್ಥೆಯ ವಿರುದ್ಧ ಪ್ರಕರಣ ದಾಖಲು ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

ಸ್ಪಷ್ಟನೆ ನೀಡದ ಸಂಸ್ಥೆ: ಒಪ್ಪಂದದ ಪ್ರಕಾರ ತ್ಯಾಜ್ಯವನ್ನು ವಿಲೇವಾರಿ ಮಾಡದ ಸಂಸ್ಥೆಗೆ ಮೇ 18ರ ಒಳಗೆ ಸ್ಪಷ್ಟನೆ ನೀಡುವಂತೆ ಇ–ಮೇಲ್ ಮೂಲಕ ತಿಳಿಸಲಾಗಿತ್ತು. ಆದರೆ, ಸಂಸ್ಥೆಯ ಕಡೆಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಅಕ್ರಮ ಸಂಬಂಧಕ್ಕೆ ಮೂವರು ಬಲಿ

ಪತ್ನಿ ಕೊಂದು ಪತಿ ಆತ್ಮಹತ್ಯೆ; ಮಹಿಳೆಯ ಪ್ರಿಯಕರನೂ ಸಾವಿಗೆ ಶರಣು

ಇಂದೋರ್: ಮಧ್ಯಪ್ರದೇಶದ ಇಂದೋರ್ ಜಿಲ್ಲೆಯಲ್ಲಿ ಅಕ್ರಮ ಸಂಬಂಧಕ್ಕೆ ಮೂವರು ಬಲಿಯಾಗಿದ್ದು, 34 ವರ್ಷದ ವ್ಯಕ್ತಿಯೊಬ್ಬ ತನ್ನ ಪತ್ನಿ ವಿವಾಹೇತರ ಸಂಬಂಧ ಹೊಂದಿದ್ದಾಳೆ ಎಂಬ ಅನುಮಾನದಿಂದ ಆಕೆಯನ್ನು ಕೊಲೆ ಮಾಡಿ, ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಘಟನೆಗೆ ಕಾರಣವಾದ ಮಹಿಳೆಯ ಪ್ರಿಯಕರನೂ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.


ಇಂದೋರ್ ನಗರದ ಹಿರಾ ನಗರ ಪ್ರದೇಶದಲ್ಲಿ ವ್ಯಕ್ತಿಯೊಬ್ಬ ಭಾನುವಾರ 28 ವರ್ಷದ ಪತ್ನಿಯನ್ನು ಕತ್ತು ಹಿಸುಕಿ ಕೊಂದು, ಬಳಿಕ ವಿಷ ಸೇವಿಸಿ ತಾನೂ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ. ಪಿತಾಂಪುರದಲ್ಲಿ ವಾಸಿಸುವ ವ್ಯಕ್ತಿಯೊಬ್ಬ ತನ್ನ ಪತ್ನಿಯನ್ನು ಮೋಹಿಸಿ, ಆಕೆಯ ಜೊತೆ ದೈಹಿಕ ಸಂಬಂಧಬೆಳೆಸಿದ್ದೇ ದುರುತ್ತಕ್ಕೆ ನಾಂದಿಯಾಗಿದೆ

ಲಕ್ಷ್ಮಮ್ಮ ನಿಧನ



ಮೈಸೂರು, ಮೇ 25– ಮೈಸೂರಿನ ಅಗಸ್ತ್ಯ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಖಜಾಂಚಿ, ಕೆ.ಆರ್.ಮೊಹಲ್ಲಾ ನಿವಾಸಿ, ವಿಪ್ರ ಮುಖಂಡರಾದ ಕಲ್ಕೆರೆ ನಾಗರಾಜ್ ಅವರ ತಾಯಿ ಲಕ್ಷ್ಮಮ್ಮ (92) ಸೋಮವಾರ ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಮಂಗಳವಾರ ಬೆಳಗ್ಗೆ 11 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎ.ವಿ. ಪ್ರಸನ್ನ ಗೋಪಾಲ



ಮೈಸೂರು, ಮೇ 25– ಮೈಸೂರು ಸಿದ್ದಾರ್ಥನಗರ ನಿವಾಸಿ ಎ.ವಿ. ಪ್ರಸನ್ನ ಗೋಪಾಲ (72) ಇಂದು ಮಧ್ಯಾಹ್ನ ಬೆಂಗಳೂರಿನಲ್ಲಿ ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇಂದು ರಾತ್ರಿ ಇವರ ಪಾರ್ಥಿವ ಶರೀರವನ್ನು ಮೈಸೂರಿನ ಸಿದ್ದಾರ್ಥನಗರದ ಅವರ ನಿವಾಸಕ್ಕೆ ತರಲಾಗಿದ್ದು, ಅಂತ್ಯಕ್ರಿಯೆ ನಾಳೆ (ಮಂಗಳವಾರ) ಮಧ್ಯಾಹ್ನ 2 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಬಹು ನಿರೀಕ್ಷೆಯ ರಾಮಮಂದಿರ ನಿರ್ಮಾಣದ ಇಚ್ಛಾಶಕ್ತಿ ನೆರವೇರಿದೆ

ಮೈಸೂರಲ್ಲಿ ಬಿಜೆಪಿ ಪ್ರಶಿಕ್ಷಣ ವರ್ಗದ ಕಾರ್ಯಕ್ರಮದಲ್ಲಿ ಕೇಂದ್ರದ ಮಾಜಿ ಸಚಿವ ಡಿ.ವಿ.ಸದಾನಂದಗೌಡ ಅಭಿಪ್ರಾಯ

ಮೈಸೂರು, ಮೇ25(ಬಿಎಲ್‌ಯು)– ದೇಶದ ಜನತೆಯ ಬಹುನಿರೀಕ್ಷೆಯ ರಾಮ ಮಂದಿರ ನಿರ್ಮಾಣ ಹಾಗೂ ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಎಂಬ ನಿರಂತರ ಪ್ರತಿಪಾದನೆಯಿಂದ ಯಶಸ್ಸು ದೊರೆತಿದೆ ಎಂದು ಕೇಂದ್ರ ಮಾಜಿ ಸಚಿವ ಡಿ.ವಿ. ಸದಾನಂದಗೌಡ ಅವರು ಅಭಿಪ್ರಾಯಪಟ್ಟರು.

ಮೈಸೂರಿನ ಹುಣಸೂರು ರಸ್ತೆಯ ಲಿಂಗದೇವರು ಕೊಪ್ಪಲ್‌ನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯದಲ್ಲಿ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನದ ಅಂಗವಾಗಿ ನಗರ ಬಿಜೆಪಿ ವತಿಯಿಂದ ಆಯೋಜಿಸಿದ್ದ ಮೈಸೂರು ಮಹಾನಗರ ಪ್ರಶಿಕ್ಷಣ ವರ್ಗದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಪ್ರತಿಪಾದನೆ ಹಾಗೂ ಅಪೇಕ್ಷೆಯಂತೆ ಇಂದು ರಾಮಮಂದಿರ ನಿರ್ಮಾಣವಾಗಿದೆ. ಜೊತೆಗೆ ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೂ ಆಗಿದೆ ಎಂದರು.

ಸ್ವಾಭಿಮಾನ, ಸಮೃದ್ಧಿ, ದೇಶ ಪ್ರೇಮವನ್ನು ಮೂಲಾಧಾರವಾಗಿ ಇಟ್ಟುಕೊಂಡು ಹುಟ್ಟಿದ ಪಕ್ಷ ಬಿಜೆಪಿ ಇಂದು ವಿಶ್ವದಲ್ಲೇ ದೊಡ್ಡ ರಾಜಕೀಯ ಪಕ್ಷವಾಗಿ ಹೊರಹೊಮ್ಮಿದೆ. ಈ ಪಕ್ಷಕ್ಕೆ ಈಗ ಕಿರಿಯರಾದ ನಿತಿನ್ ನಬಿನ್ ಅವರನ್ನು ಅಧ್ಯಕ್ಷರನ್ನಾಗಿ ಮಾಡುವ ಮೂಲಕ ಪಕ್ಷವನ್ನು ಮತ್ತಷ್ಟು ಗಟ್ಟಿಗೊಳಿಸುವ ಇರಾದೆ ಹೊಂದಲಾಗಿದೆ ಎಂದು ಸದಾನಂದಗೌಡ ಹೇಳಿದರು.



ಮೈಸೂರಿನ ಹುಣಸೂರು ರಸ್ತೆಯ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿದ್ಯಾಲಯದಲ್ಲಿ ನಗರ ಬಿಜೆಪಿ ವತಿಯಿಂದ ಆಯೋಜಿಸಿದ್ದ ಮೈಸೂರು ಮಹಾನಗರ ಪ್ರಶಿಕ್ಷಣ ವರ್ಗದ ಸಮಾರಂಭವನ್ನು ಕೇಂದ್ರ ಮಾಜಿ ಸಚಿವ ಡಿ.ವಿ.ಸದಾನಂದಗೌಡ ಉದ್ಘಾಟಿಸಿದರು.

ವಿಶ್ವಕರ್ಮ ಯೋಜನೆ ದೊಡ್ಡ ಮಟ್ಟದಲ್ಲಿ ಅನುಷ್ಠಾನವಾಗಿ ಕುಶಲಕರ್ಮಿಯರಿಗೆ ಆರ್ಥಿಕ ಶಕ್ತಿ ತುಂಬುತ್ತಿದೆ. ಕೇಂದ್ರ ಸರ್ಕಾರದ ಇಂತಹ ಯೋಜನೆಗಳ ಫಲವೇನೆಂದು ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಜನರಿಗೆ ಮನದಟ್ಟು ಮಾಡಬೇಕು ಎಂದು ಸಲಹೆ ನೀಡಿದರು.

ಸಶಕ್ತ, ಸಮೃದ್ಧ ಹಾಗೂ ಸ್ವಾಭಿಮಾನ ಭಾರತವನ್ನಾಗಿ ಮಾಡುವ ಅಟಲ್ ಬಿಹಾರಿ ವಾಜಪೇಯಿ ಅವರ ಕರೆಯಂತೆ ನರೇಂದ್ರ ಮೋದಿ ಅವರು ಹಲವು ವಿಶಿಷ್ಟ ಯೋಜನೆ ರೂಪಿಸಿ, ಅನುಷ್ಠಾನ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಈ ಮೂಲಕ ಬಿಜೆಪಿ ಘೋಷಣೆ ಆಧಾರಿತ ಸರ್ಕಾರವಾಗದೆ ಅನುಷ್ಠಾನ ಆಧಾರಿತ ಸರ್ಕಾರ ಎಂಬುದನ್ನು ಸಾಬೀತು ಮಾಡಿದೆ ಎಂದರು.

ಕಾರ್ಯಕರ್ತರಿಗೆ ಕಿವಿಮಾತು: ಮೈಸೂರು ನಗರ ಪಾಲಿಕೆಯಲ್ಲಿ 65 ಸ್ಥಾನಗಳಿದ್ದು, ಎಲ್ಲರಿಗೂ ಅವಕಾಶ ದೊರೆಯದಿರಬಹುದು. ಹಾಗೆಯೇ ಶಾಸಕ, ಸಂಸದರ ಸ್ಥಾನ ಕೂಡ ದಕ್ಕದಿರಬಹುದು. ಆದರೆ ಅಧಿಕಾರ ಇಲ್ಲದಿದ್ದರೂ ಜೈ ಎನ್ನಿಸಿಕೊಳ್ಳುವವನು ನಿಜವಾದ ಕಾರ್ಯಕರ್ತ ಹಾಗೂ ನಾಯಕನಾಗುತ್ತಾನೆ ಎಂದು ಸದಾನಂದಗೌಡರು ಅಭಿಪ್ರಾಯಪಟ್ಟರು.

ಪಕ್ಷದಲ್ಲಿ ಶಿಸ್ತು ಬಹಳ ಮುಖ್ಯವಾಗಿದ್ದು, ಪಕ್ಷದ ಶಿಸ್ತು ಹಾಗೂ ಸಿದ್ಧಾಂತವನ್ನು ಪ್ರತಿಯೊಬ್ಬ ಕಾರ್ಯಕರ್ತ ಅರಿಯಬೇಕು. ಬಿಜೆಪಿ ಜನ ಸಂಘದ ಕಾಲದಿಂದಲೂ ನಂಬಿದ ವಿಚಾರಕ್ಕೆ ಒತ್ತು ನೀಡಿ ಕೆಲಸ ಮಾಡುತ್ತಾ ಬಂದಿದೆ. ಇದರಿಂದ ಅಧಿಕಾರ ಇರಲಿ, ಇಲ್ಲದಿದ್ದರೂ ನಂಬಿದ ತತ್ವ ಸಿದ್ಧಾಂತದ ಉಳಿವಿಗಾಗಿ ಕೆಲಸ ಮುಂದುವರೆಸುತ್ತಿದೆ ಎಂದು ಹೇಳಿದರು.

ನೋಟು ಅಮಾನೀಕರಣ ಮಾಡಿದ ನರೇಂದ್ರ ಮೋದಿ ಅವರ ತೀರ್ಮಾನ ಮಹತ್ವದ್ದಾಗಿದೆ. ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಆರ್ಥಿಕ ಶಿಸ್ತು ಇದೆ. ಕೊರೊನಾದಂತಹ ದೊಡ್ಡ ಸವಾಲು ದೇಶವನ್ನು ಕಾಡಿದಾಗ ಅದನ್ನು ಸಮರ್ಥವಾಗಿ ಎದುರಿಸಿದ ಕೇಂದ್ರ ಸರ್ಕಾರದ ಪರಿಯನ್ನು ವಿಶ್ವವೇ ಮೆಚ್ಚಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಂಸದ ಯದುವೀರ್, ಶಾಸಕ ಟಿ.ಎಸ್. ಶ್ರೀವತ್ಸ, ರಾಜ್ಯ ಬಿಜೆಪಿ ಉಪಾಧ್ಯಕ್ಷೆ ಮಾಳವಿಕ ಅವಿನಾಶ್, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಮೈಸೂರು ಜಿಲ್ಲಾ ಪ್ರಶಿಕ್ಷಣ ವರ್ಗದ ಉಸ್ತುವಾರಿ ರಾಬಿನ್, ಮಾಜಿ ಶಾಸಕರಾದ ತೋಂಟದಾರ್ಯ, ಸಿದ್ದರಾಜು, ಮಾಜಿ ಮೇಯರ್‌ಗಳಾದ ಸಂದೇಶ್‌ಸ್ವಾಮಿ, ಶಿವಕುಮಾರ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಸಿದ್ದರಾಮಯ್ಯರಿಗೆ ಚುನಾವಣೆಗೆ ಮೊದಲು ಮೈಸೂರು ತವರು ಜಿಲ್ಲೆ; ಬಳಿಕ ಅದೊಂದು ಕಸದ ಬುಟ್ಟಿ

ಸಂಸದ ಯದುವೀರ್ ಟೀಕಾಸ್ತ್ರ

ಮೈಸೂರು,ಮೇ25(ಬಿಎಲ್‌ಯು)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚುನಾವಣೆಗೆ ಮೊದಲು ತವರು ಜಿಲ್ಲೆ ಮೈಸೂರಿನ ಬಗ್ಗೆ ಪ್ರೀತಿ, ವಾತ್ಸಲ್ಯದ ಮಾತುಗಳನ್ನಾಡುತ್ತಾರೆ. ಆದರೆ ಚುನಾವಣೆಯ ಬಳಿಕ ಅದನ್ನು ಕಸದ ಬುಟ್ಟಿಗೆ ಎಸೆಯುತ್ತಾರೆ ಎಂದು ಸಂಸದ ಯದುವೀರ್ ಟೀಕಿಸಿದರು.

ಮೈಸೂರು ಮಹಾನಗರ ಪ್ರಶಿಕ್ಷಣ ವರ್ಗದ ಸಮಾರಂಭದಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಪಾಲಿಗೆ ತವರು ಜಿಲ್ಲೆ ಎಂಬುದು ಬರೀ ಬೋಗಸ್ ಆಗಿದೆ. ಹಲವು ಸಮಸ್ಯೆಗಳು ಹಲವು ವರ್ಷಗಳಿಂದ ಜೀವಂತವಾಗಿದ್ದರೂ ಅದನ್ನು ಪರಿಹರಿಸುವ ಕಿಂಚಿತ್ತೂ ಪ್ರಯತ್ನ ಮಾಡಿಲ್ಲ ಎಂದು ಆರೋಪಿಸಿದರು.

ಮುಡಾ, ವಾಲ್ಮೀಕಿ ನಿಗಮ ಸೇರಿದಂತೆ ಹಲವು ಹಗರಣಗಳು ಕಾಂಗ್ರೆಸ್ ಸರ್ಕಾರದ ದುರಾಡಳಿತಕ್ಕೆ ಸ್ಪಷ್ಟ ನಿದರ್ಶನವಾಗಿವೆ. ಜನರು ಈ ಸರ್ಕಾರದ ಕಾರ್ಯ ವೈಖರಿ ನೋಡಿ ಬೇಸತ್ತಿದ್ದು, ಮುಂದೆ ತಕ್ಕ ಪಾಠ ಕಲಿಸಲಿದ್ದಾರೆ ಎಂದು ಯದುವೀರ್ ಎಚ್ಚರಿಸಿದರು. ವಿಶ್ವದಲ್ಲೇ ಅತಿ ದೊಡ್ಡ ಪ್ರಜಾಪ್ರಭುತ್ವ ದೇಶವಾಗಿರುವ ಭಾರತದಲ್ಲಿ ಬಿಜೆಪಿ 18 ಕೋಟಿ ಸದಸ್ಯರನ್ನು ಹೊಂದಿದ್ದು, 22 ರಾಜ್ಯಗಳಲ್ಲಿ ಎನ್‌ಡಿಎ ಅಧಿಕಾರದ ಚುಕ್ಕಾಣಿ ಹಿಡಿದಿದೆ. 17 ರಾಜ್ಯಗಳಲ್ಲಿ ಬಿಜೆಪಿಯವರು ಮುಖ್ಯಮಂತ್ರಿಗಳಾಗಿದ್ದಾರೆ. ಇಂತಹ ದೊಡ್ಡ ಪಕ್ಷವನ್ನು ಮತ್ತಷ್ಟು ಸಂಘಟಿಸಿ, ಬಲಗೊಳಿಸಬೇಕು ಎಂದು ಸಲಹೆ ನೀಡಿದರು.

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ರಾಜ್ಯದಲ್ಲಿ ಸ್ವಂತ ಬಲದಿಂದ ಅಧಿಕಾರಕ್ಕೆ ಬರಬೇಕು. ಇದಕ್ಕಾಗಿ ಪಕ್ಷದ ಕಾರ್ಯಕರ್ತರು, ಮುಖಂಡರು ಈಗಿನಿಂದಲೇ ಶ್ರಮಿಸಬೇಕು. ಪಕ್ಷದ ಪ್ರತಿಯೊಬ್ಬರು ಅಧಿಕಾರದ ಅಪೇಕ್ಷೆ ಪಡುವುದು ತಪ್ಪಲ್ಲ. ಆದರೆ ಪಕ್ಷಕ್ಕೆ ಅಧಿಕಾರ ಬಂದರೆ, ಪ್ರತಿಯೊಬ್ಬರಿಗೂ ತಾನಾಗಿಯೇ ಅಧಿಕಾರ ದೊರೆಯುತ್ತದೆ ಎಂದು ಕಿವಿಮಾತು ಹೇಳಿದರು.

ಏಕರೂಪ ನಾಗರಿಕ ಸಂಹಿತೆ, ಒಂದು ದೇಶ–ಒಂದು ಚುನಾವಣೆ ಸೇರಿದಂತೆ ಹಲವು ಸವಾಲುಗಳು ನಮ್ಮ ಮುಂದಿವೆ. ಒಂದು ದೇಶ–ಒಂದು ಚುನಾವಣೆಗಾಗಿ ನಿಯೋಜಿಸಿರುವ ಸಮಿತಿ ಈಗಾಗಲೇ ದೇಶಾದ್ಯಂತ ಪ್ರವಾಸ ಮಾಡಿ ಅಭಿಪ್ರಾಯ ಕ್ರೋಢೀಕರಿಸುತ್ತಿದೆ. ಈ ಮೂಲಕ ಇದನ್ನು ಅನುಷ್ಠಾನಕ್ಕೆ ತರಲು ಪ್ರಧಾನಿ ಮೋದಿ ಅವರ ಸರ್ಕಾರ ಶ್ರಮಿಸುತ್ತಿದೆ ಎಂದರು.

ಹುಟ್ಟುಹಬ್ಬದ ಶುಭ ಹಾರೈಕೆ...



ಮೈಸೂರಿನ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡರ ಹುಟ್ಟುಹಬ್ಬವನ್ನು ಇತ್ತೀಚೆಗೆ ಆಚರಿಸಲಾಯಿತು. ಈ ವೇಳೆ ರಾಜ್ಯ ಹೋಟೆಲ್ ಸಂಘದ ಅಧ್ಯಕ್ಷ ಜಿ.ಕೆ.ಶೆಟ್ಟಿ, ಉಪಾಧ್ಯಕ್ಷರಾದ ಮಧುಕರಶೆಟ್ಟಿ, ರವಿಶಾಸ್ತ್ರಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಮಹೇಶಕಾಮತ್, ಅರುಣ್ ಕೆ.ಎಸ್., ಪಾಂಡುರಂಗ ಸತೀಶ್, ಕಲ್ಯಾಣ ಮಂಟಪಗಳ ಸಂಘದ ಮಾಜಿ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ್, ಚಿಕ್ಕಕೆಂಪೇಗೌಡ, ಜಿ.ಅಶೋಕ್, ನಾರಾಯಣಹೆಗಡೆ, ಉಪಾಧ್ಯಕ್ಷ ಉಗ್ರಯ್ಯ, ಲೀ ರುಚಿ ಮಂಜುನಾಥ್, ಶೇಖರನಾಯ್ಡು, ಗೋಪಿನಾಥ್, ಕೆ.ಭಾಸ್ಕರ್ ಶೆಟ್ಟಿ, ಸುಬ್ರಮಣ್ಯ ತಂತ್ರೀ ಮತ್ತಿತರರು ಶುಭ ಹಾರೈಸಿದರು.

ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಕುಂಭಾಭಿಷೇಕ

ಮೈಸೂರು, ಮೇ 25(ಎಂಕೆ)– ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಕುಂಭಾಭಿಷೇಕ ಮಹೋತ್ಸವದ ಅಂಗವಾಗಿ ಸೋಮವಾರ ವಿವಿಧ ಧಾರ್ಮಿಕ ಕೈಂಕರ್ಯಗಳನ್ನು ನೆರವೇರಿಸಲಾಯಿತು.

ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕ ನಾಡೋಜ ಡಾ.ಭಾಷ್ಯಂ ಸ್ವಾಮೀಜಿ ನೇತೃತ್ವದಲ್ಲಿ ಭಕ್ತಾದಿಗಳಿಗೆ ಪ್ರಸಾದ ವಿತರಣೆ ಮೂಲಕ ಆರಂಭವಾದ ಕುಂಭಾಭಿಷೇಕ ಮಹೋತ್ಸವದಲ್ಲಿ ಅಭಿಷೇಕ, ಲಕ್ಷಾರ್ಚನೆ ಜೊತೆಗೆ ಮಹಿಳೆಯರಿಂದ ಲಲಿತಾ ಸಹಸ್ರನಾಮ ಪಾರಾಯಣ ನಡೆಯಿತು.

ಹಾಗೆಯೇ ನಾಳೆ(ಮೇ 26) ಬೆಳಗ್ಗೆ 9 ಗಂಟೆಗೆ ಸಹಸ್ರ ಕಳಶಾಭಿಷೇಕ, ಸೌಂದರ್ಯ ಲಹರಿ ಪಾರಾಯಣ ನಡೆದರೆ, ಮೇ 17ರಂದು ಬೆಳಗ್ಗೆ 9 ಗಂಟೆಗೆ ಶ್ರೀ ಯೋಗಾನರಸಿಂಹಸ್ವಾಮಿಗೆ ಕುಂಭಾಭಿಷೇಕ ಮತ್ತು ಅಖಂಡ ಮಹಾ ಸುದರ್ಶನ ಹೋಮ ಹಾಗೂ ವಿಷ್ಣು ಸಹಸ್ರನಾಮ ಪಾರಾಯಣ ಜರುಗಲಿದೆ. ಮಧ್ಯಾಹ್ನ 12 ಗಂಟೆಗೆ ಪೂರ್ಣಾಹುತಿ ಪೂಜಾ ಕೈಂಕರ್ಯ ನೆರವೇರಲಿದ್ದು, 12.30ರ ನಂತರ ಭಕ್ತರಿಗೆ ಅನ್ನ ಸಂತರ್ಪಣೆ ನಡೆಯಲಿದೆ ಎಂದು ದೇವಾಲಯದ ಆಡಳಿತಾಧಿಕಾರಿ ಎನ್. ಶ್ರೀನಿವಾಸನ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೈಸೂರು ವಿಜಯನಗರ ಮೊದಲ ಹಂತದ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಕುಂಭಾಭಿಷೇಕ ಮಹೋತ್ಸವದ ಅಂಗವಾಗಿ ಭಕ್ತಾದಿಗಳಿಗೆ ಪ್ರಸಾದ ವಿತರಣೆ ಮಾಡಲಾಯಿತು. ದೇವಸ್ಥಾನದ ಸಂಸ್ಥಾಪಕ ನಾಡೋಜ ಡಾ.ಭಾಷ್ಯಂ ಸ್ವಾಮೀಜಿ, ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಮತ್ತಿತರರಿದ್ದರು.

ಕ್ರೀಡಾ ವಸತಿ ಶಾಲೆ, ನಿಲಯಗಳಿಗೆ ಕ್ರೀಡಾಪಟುಗಳ ಪ್ರವೇಶಕ್ಕೆ ವಿಶೇಷ ಆಯ್ಕೆ

ಮೈಸೂರು, ಮೇ 25–ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ 2026–27ನೇ ಸಾಲಿನಲ್ಲಿ ಕ್ರೀಡಾ ವಸತಿ ಶಾಲೆ, ನಿಲಯಗಳಿಗೆ 8ನೇ ತರಗತಿ ಮತ್ತು ಪ್ರಥಮ ಪಿಯುಸಿ ತರಗತಿಗಳ ಕ್ರೀಡಾಪಟುಗಳಿಗೆ ಪ್ರವೇಶ ನೀಡುವ ಸಂಬಂಧ ಜಿಲ್ಲಾ, ವಿಭಾಗ ಹಾಗೂ ರಾಜ್ಯ ಮಟ್ಟದಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗಿದ್ದು, ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗದ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶ ನೀಡುವ ಸಂಬಂಧ ವಿಶೇಷ ಆಯ್ಕೆ ಪ್ರಕ್ರಿಯೆಯನ್ನು ಜೂನ್ 1ರಂದು ಬೆಳಗ್ಗೆ 9 ಗಂಟೆಗೆ ಕೆಳಕಂಡ ಸ್ಥಳಗಳಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

ಬೆಳಗಾವಿ ಜಿಲ್ಲಾ ಕ್ರೀಡಾಂಗಣ: ವಾಲಿಬಾಲ್, ಸೈಕ್ಲಿಂಗ್, ಕುಸ್ತಿ, ಜುಡೋ **ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣ, ತುಮಕೂರು:** ಅಥ್ಲೆಟಿಕ್ಸ್, ಕಬಡ್ಡಿ, ಜಿಮ್ನಾಸ್ಟಿಕ್ಸ್, ಫುಟ್‌ಬಾಲ್. **ಶ್ರೀಕಂಠೀರವ ಕ್ರೀಡಾಂಗಣ, ಬೆಂಗಳೂರು:** ಬಾಸ್ಕೆಟ್ ಬಾಲ್, ಬಾಕ್ಸಿಂಗ್, ಅರ್ಚರಿ, ಫೆನ್ಸಿಂಗ್. **ಅಕ್ಕಿ ತಿಮ್ಮನಹಳ್ಳಿ ಹಾಕಿ ಕ್ರೀಡಾಂಗಣ, ಬೆಂಗಳೂರು:** ಹಾಕಿ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ರಾಜ್ಯದಲ್ಲಿ ನಡೆಸುತ್ತಿರುವ ಕ್ರೀಡಾ ಶಾಲೆ, ನಿಲಯಗಳಿಗೆ 14 ವರ್ಷದೊಳಗಿನ (ಜೂನ್ 2026ಕ್ಕೆ ಅನ್ವಯವಾಗುವಂತೆ) ಮತ್ತು 2026–27ನೇ ಸಾಲಿಗೆ 8ನೇ ತರಗತಿಗೆ ಪ್ರವೇಶ ಪಡೆಯಲು ಅರ್ಹತೆ ಹೊಂದಿರುವ ಹಿರಿಯರ ವಿಭಾಗದ ಆಸಕ್ತ ಯುವಕ, ಯುವತಿಯರು ವಿಶೇಷ ಆಯ್ಕೆ ಪ್ರಕ್ರಿಯೆಗೆ ಬರುವಾಗ ಇತ್ತೀಚಿನ ಭಾವಚಿತ್ರ, ವೈದ್ಯಕೀಯ ದೃಢೀಕರಣ ಪತ್ರ, ಆಧಾರ್ ಕಾರ್ಡ್ ಕಡ್ಡಾಯವಾಗಿ ತರಬೇಕು ಎಂದು ಪ್ರಕಟಣೆ ತಿಳಿಸಿದೆ.

ಮರುಮೌಲ್ಯಮಾಪನದಲ್ಲಿ ಮಹಾಲಕ್ಷ್ಮಿಗೆ ಶೇ.97.12 ಅಂಕ



ಮೈಸೂರು: ಮೈಸೂರಿನ ಐಡಿಯಲ್ ಜಾವಾ ರೋಟರಿ ಶಾಲೆ ವಿದ್ಯಾರ್ಥಿನಿ ಮಹಾಲಕ್ಷ್ಮಿ ಪಿ. ಅವರಿಗೆ ಎಸ್‌ಎಸ್‌ಎಲ್‌ಸಿ ಮರುಮೌಲ್ಯಮಾಪನದಲ್ಲಿ 625 ಅಂಕಗಳಿಗೆ 607 (97.12%) ಅಂಕ ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಕನ್ನಡ–125, ಇಂಗ್ಲಿಷ್–99, ಹಿಂದಿ–92, ಗಣಿತ–95, ವಿಜ್ಞಾನ–96, ಸಮಾಜ 100 ಒಟ್ಟು 625ಕ್ಕೆ 607 ಅಂಕ (ಶೇ.97.12) ಪಡೆದಿದ್ದಾರೆ. ಮೊದಲು 603 ಅಂಕ ಬಂದಿದ್ದವು. ಈಕೆ ನಂಜನಗೂಡು ತಾಲೂಕಿನ ದಾಸನೂರು ನಿವಾಸಿ, ಯಳಂದೂರಿನ ಬಿಳಿಗಿರಿ ಪ್ರಥಮ ದರ್ಜೆ ಕಾಲೇಜಿನ ದ್ವಿತೀಯ ದರ್ಜೆ ಸಹಾಯಕ ಪುಟ್ಟಸ್ವಾಮಿ, ಮೈಸೂರಿನ ಕೃಷ್ಣಮೂರ್ತಿಪುರಂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಸುರಕ್ಷಣಾ ಅಧಿಕಾರಿ ಸುಜಾತ ಅವರ ಪುತ್ರಿ.

ರಾಜಕಾರಣಿಗಳ ಬದಲು ವಿಜ್ಞಾನಿಗಳ ಬೆಳೆಸುವುದು ಲೇಸು

- ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ ಸಲಹೆ
- ಬುದ್ಧಿವಂತರನ್ನು ಪ್ರೋತ್ಸಾಹಿಸದಿದ್ದಲ್ಲಿ ದೇಶ ಹಾಳಾಗುತ್ತದೆ
- ಜಮುನಾರಾಣಿ ವಿ.ಮಿರ್ಲೆ ಅವರ 'ಜೀವನಯಾನ' ಕೃತಿ ಬಿಡುಗಡೆ
- ಪುತ್ರಿ ಎಲ್.ಎನ್.ವರ್ಷಿಣಿ ಅವರಿಂದ ಇಂಗ್ಲಿಷ್‌ಗೆ ಅನುವಾದ

ಮೈಸೂರು, ಮೇ25– ಬುದ್ಧಿವಂತರನ್ನು ಪ್ರೋತ್ಸಾಹಿಸದಿದ್ದಲ್ಲಿ ದೇಶ ಹಾಳಾಗುತ್ತದೆ ಎಂದು ಮೈಸೂರು ಹಾಗೂ ಕರ್ನಾಟಕ ಮುಕ್ತ ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಎಚ್ಚರಿಸಿದರು.

ಜಮುನಾರಾಣಿ ವಿ.ಮಿರ್ಲೆ ರಚಿಸಿರುವ ಹಾಗೂ ಅವರ ಪುತ್ರಿ ಎಲ್.ಎನ್. ವರ್ಷಿಣಿ ಇಂಗ್ಲಿಷ್‌ಗೆ ಅನುವಾದಿಸಿರುವ 'ಜೀವನಯಾನ' ಕೃತಿಯನ್ನು ಮೈಸೂರು ಆರ್ಟ್ ಗ್ಯಾಲರಿಯು ಕೃಷ್ಣಮೂರ್ತಿಪುರಂನ ಬಿಎಸ್‌ಎಸ್ ವಿದ್ಯೋದಯ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಬಿಡುಗಡೆ ಮಾಡಿ ಅವರು ಮಾತನಾಡಿದರು. ಇಡೀ ವಿಶ್ವದಲ್ಲಿಯೇ ಭಾರತದ್ದು ಅತ್ಯುತ್ತಮ ಸಂಸ್ಕೃತಿ ಹಾಗೂ ಅತ್ಯುತ್ತಮ ಬುದ್ಧಿಮತ್ತೆ. ಒಳ್ಳೆಯದ್ದಕ್ಕೆ ಪ್ರೋತ್ಸಾಹ ನೀಡಿದರೆ ದೇಶ ಮುಂದಕ್ಕೆ ಹೋಗಲು ಸಾಧ್ಯ ಎಂದರು.

ರಾಜಕಾರಣಿಗಳನ್ನು ಬೆಳೆಸುವ ಬದಲು ವಿಜ್ಞಾನಿಗಳನ್ನು, ವಿದ್ಯಾವಂತರನ್ನು ಬೆಳೆಸಿ. ರಾಜಕಾರಣಕ್ಕಿಂತ ಶಿಕ್ಷಣ ಬಹಳ ಮುಖ್ಯ ಎಂದು ಪ್ರೊರಂಗಪ್ಪ ಕಿವಿಮಾತು ಹೇಳಿದರು.


ಜಮುನಾರಾಣಿ ಅವರು 'ಜೀವನಯಾನ' ಕೃತಿಯಲ್ಲಿ ತಮ್ಮ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳ ಶ್ರೇಷ್ಠ ಗುಣಗಳನ್ನು ಇಲ್ಲಿ ದಾಖಲಿಸಿದ್ದಾರೆ. ಒಳ್ಳೆಯವರನ್ನು ನೆನಪಿಸಿಕೊಳ್ಳುವುದು ಉತ್ತಮ ಕಾರ್ಯ ಎಂದು ಅವರು ಶ್ಲಾಘಿಸಿದರು

ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಪ್ರೊ.ಸಿ. ನಾಗಣ್ಣ ಮಾತನಾಡಿ, ಎಂಜಿನಿಯರ್‌ಗಳು ಹೆಚ್ಚು ಹೆಚ್ಚಾಗಿ ಸಾಹಿತ್ಯ, ಲಲಿತ ಕಲೆಗಳು ಮತ್ತು ಮಾನವತೆ ಕಡೆಗೆ ಹೊರಳುತ್ತಿರುವುದು ಈಗಿನ ಟ್ರೆಂಡ್. ಜೀವನಯಾನ ಕೃತಿಯ ಅನುವಾದಕಿ ಎಲ್.ಎನ್. ವರ್ಷಿಣಿ ಎಂಜಿನಿಯರ್ ಆಗಿದ್ದು, ಡಿಜಿಟಲ್ ಮಾರ್ಕೆಟಿಂಗ್ ತಜ್ಞರಾಗಿದ್ದಾರೆ ಎಂದರು.

ಬದುಕಿನ ನಾನಾ ರಂಗಗಳಲ್ಲಿ ತೊಡಗಿಸಿಕೊಂಡಿರುವ ಹಲವು ವ್ಯಕ್ತಿಗಳ ವೈಶಿಷ್ಟ್ಯವನ್ನು ತಮ್ಮ ಬರವಣಿಗೆಯ ಮೂಲಕ ಲೇಖಕರು ಗುರುತಿಸಿದ್ದಾರೆ. ಇದರಿಂದ ನಾವು ಏನು ಕಲಿಯಬಹುದು ಎಂಬುದನ್ನು ತಿಳಿಸಿಕೊಟ್ಟಿದ್ದಾರೆ ಎಂದರು.

ಕೃತಕ ಬುದ್ಧಿಮತ್ತೆಯಿಂದ ಆಗುವ ಪರಿಣಾಮಗಳನ್ನು ಸೂಕ್ಷ್ಮವಾಗಿ ಗಮನಿಸಬೇಕು ಎಂದು ಅವರು ಸಲಹೆ ಮಾಡಿದರು. ಡಾ.ನಳಿನಿ ಚಂದರ್ ಕೃತಿ ಕುರಿತು ಮಾತನಾಡಿದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಬಿಎಸ್‌ಎಸ್ ವಿದ್ಯೋದಯ ಸಂಸ್ಥೆ ಮುಖ್ಯಸ್ಥ ಆರ್. ವಾಸುದೇವ ಭಟ್ ಮಾತನಾಡಿದರು.

ಮೈಸೂರು ಆರ್ಟ್ ಗ್ಯಾಲರಿ ಅಧ್ಯಕ್ಷ ಎಲ್.ಶಿವಲಿಂಗಪ್ಪ ಸ್ವಾಗತಿಸಿದರು. ಧನಂಜಯ ಕಾರ್ಯಕ್ರಮ ನಿರೂಪಿಸಿದರು. ಲೇಖಕಿ ಜಮುನಾರಾಣಿ ಮಿರ್ಲೆ ಹಾಗೂ ಅನುವಾದಕಿ ಎಲ್.ಎನ್. ವರ್ಷಿಣಿ ಇದ್ದರು. ಮರಿಸ್ವಾಮಿ ಸರ್ವಾರ್ಥ ಪ್ರಾರ್ಥಿಸಿದರು.



ಮೈಸೂರು ಆರ್ಟ್ ಗ್ಯಾಲರಿಯು ಕೃಷ್ಣಮೂರ್ತಿಪುರಂನಲ್ಲಿರುವ ಬಿಎಸ್‌ಎಸ್ ವಿದ್ಯೋದಯ ಸಭಾಂಗಣದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ಜಮುನಾರಾಣಿ ವಿ.ಮಿರ್ಲೆ ರಚಿಸಿ, ಎಲ್.ಎನ್.ವರ್ಷಿಣಿ ಇಂಗ್ಲಿಷ್‌ಗೆ ಅನುವಾದಿಸಿರುವ 'ಜೀವನಯಾನ' ಕೃತಿಯನ್ನು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಬಿಡುಗಡೆ ಮಾಡಿದರು. ಡಾ.ನಳಿನಿ ಚಂದರ್, ಪ್ರೊ.ಸಿ.ನಾಗಣ್ಣ, ಆರ್.ವಾಸುದೇವ ಭಟ್, ಅಂಶಿ ಪ್ರಸನ್ನಕುಮಾರ್, ಎಲ್.ಶಿವಲಿಂಗಪ್ಪ ಉಪಸ್ಥಿತರಿದ್ದರು.

ದೇಶ – ವಿದೇಶ

ಲಕ್ಷ ಹಣವಿದ್ದ ಬ್ಯಾಗ್ ಕಚ್ಚಿ ಪರಾರಿಯಾದ ಕಳ್ಳನಾಯಿ!

ಉತ್ತರ ಪ್ರದೇಶ: ಇಲ್ಲಿನ ಬಿಜ್ನೋರ್‌ನಲ್ಲಿ ಬೀದಿನಾಯಿಯೊಂದು ಸಾರ್ವಜನಿಕರ ಕಣ್ಣೆದುರೇ ದ್ವಿಚಕ್ರ ವಾಹನದಲ್ಲಿದ್ದ ಬರೋಬ್ಬರಿ 1 ಲಕ್ಷ ಹಣವಿದ್ದ ಬ್ಯಾಗ್ ಅನ್ನು ಹೊತ್ತೊಯ್ದಿದೆ ಎನ್ನಲಾಗಿರುವ ವೀಡಿಯೊ ಭಾರೀ ವೈರಲ್ ಆಗಿದೆ.



ಹಣದ ಬ್ಯಾಗ್ ಕಳೆದುಕೊಂಡ ವ್ಯಕ್ತಿ ತಕ್ಷಣವೇ ನಾಯಿಯ ಹಿಂದೆ ಓಡಿದರೂ, ಪ್ರಯೋಜನವಾಗಿಲ್ಲ. ನಾಯಿ ಎಲ್ಲೆಂದರಲ್ಲಿ ನುಸುಳಿ ನಾಪತ್ತೆಯಾಗಿದೆ ಎನ್ನಲಾಗಿದೆ. ಈ ವಿಲಕ್ಷಣ ಮತ್ತು ಸುಲಭವಾಗಿ ನಂಬಲಾಗದ ಘಟನೆ ಬಗ್ಗೆ ಸಾಮಾಜಿಕ ಮಾಧ್ಯಮ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಬೀದಿನಾಯಿಗಳ ಹಾವಳಿ ಮತ್ತು ಅವುಗಳ ಕಡಿತದಿಂದ ಮನುಷ್ಯರು ಹೇಗೋ ತಮ್ಮನ್ನು ತಾವು ರಕ್ಷಿಸಿಕೊಳ್ಳುತ್ತಿದ್ದಾರೆ. ಆದರೆ, ಇದೀಗ ನಾಯಿಗಳನ್ನು ಮುಂದಿಟ್ಟುಕೊಂಡು ಹಗಲು ದರೋಡೆ ಮಾಡುವ ಕೆಲವು ವಿಕೃತ ಮನಸ್ಸಿನ ಗ್ಯಾಂಗ್‌ಗಳು ಸಕ್ರಿಯವಾಗಿರುವ ಶಂಕೆ ವ್ಯಕ್ತವಾಗಿದೆ. ಈ ಖದೀಮರು ಮನುಷ್ಯರಿಂದ ಹಣ ಮತ್ತು ಬೆಲೆಬಾಳುವ ವಸ್ತುಗಳನ್ನು ಕದಿಯಲು ಬೀದಿನಾಯಿಗಳಿಗೆ ವಿಶೇಷ ತರಬೇತಿ ನೀಡುತ್ತಿದ್ದಾರೆ ಎಂಬ ಗಂಭೀರ ಆರೋಪಗಳು ಕೇಳಿಬರುತ್ತಿವೆ.

ಚೀನೀಯರ ಚಿರಯೌವನದ ಆಸೆಗೆ ಕತ್ತೆ ಸಂತತಿಗೆ ಕುತ್ತು!


ಚೀನಾ: ಚೀನೀಯರ ಚಿರಯೌವನದ ಹಪಹಪಿಗೆ ಕತ್ತೆ ಸಂತತಿಗೆ ಕುತ್ತು ಬಂದೊದಗಿದೆ.



ಚೀನಾದ ಸಾಂಪ್ರದಾಯಿಕ ಸೌಂದರ್ಯವರ್ಧಕಗಳ ಉತ್ಪಾದನೆಗೆ ಕತ್ತೆಯ ಚರ್ಮದಿಂದ ಪಡೆದ ಕೊಲಾಜಿನ್ ಬಳಸುವುದರಿಂದ ಲಕ್ಷಾಂತರ ಕತ್ತೆಗಳ ವಧೆ ಮಾಡಲಾಗುತ್ತಿದೆ. 'ಎಜಿಯಾವೊ' ಸಾಂಪ್ರದಾಯಿಕ ಔಷಧ ದೇಹದಲ್ಲಿ ರಕ್ತ ಶುದ್ಧೀಕರಿಸಿ, ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ಸದಾ ಯೌವನವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ ಎಂದು ಚೀನಿಯರು ನಂಬಿದ್ದಾರೆ. ಇದನ್ನು ಕಾಸ್ಮೆಟಿಕ್ಸ್ ಹಾಗೂ ಆಹಾರ ರೂಪದಲ್ಲಿ ಬಳಸುತ್ತಾರೆ. ಈ ಎಜಿಯಾವೋ ತಯಾರಿಸಲು ಕತ್ತೆ ಚರ್ಮವನ್ನು ಕುದಿಸಿ, ಅದರಲ್ಲಿನ ಕೊಲಾಜಿನ್ ಬಳಸಲಾಗುತ್ತದೆ. ಬೇರೆ ಉತ್ಪನ್ನಗಳಿಗೂ ಕೊಲಾಜಿನ್ ಬಳಸುವುದರಿಂದ ಚೀನಾದಲ್ಲಿ ಪ್ರತಿ ವರ್ಷ 50 ಲಕ್ಷಕ್ಕೂ ಹೆಚ್ಚು ಕತ್ತೆಗಳನ್ನು ಕೊಲ್ಲಲಾಗುತ್ತಿದೆ. ಅಲ್ಲದೆ ಬ್ರೆಜಿಲ್ ಮತ್ತು ಆಫ್ರಿಕಾದಿಂದಲೂ ಆಮದು ಮಾಡಿಕೊಳ್ಳಲಾಗುತ್ತಿತ್ತು. ಆದರೆ, ಬ್ರೆಜಿಲ್‌ನಲ್ಲಿ ಕತ್ತೆಗಳ ಸಂತತಿ ಕುಸಿತ ಕಂಡಿದ್ದರಿಂದ ಕತ್ತೆಗಳ ವ್ಯಾಪಾರವನ್ನು 15 ವರ್ಷ ನಿಷೇಧಿಸಿ, ಕಠಿಣ ಕ್ರಮಗಳನ್ನು ವಿಧಿಸಿದೆ.

ದಾವೂದ್ ಇಬ್ರಾಹಿಂ ಕರಾಚಿ ಬಂದರಲ್ಲಿ ಬಿಂದಾಸ್ಸಾಗಿದ್ದಾನೆ!

ನವದೆಹಲಿ: ಮೋಸ್ಟ್ ವಾಂಟೆಡ್ ಅಪರಾಧಿ ಹಾಗೂ ಭೂಗತ ಲೋಕದ ಡಾನ್ ದಾವೂದ್ ಇಬ್ರಾಹಿಂ ಪಾಕಿಸ್ತಾನದ ಕರಾಚಿ ಬಂದರಿನ ಬಳಿ ನೆಲೆಸಿದ್ದು, ಆತ ಸಂಪೂರ್ಣ ಆರೋಗ್ಯವಾಗಿದ್ದಾನೆ ಎಂದು ಪ್ರಖ್ಯಾತ ಅಪರಾಧ ಪತ್ರಕರ್ತ ಹಾಗೂ ಲೇಖಕ ಹುಸೇನ್ ಜೈದಿ ತಿಳಿಸಿರುವುದಾಗಿ ವರದಿಯಾಗಿದೆ. ಇತ್ತೀಚಿನ ದಿನಗಳಲ್ಲಿ ದಾವೂದ್ ಇಬ್ರಾಹಿಂ ತೀವ್ರ ಅನಾರೋಗ್ಯದಿಂದ ಸಾವು–ಬದುಕಿನ ಮಧ್ಯೆ ಹೋರಾಡುತ್ತಿದ್ದಾನೆ ಎಂಬ ವರದಿಗಳನ್ನು ತಳ್ಳಿಹಾಕಿರುವ ಹುಸೇನ್, ಇವೆಲ್ಲವೂ ಸುಳ್ಳು ಸುದ್ದಿಗಳು. ದಾವೂದ್‌ನ ಅತ್ಯಂತ ಆಪ್ತನಿಂದ ತಮಗೆ ಸಿಕ್ಕಿರುವ ಮಾಹಿತಿ ಪ್ರಕಾರ, ಆತ ಆರೋಗ್ಯವಾಗಿದ್ದಾನೆ ಮತ್ತು ಭಾರತ ಎಂದಾದರೂ ಸೆರೆಹಿಡಿಯಲು ಮುಂದಾದರೆ ಸಮುದ್ರ ಅಥವಾ ವಾಯುಮಾರ್ಗದ ಮೂಲಕ ತಕ್ಷಣವೇ ಸುಲಭವಾಗಿ ತಪ್ಪಿಸಿಕೊಳ್ಳಲು ಅನುಕೂಲವಾಗುವಂತೆ ಕರಾಚಿ ಬಂದರಿನ ಅತ್ಯಂತ ಆಯಕಟ್ಟಿನ ಜಾಗದಲ್ಲಿ ವಾಸಿಸುತ್ತಿದ್ದಾನೆ. ಸ್ವಲ್ಪ ಸಮಯದ ಹಿಂದೆ ಆತನಿಗೆ ಕೇವಲ ಸಣ್ಣ ಪ್ರಮಾಣದ ಫುಡ್ ಪಾಯಿಸನಿಂಗ್ ಆಗಿತ್ತಷ್ಟೇ. ಆತ ಸತ್ತಿಲ್ಲ ಅಥವಾ ಸಾಯುವ ಸ್ಥಿತಿಯಲ್ಲೂ ಇಲ್ಲ ಎಂದು ವಿವರಿಸಿದ್ದಾರೆ.



ಬಾಂಗ್ಲಾದಲ್ಲಿ ಟ್ರಕ್ ಪಲ್ಟಿ: 15 ಮಂದಿ ಕಾರ್ಮಿಕರು ದುರ್ಮರಣ

ಢಾಕಾ: ಬಾಂಗ್ಲಾದೇಶದ ಹೆದ್ದಾರಿಯೊಂದರಲ್ಲಿ ಸೋಮವಾರ ಮುಂಜಾನೆ ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಟ್ರಕ್ ಪಲ್ಟಿಯಾಗಿ 15 ಮಂದಿ ಸಾವನ್ನಪ್ಪಿದ್ದು, 10 ಮಂದಿ ಗಾಯಗೊಂಡಿದ್ದಾರೆ. ಈದ್ ಅಲ್–ಅಧಾ ಆಚರಣೆಗಾಗಿ ತಮ್ಮ ಕುಟುಂಬಗಳನ್ನು ಸೇರಲು ತಾಯ್ನಾಡಿಗೆ ಹೊರಟಿದ್ದ ಬಡ ದಿನಗೂಲಿ ಕಾರ್ಮಿಕರಿದ್ದ ಟ್ರಕ್ ತಂಗೈಲ್ ಜಿಲ್ಲೆಯ ಸೊರಾಟೊಯಿಲ್ ಹೆದ್ದಾರಿಯಲ್ಲಿ ನಿಯಂತ್ರಣ ಕಳೆದುಕೊಂಡು ಈ ಅವಘಡ ಸಂಭವಿಸಿದೆ.



ಹಬ್ಬದ ರಜೆಗೆ ಮನೆಗೆ ಮರಳುತ್ತಿದ್ದ ಕಾರ್ಮಿಕರು ಕಬ್ಬಿಣದ ಸರಳುಗಳನ್ನು ಹೊತ್ತೊಯ್ಯುತ್ತಿದ್ದ ಟ್ರಕ್ ಒಂದರಲ್ಲಿ ಲಿಫ್ಟ್ ಪಡೆಯುತ್ತಿದ್ದರು. ಹೆದ್ದಾರಿಯಲ್ಲಿ ಪಲ್ಟಿಯಾದಾಗ ಕಬ್ಬಿಣದ ಸರಳುಗಳು ಹಾಗೂ ವಾಹನದ ಅಡಿಗೆ ಸಿಲುಕಿ 15 ಜನರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಭೀಕರ ಶಬ್ದ ಕೇಳಿ ಸ್ಥಳಕ್ಕೆ ದೌಡಾಯಿಸಿದ ಸ್ಥಳೀಯರು ಟ್ರಕ್ ಹಾಗೂ ಕಬ್ಬಿಣದ ಸರಳುಗಳ ನಡುವೆ ಸಿಲುಕಿಕೊಂಡಿದ್ದ ಹಲವು ಪ್ರಯಾಣಿಕರನ್ನು ರಕ್ಷಿಸಿದ್ದಾರೆ. ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಭಾರತ 114 ರಫೇಲ್ ಯುದ್ಧ ವಿಮಾನ ಖರೀದಿಗೆ ಶೀಘ್ರ ಫ್ರಾನ್ಸ್‌ಗೆ ಮನವಿ

ನವದೆಹಲಿ: ಭಾರತವು ಫ್ರಾನ್ಸ್‌ನಿಂದ 114 ರಫೇಲ್ ಯುದ್ಧ ವಿಮಾನಗಳ ಖರೀದಿಗಾಗಿ ವಿನಂತಿ ಪತ್ರವನ್ನು ಅಂತಿಮಗೊಳಿಸಿದ್ದು, ಶೀಘ್ರದಲ್ಲೇ ಅದನ್ನು ರವಾನಿಸಲು ನಿರ್ಧರಿಸಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.



ಈ 114 ಜೆಟ್‌ಗಳ ಪೈಕಿ 90 ರಫೇಲ್ ಜೆಟ್‌ಗಳನ್ನು ಡಸಾಲ್ಟ್ ಏವಿಯೇಷನ್ ಮತ್ತು ಭಾರತೀಯ ಕಂಪನಿಯ ಸಹಯೋಗದಲ್ಲಿ ಭಾರತದಲ್ಲೇ ತಯಾರಿಸಲಾಗಿದೆ. ಫ್ರಾನ್ಸ್ ವಿನಂತಿ ಪತ್ರಕ್ಕೆ ಪ್ರತಿಕ್ರಿಯಿಸಿದ ಕೂಡಲೇ ಭಾರತವು ಜೆಟ್‌ಗಳ ಸ್ವಾಧೀನಕ್ಕಾಗಿ ಪ್ರಸ್ತಾವನೆಯನ್ನು ಔಪಚಾರಿಕಗೊಳಿಸಲಿದೆ. ಉತ್ಪನ್ನದ ಬೆಲೆ, ಲಭ್ಯತೆ ಹಾಗೂ ಲಾಜಿಸ್ಟಿಕ್ಸ್ ಬೆಂಬಲವನ್ನು ಉಲ್ಲೇಖಿಸಿ ಉಭಯ ದೇಶಗಳ ಅಧಿಕಾರಿಗಳು ಮಾತುಕತೆ ನಡೆಸಿದ ನಂತರ ಭದ್ರತೆಗೆ ಸಂಬಂಧಿಸಿದ ಕ್ಯಾಬಿನೆಟ್ ಸಮಿತಿ ಅನುಮೋದನೆ ಪಡೆದು ಅಂತಿಮ ಒಪ್ಪಂದಕ್ಕೆ ಸಹಿ ಹಾಕಲಾಗುವುದು ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಮುಂದಿನ ಜೂನ್ ತಿಂಗಳಲ್ಲಿ ಪ್ರಧಾನಿ ಮೋದಿ ಫ್ರಾನ್ಸ್ ಪ್ರವಾಸಕ್ಕೂ ಮುನ್ನ ಅದಕ್ಕೂ ಮುನ್ನ ಸೇನಾ ಮುಖ್ಯಸ್ಥರು ಫ್ರಾನ್ಸ್‌ಗೆ ಭೇಟಿ ನೀಡಲಿದ್ದು, ಆ ವೇಳೆಯೇ ರಫೇಲ್ ಖರೀದಿ ಬಗ್ಗೆ ಮಾತುಕತೆಗಳು ಅಂತಿಮಗೊಳ್ಳುವ ಸಾಧ್ಯತೆಯಿದೆ. ರಫೇಲ್ ಖರೀದಿಗೆ 2.90 ಲಕ್ಷ ಕೋಟಿಯಿಂದ 3.15 ಲಕ್ಷ ಕೋಟಿ ರೂ.ವರೆಗೆ ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದ್ದು, ಈ ಬಗ್ಗೆ ರಕ್ಷಣಾ ಸಚಿವಾಲಯ ಸ್ಪಷ್ಟ ಮಾಹಿತಿ ನೀಡಿಲ್ಲ.

ದಿನೇಶ್ ಬೆಳ್ಯಪ್ಪ, ಚೋಂದಮ್ಮ ಪೂಣಚ್ಚರಿಗೆ ಪ್ರಶಸ್ತಿ ಪ್ರದಾನ



ಚೋವಂಡ ಚೋಂದಮ್ಮ, ಚಾಮೆರ ದಿನೇಶ್‌ರಿಗೆ ಕೊಳ್ಳೇಗಾಲದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಾಪೋಕ್ಲು, ಮೇ 25–ಬೆಂಗಳೂರಿನ ವಿಶ್ವ ಚೇತನ ಬಳಗವು ಆಯೋಜಿಸಿದ್ದ ರಾಷ್ಟ್ರೀಯ ಮಹಾನ್ ನಾಯಕರ ಸಂಸ್ಮರಣಾ ಕಾರ್ಯಕ್ರಮದಲ್ಲಿ, ವಿದ್ಯೆ ಮತ್ತು ಸಮಾಜಸೇವಾ ಕ್ಷೇತ್ರದಲ್ಲಿ ಚೋವಂಡ ಚೋಂದಮ್ಮ ಪೂಣಚ್ಚ ಅವರಿಗೆ ರಾಷ್ಟ್ರೀಯ ಸಿದ್ದಬುದ್ದ ಪ್ರಶಸ್ತಿ, ಹಾಗೂ ಸಾಹಿತ್ಯ ಮತ್ತು ಸಂಘಟನಾ ಕ್ಷೇತ್ರದಲ್ಲಿ ಚಾಮೆರ ದಿನೇಶ್ ಬೆಳ್ಯಪ್ಪ ಅವರಿಗೆ ರಾಷ್ಟ್ರೀಯ ಭೀಮ್‌ರಾವ್ ಅಂಬೇಡ್ಕರ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ರೋಟರಿ ಅಧ್ಯಕ್ಷ ಬಿ. ಮಹದೇವರ ಅಧ್ಯಕ್ಷತೆ, ವಿಶ್ವಚೇತನ ಬಳಗದ ಅಧ್ಯಕ್ಷ ಡಾ.ಎಂ.ಶಿವಸ್ವಾಮಿ ಉಪಸ್ಥಿತಿಯಲ್ಲಿ ಕೊಳ್ಳೇಗಾಲದ ರೋಟರಿ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಐವರಿಗೆ ರಾಷ್ಟ್ರೀಯ ಮತ್ತು ಐವರಿಗೆ ರಾಜ್ಯಮಟ್ಟದ ಪ್ರಶಸ್ತಿನೀಡಿ ಗೌರವಿಸಲಾಯಿತು.

ಸರ್ವರ್ ಸಮಸ್ಯೆಯಿಂದಾಗಿ ಪಡಿತರದಾರರ ಪಡಿಪಾಟಲು

ವಿರಾಜಪೇಟೆ, ಮೇ 25–ನ್ಯಾಯ ಬೆಲೆ ಅಂಗಡಿಗಳಲ್ಲಿ ಪಡಿತರದಾರರಿಗೆ ಆಹಾರ ಸಾಮಗ್ರಿಗಳನ್ನು ನೀಡಲು ಹೆಬ್ಬೆಟ್ಟಿನ ಗುರುತು ಅವಶ್ಯಕ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ನಿಯಮವನ್ನೇನೊ ವಿಧಿಸಿದೆ. ಆದರೆ ತಾಲೂಕಿನ ಎಲ್ಲೆಡೆ ಸರ್ವರ್ ಸಮಸ್ಯೆಯಿಂದಾಗಿ ಬೆಳಿಗ್ಗೆಯಿಂದ ಮಧ್ಯಾಹ್ನದ ವರೆಗೂ ಪಡಿತರದಾರರು ಸೊಸೈಟಿ ಮುಂದೆ ಕಾದು ನಿಂತರೂ ಸರ್ವರ್ ಸಿಗದೆ ಪರಿತಪಿಸುತ್ತಿದ್ದಾರೆ.



ನ್ಯಾಯಬೆಲೆ ಅಂಗಡಿ ಸರತಿ ಸಾಲಿನಲ್ಲಿ ನಿಂತಿರುವ ಪಡಿತರದಾರರು

ನಾವು ಎಷ್ಟು ಬಾರಿ ಕಂಪ್ಯೂಟರ್‌ನಲ್ಲಿ ಒತ್ತಿದರೂ ಸರ್ವರ್ ಇಲ್ಲದೆ ಪಡಿತರದಾರರಿಂದ ಹೆಬ್ಬೆಟ್ಟಿನ ಗುರುತು ಹಾಕಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಸೊಸೈಟಿಯವರು ಹೇಳಿಕೊಂಡರೆ, ನಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಸೊಸೈಟಿ ಮುಂದೆ ಬೆಳಿಗ್ಗೆಯಿಂದ ಮಧ್ಯಾಹ್ನ ಮತ್ತೆ ಕೆಲವೊಮ್ಮೆ ಸಂಜೆ ವರೆಗೂ ಕಾದು ನಿಲ್ಲಬೇಕಾಗಿದೆ. ಒಮ್ಮೊಮ್ಮೆ ಆ ದಿನವೆಲ್ಲಾ ಸರ್ವರ್ ದೊರೆಯದೆ, ಮರುದಿನ ಮತ್ತೆ ಬರುವಂತೆ ಹೇಳುತ್ತಾರೆ. ಹೀಗಾದರೆ ನಮ್ಮ ಗತಿಯೇನು? ಇದಕ್ಕಾಗಿ ನಾವು ಕೆಲಸಕ್ಕೆ ಪ್ರತಿದಿನ ರಜೆ ಹಾಕಲು ಸಾಧ್ಯವೆ? ಎಂದು ಪಡಿತರದಾರರು 'ಮೈಸೂರು ಮಿತ್ರ'ನ ಬಳಿ ಆರೋಪಿಸಿದರು.

ಪ್ರತಿದಿನ ಮನೆಯ ಕೆಲಸವನ್ನು ಮಾಡದೆ ಹೆಬ್ಬೆಟ್ಟನ್ನು ನೀಡಲು ಸೊಸೈಟಿಗೆ ಬಂದರೆ ಸರ್ವರ್ ಇಲ್ಲ ಎಂದು ಸೊಸೈಟಿಯವರು ಸಬೂಬು ಹೇಳುತ್ತಾರೆ ಬೆಳಿಗ್ಗೆಯಿಂದ ಸಂಜೆವರೆಗೆ ಕಾದರೆ ಮನೆಯಲ್ಲಿ ಕೆಲಸವನ್ನು ಯಾರು ಮಾಡುತ್ತಾರೆ ಎಂದು ಗೃಹಿಣಿಯೊಬ್ಬರು ಆಕ್ರೋಶ ವ್ಯಕ್ತಪಡಿಸಿದರು. ಏನೋ ಒಂದು ದಿನ ಎಂದು ಸುಮ್ಮನಾಗೋಣ ಎಂದುಕೊಂಡರೆ ಮತ್ತೆ ಮರುದಿನ ಬರುವಂತೆ ಸೊಸೈಟಿಯವರು ಹೇಳುತ್ತಾರೆ ಹೀಗಾದರೆ ನಮ್ಮ ಗತಿ ಏನು ಎಂದು ಮಹಿಳೆಯರು ಆಕ್ರೋಶಿಸಿದರು.

ಸಾರ್ವಜನಿಕರ ದೂರಿನ ಹಿನ್ನೆಲೆಯಲ್ಲಿ ಇಂದು 'ಮೈಸೂರು ಮಿತ್ರ' ತೆಲುಗರ ಬೀದಿಯಲ್ಲಿನ ಸೊಸೈಟಿಗೆ ಭೇಟಿ ನೀಡಿದಾಗ ಬೆಳಿಗ್ಗೆ 8 ಗಂಟೆಗೆ ಬಂದವರೆ ಮಧ್ಯಾಹ್ನ 1 ಗಂಟೆಯಾದರೂ ಹೆಬ್ಬೆಟ್ಟನ್ನು ನೀಡದೆ ಕಾದು ನಿಂತಿದ್ದುದು ಕಂಡು ಬಂದಿತು. ಈ ಬಗ್ಗೆ ಸೊಸೈಟಿ ಮಾಲಿಕರನ್ನು ಭೇಟಿ ಮಾಡಿದಾಗ ಇದು ಒಂದು ದಿನದ ಗೋಳಲ್ಲ ಪ್ರತಿ ದಿನ ಸಮಸ್ಯೆ ಇದ್ದದ್ದೇ. ಸರ್ವರ್ ಸಿಗದೆ ಪಡಿತರದಾರರ ಕೋಪಕ್ಕೆ ನಾವು ತುತ್ತಾಗ ಬೇಕಾಗಿದೆ ಎಂದು ಅಲವತ್ತು ತೋಡಿಕೊಂಡರು.

ಮುಂದಿನ ತಿಂಗಳು ಪರಿಹಾರ

> ಪಡಿತರ ವಿತರಿಸಿರುವ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ವರದಿ ಕಳಿಸಬೇಕಿದ್ದರಿಂದ ಎರಡೆರಡು ಬಾರಿ ಥಂಬ್ ಇಂಪ್ರೆಷನ್ ತೆಗೆದುಕೊಳ್ಳುತ್ತಿದ್ದೆವು. ಮುಂದಿನ ತಿಂಗಳಿಂದ ಒಮ್ಮೆ ಮಾತ್ರ ಹೆಬ್ಬೆಟ್ಟಿನ ಗುರುತು ತೆಗೆದುಕೊಳ್ಳುತ್ತೇವೆ.
> –ಸೀನಾ ಕುಮಾರಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿ

ಗ್ರಾಮೀಣ ಪ್ರದೇಶಗಳಿಂದ ಪಡಿತರ ಸಾಮಗ್ರಿಗಳಿಗಾಗಿ ಬಂದು ನ್ಯಾಯಬೆಲೆ ಅಂಗಡಿ ಮುಂದೆ ಕಾದು ನಿಲ್ಲುವುದು, ಸರ್ವರ್ ಇಲ್ಲಾ ಎಂದು ಹೋಗುವುದು ಮತ್ತೆ ನಾಳೆ ಬಂದು ಅಂಗಡಿ ಮುಂದೆ ನಿಲ್ಲುವುದು ಈ ಕಾರಣದಿಂದ ಪಡಿತರದಾರರು ಬೇಸರಗೊಂಡು ಸರಕಾರಕ್ಕೆ ಕಾರ್ಮಿಕರ ಮೇಲೆ ಕರುಣೆ ಇಲ್ಲವೆ ಈ ಸಮಸ್ಯೆ ಬಗೆಹರಿಸಲು ಯಾರಿಂದಲೂ ಸಾಧ್ಯವಿಲ್ಲವೆ ಸರಕಾರ ಏಕೆ ಗಮನ ಹರಿಸುತ್ತಿಲ್ಲ ಎಂದು ಪಡಿತರದಾರರು ಆಕ್ರೋಶದಿಂದ ಪ್ರಶ್ನಿಸಿದರು.

ತಿಂಗಳಿಗೊಮ್ಮೆ ಪಡೆದುಕೊಳ್ಳುವ ಆಹಾರ ಸಾಮಗ್ರಿಗಳಿಗಾಗಿ 2–3 ದಿನ ಸಾಲಿನಲ್ಲಿ ನಿಲ್ಲುತ್ತಿರುವುದು ಕಾರ್ಮಿಕರಿಗೆ ಅಂದಿನ ಕೆಲಸವು ಇಲ್ಲ ಸಂಬಳವು ಇಲ್ಲದಂತಾಗಿದೆ. ಆದ್ದರಿಂದ ತಾಲೂಕು ಆಡಳಿತ ಇತ್ತ ಗಮನಹರಿಸಿ ಸರ್ವರ್ ಸಮಸ್ಯೆಯನ್ನು ಕೂಡಲೆ ಬಗೆಹರಿಸುವಂತೆ ಪಡಿತರದಾರರು ಆಗ್ರಹಿಸಿದ್ದಾರೆ.

ಸರ್ಕಾರದ ನೀತಿ ವಿರೋಧಿಸಿ ಎಸ್‌ಡಿಪಿಐ ಪ್ರತಿಭಟನೆ

ಮಡಿಕೇರಿ, ಮೇ 25–ರಾಜ್ಯದಲ್ಲಿ ದ್ವೇಷ ಭಾಷಣ ಸಂಬಂಧ ಸಂಘ ಪರಿವಾರದವರ ಮೇಲಿದ್ದ ಪ್ರಕರಣಗಳನ್ನು ರಾಜ್ಯ ಸರ್ಕಾರ ಹಿಂಪಡೆದಿರುವುದನ್ನು ಖಂಡಿಸಿ ಹಾಗೂ ಗೋರಕ್ಷಣೆ ನೆಪದಲ್ಲಿ ಗೂಂಡಾಗಿರಿ ನಡೆಯುತ್ತಿದೆ ಎಂದು ಆರೋಪಿಸಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಪ್ರತಿಭಟನೆ ನಡೆಸಿತು.



ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ನಗರದಲ್ಲಿ ಪ್ರತಿಭಟನೆ ನಡೆಸಿತು.

ನಗರದ ಚೌಕಿ ವೃತ್ತದಲ್ಲಿ ಎಸ್‌ಡಿಪಿಐ ಪ್ರಧಾನ ಕಾರ್ಯದರ್ಶಿ ಉಸ್ಮಾನ್ ಸುಂಟಿಕೊಪ್ಪ ನೇತೃತ್ವದಲ್ಲಿ ಸೇರಿದ ಪ್ರತಿಭಟನಾಕಾರರು ರಾಜ್ಯ ಕಾಂಗ್ರೆಸ್ ಸರಕಾರದ ವಿರುದ್ದ ಆಕ್ಷೇಪ ವ್ಯಕ್ತಪಡಿಸಿದರು.

ರಾಜ್ಯ ಸರಕಾರ ಕನ್ನಡಪರ ಹೋರಾಟಗಾರರು, ರೈತರ ಮೇಲಿನ ಪ್ರಕರಣಗಳನ್ನು ಹಿಂಪಡೆದಿರುವುದನ್ನು ಸ್ವಾಗತಿಸುತ್ತೇವೆ. ಆದರೆ ಕೋಮು ಪ್ರಚೋದನೆಗಾಗಿ ದ್ವೇಷ ಭಾಷಣ ಮಾಡಿದ ಆರೋಪವಿರುವ ಸಂಘ ಪರಿವಾರದ 25ಕ್ಕೂ ಹೆಚ್ಚು ಮಂದಿಯ ಕೇಸನ್ನು ಹಿಂಪಡೆದಿರುವುದು ಸರಿಯಲ್ಲ. ತಕ್ಷಣವೇ ಈ ನಿರ್ಧಾರವನ್ನು ಕೈ ಬಿಟ್ಟು ರಾಜ್ಯ ಕಾಂಗ್ರೆಸ್ ಸರಕಾರ ದ್ವೇಷ ಭಾಷಣ ಮಾಡಿದವರ ಮೇಲೆ ಮತ್ತೆ ಪ್ರಕರಣ ದಾಖಲಿಸಬೇಕು. ಗೋ ರಕ್ಷಣೆಯ ಹೆಸರಿನಲ್ಲಿ ಕಾನೂನು ಕೈಗೆತ್ತಿಕೊಳ್ಳುವವರ ವಿರುದ್ಧವೂ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ದಾವಣಗೆರೆ ಉಪ ಚುನಾವಣೆ ಬಳಿಕ ಎಚ್ಚೆತ್ತ ರಾಜ್ಯ ಸರ ಕಾರ, ಶಾಲಾ ಕಾಲೇಜುಗಳಲ್ಲಿ ಹಿಜಾಬ್ ಬಳಸಲು ಇದ್ದ ನಿರ್ಬಂಧವನ್ನು ತೆಗೆದು ಹಾಕಿದೆ. ಆದರೆ ಸಂಘ ಪರಿವಾರದವರ ವಿರುದ್ಧ ದಾಖಲಾಗಿದ್ದ ದ್ವೇಷ ಭಾಷಣ ಪ್ರಕರಣಗಳನ್ನು ಕೂಡ ಹಿಂಪಡೆಯುತ್ತಿರುವುದು ಸರಿಯಲ್ಲ ಎಂದು ಬಶೀರ್ ಸುಂಟಿಕೊಪ್ಪ ಆರೋಪಿಸಿದರು.

ನಗರಸಭಾ ಸದಸ್ಯರಾದ ಬಶೀರ್ ಅಹಮದ್, ಮನ್ಸೂರ್ ಆಲಿ, ನೀಮಾ ಅರ್ಷದ್, ಮೇರಿ ವೇಗಸ್, ಅಬ್ದುಲ್ ಅಡ್‌ಕಾರ್ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬಸ್‌ನಲ್ಲಿ ಪ್ರಯಾಣಿಸಿದ ಮಾಜಿ ಶಾಸಕ ಅಪ್ಪಚ್ಚು ರಂಜನ್

ಮಡಿಕೇರಿ/ಕುಶಾಲನಗರ ಮೇ 25–ಇಂಧನ ಬಳಕೆ ಪ್ರಮಾಣವನ್ನು ಕಡಿಮೆ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ದೇಶದ ಜನತೆಗೆ ಮನವಿಗೆ ಓಗೊಟ್ಟು, ಮಾಜಿ ಶಾಸಕ ಅಪ್ಪಚ್ಚು ರಂಜನ್ ಬಸ್ ಪ್ರಯಾಣ ಮಾಡಿ ಗಮನ ಸೆಳೆದಿದ್ದಾರೆ.



ಮಾಜಿ ಶಾಸಕ ಅಪ್ಪಚ್ಚು ರಂಜನ್ ಪತ್ನಿಯೊಂದಿಗೆ ಬಸ್‌ನಲ್ಲಿ ಪ್ರಯಾಣಿಸಿದರು.

ಪತ್ನಿಯೊಂದಿಗೆ ಐರಾವತ ಸಾರಿಗೆ ಬಸ್‌ನಲ್ಲಿ ಬೆಂಗಳೂರಿಗೆ ಪ್ರಯಾಣ ಕೈಗೊಂಡ ಸಂದರ್ಭದಲ್ಲಿ ಪ್ರತಿ ತಿಂಗಳು ನನಗೆ ವೈಯಕ್ತಿಕ ಒಂದು ಸಾವಿರ ಲೀಟರ್ ಪೆಟ್ರೋಲ್, ಅಗತ್ಯವಿದ್ದು, ಅದನ್ನು ತಾನು 500 ಲೀಟರ್‌ಗೆ ಇಳಿಸಲು ನಿರ್ಧರಿಸಿ, ದೂರದ ಪ್ರದೇಶಗಳಿಗೆ ಬಸ್‌ನಲ್ಲಿ ಸಂಚರಿಸಲು ತೀರ್ಮಾನಿಸಿರುವುದಾಗಿ ಕುಶಾಲನಗರದ ಸಾರಿಗೆ ನಿಲ್ದಾಣದಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಭಾರತ ಇಂಧನಕ್ಕಾಗಿ ಪರ ರಾಷ್ಟ್ರಗಳ ಮೇಲೆ ಅವಲಂಬಿತವಾಗಿದೆ. ಹೀಗಾಗಿ ಇಂಧನ ದರ ಹೆಚ್ಚಳ ಅನಿವಾರ್ಯವಾಗಿದೆ. ವಿದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಇಂಧನ ದರ ಕಡಿಮೆ ಇದೆ. ನಮ್ಮ ಸರಕಾರದ ಅವಧಿಯಲ್ಲಿ ಇಂಧನ ತೆರಿಗೆಯಲ್ಲಿ 5 ರೂ. ಕಡಿತ ಮಾಡಿದ್ದೆವು. ಈಗ ರಾಜ್ಯ ಸರಕಾರ ಕೂಡ ಇಂಧನದ ಮೇಲಿನ ತೆರಿಗೆಯನ್ನು ಕಡಿಮೆ ಮಾಡಲಿ ಎಂದು ಒತ್ತಾಯಿಸಿದರು.

ಬಿಜೆಪಿ ಮುಖಂಡರಾದ ಎಂ.ಎಂ. ಚರಣ್, ಅಮೃತ್ ರಾಜ್, ಉಮಾ ಶಂಕರ್, ಮಂಡೇ ಪಂಡ ಬೋಸ್ ಮೊಣ್ಣಪ್ಪ, ಎಂ.ಡಿ.ಕೃಷ್ಣಪ್ಪ, ಡಿ.ಕೆ.ತಿಮ್ಮಪ್ಪ, ಚಂದ್ರಶೇಖರ್ ಹೇರೂರು, ವೈಶಾಖ್, ಪ್ರವೀಣ್, ದಿನೇಶ್, ದೊರೆ ಗಣಪತಿ, ಅವಿನಾಶ್, ಆದರ್ಶ್, ಪ್ರವೀಣ್ ಮತ್ತಿತರರು ಬಸ್ ನಿಲ್ದಾಣದಲ್ಲಿ ಉಪಸ್ಥಿತರಿದ್ದರು.

ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್‌ನಿಂದ ಕವನ ವಾಚನ ಸ್ಪರ್ಧೆ

ನಾಪೋಕ್ಲು, ಮೇ 25– ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಪೊನ್ನಂಪೇಟೆ ತಾಲೂಕು ಘಟಕದಿಂದ, ಜಿಲ್ಲಾಧ್ಯಕ್ಷ ಚಾಮೆರ ದಿನೇಶ್ ಬೆಳ್ಯಪ್ಪ ನೇತೃತ್ವದಲ್ಲಿ ತಾಲೂಕು ಮಟ್ಟದ ಆನ್‌ಲೈನ್ ಕವನ ವಾಚನ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

ಸ್ಪರ್ಧೆಯು ಪೊನ್ನಂಪೇಟೆ ತಾಲೂಕು ವ್ಯಾಪ್ತಿಗೆ ಸೀಮಿತವಾಗಿದ್ದು, ಭಾಗವಹಿಸುವ ವಿದ್ಯಾರ್ಥಿಗಳು ಒಂದರಿಂದ ಹತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರಬೇಕು. ಆಸಕ್ತ ವಿದ್ಯಾರ್ಥಿಗಳು, ತಮ್ಮ ಹೆಸರು, ಶಾಲೆ ಮತ್ತು ತರಗತಿಯನ್ನು ಉಲ್ಲೇಖಿಸಿ, ಕವನದ ರಚನೆಕಾರರ ಹೆಸರಿನೊಂದಿಗೆ ಅಥವ ಸ್ವರಚಿತ ಕವನಗಳನ್ನು 3 ನಿಮಿಷದ ಒಳಗಾಗಿ ವಾಚನ ಮಾಡಿ, ರೆಕಾರ್ಡ್ ಮಾಡಿದ ವಿಡಿಯೋವನ್ನು, ಹೆಚ್ ಆರ್ ನಳಿನಿ ವಾಟ್ಸಾಪ್ ಸಂಖ್ಯೆ 7338617817ಗೆ ಮೇ 30ರ ಒಳಗಾಗಿ ತಲುಪುವಂತೆ ಕಳುಹಿಸ ಬಹುದು. ವಿಜೇತರಿಗೆ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ಮತ್ತು ಭಾಗವಹಿಸಿದ ಎಲ್ಲರಿಗೂ ಅಭಿನಂದನಾ ಪತ್ರ ನೀಡಲಾಗುವುದು ಎಂದು ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಪೊನ್ನಂಪೇಟೆ ತಾಲೂಕು ಅಧ್ಯಕ್ಷ ಚೇಂದೀರ ರಮ್ಯಾ ಜಗನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಫಿ ಸಂಸ್ಕರಣ ಮಾರಾಟ, ಉಗ್ರಾಣ ಸಹಕಾರ ಸಂಘದ ವಾರ್ಷಿಕ ಸಭೆ

ಮಡಿಕೇರಿ, ಮೇ 25–ದಿ ಮೈಸೂರು ಕಾಫಿ ಸಂಸ್ಕರಣ ಮಾರಾಟ ಮತ್ತು ಉಗ್ರಾಣ ಸಹಕಾರ ಸಂಘದ ಸಭೆಯು ಸೋಮವಾರಪೇಟೆಯ ಖಾಸಗಿ ಸಭಾಂಗಣದಲ್ಲಿ ಸಂಘದ ಅಧ್ಯಕ್ಷರಾದ ಶಾಸಕ ಎ ಎಸ್.ಪೊನ್ನಣ್ಣ ಅಧ್ಯಕ್ಷತೆಯಲ್ಲಿ ನಡೆಯಿತು.

ಮೈಸೂರು ಕಾಫಿ ಸಂಸ್ಕರಣ ಮಾರಾಟ ಮತ್ತು ಉಗ್ರಾಣ ಸಹಕಾರ ಸಂಘ ನಿಯಮಿತ ಸಂಘ ಪುನಃಶ್ಚೇತನಗೊಂಡಿರುವ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಕಾಫಿ ಮತ್ತು ಇತರೆ ಪ್ಲಾಂಟೇಷನ್ ಬೆಳೆ ಉತ್ಪನ್ನಗಳ ಮೌಲ್ಯ ವೃದ್ಧೀಕರಣದಲ್ಲಿ ಸಂಘದ ಪಾತ್ರ ಮತ್ತು ಚಟುವಟಿಕೆಗಳನ್ನು ನಿರ್ಧರಿಸುವ ಬಗ್ಗೆ ವಿಚಾರ ಸಂಕಿರಣ ನಡೆಸುವ ಬಗ್ಗೆ ತೀರ್ಮಾನ ಕೈಗೊಳ್ಳಲಾಯಿತು.



ಕಾಫಿ ಸಂಸ್ಕರಣ ಮಾರಾಟ ಮತ್ತು ಉಗ್ರಾಣ ಸಹಕಾರ ಸಂಘದ ಸಭೆಯಲ್ಲಿ ಶಾಸಕ ಎ ಎಸ್.ಪೊನ್ನಣ್ಣ ಮಾತನಾಡಿದರು.

ಸಭೆಯಲ್ಲಿ ಸಹಕಾರ ಸಂಘದ ಉಪಾಧ್ಯಕ್ಷ ಪ್ರಭುದೇವ, ಸದಸ್ಯರು, ನಿರ್ದೇಶಕರು, ವಿಚಾರ ಸಂಕಿರಣದ ವೇದಿಕೆ ಅಧ್ಯಕ್ಷ ಎನ್.ಬೋಸ್ ಮಂದಣ್ಣ, ಪ್ರಮುಖರಾದ ಚಂದ್ರಕಲಾ, ಯಾಕೂಬ್, ಕಾಫಿ ಬೆಳೆಗಾರರು ಹಾಗೂ ಪ್ರಮುಖರು ಉಪಸ್ಥಿತರಿದ್ದರು.

2028ಕ್ಕೆ ರಾಜ್ಯದಲ್ಲಿ ಬಿಜೆಪಿ ಅಧಿಕಾರ ಹಿಡಿಯಲಿದೆ

ವಿಧಾನಸೌಧದೊಳಗೆ ಪಾಕಿಸ್ತಾನಕ್ಕೆ ಜೈ ಎಂದು ಹೇಳಿದ ಮೇಲೆ ಕಾಂಗ್ರೆಸ್‌ಗೆ ಏನು ಉಳಿದಿಲ್ಲ

ಚಾಮರಾಜನಗರ: 2028ಕ್ಕೆ ರಾಜ್ಯದಲ್ಲಿ ಬಿಜೆಪಿ ಅಧಿಕಾರ ಹಿಡಿದು, ವಿಧಾನಸೌಧದೊಳಗೆ ಭಾರತ್ ಮಾತಾಕಿ ಜೈ ಎಂದು ಪ್ರಮಾಣ ಸ್ವೀಕರಿಸುತ್ತಾರೆ ಅದನ್ನು ನೀವು ಬರೆದಿಟ್ಟುಕೊಳ್ಳಿ ಎಂದು ಸಂಸದ ಕೋಟ ಶ್ರೀನಿವಾಸ ಪೂಜಾರಿ ಕಾಂಗ್ರೆಸ್‌ಗೆ ತಿರುಗೇಟು ನೀಡಿದರು.



ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನವನ್ನು ಸಂಸದ ಕೋಟ ಶ್ರೀನಿವಾಸ ಪೂಜಾರಿ ಉದ್ಘಾಟಿಸಿ ಮಾತನಾಡಿದರು.

ಜಿಲ್ಲೆಯ ಯಳಂದೂರು ತಾಲೂಕಿನ ಬಿಳಿಗಿರಿರಂಗನ ಬೆಟ್ಟದ ಜೆಎಸ್‌ಎಸ್ ಸಭಾಂಗಣದಲ್ಲಿ ಬಿಜೆಪಿ ಮೈಸೂರು ಗ್ರಾಮಾಂತರ ಜಿಲ್ಲಾ ವತಿಯಿಂದ ನಡೆದ ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನವನ್ನು ಉದ್ಘಾಟಿಸಿ ಮಾತನಾಡಿದರು.

ಬಿಜೆಪಿಗೆ ಸೋಲು ಗೆಲುವು ರಾಜಕೀಯದ ಒಂದು ಭಾಗ. ನಮ್ಮ ಹೋರಾಟ, ಶ್ರಮದಲ್ಲಿ ಬಿಜೆಪಿ ಹೆಚ್ಚಿನ ಮತಗಳನ್ನು ಪಡೆದಿದೆ. ನಮ್ಮ ಅಧಿಕಾರ ಇರಲಿ, ಇಲ್ಲದಿರಲಿ ಜನರ ಮಧ್ಯದಲ್ಲಿ ದೊಡ್ಡಪಕ್ಷದ ತಂಡ ನಮ್ಮಲ್ಲಿ ಇದೆ ಎಂದರು.

ವಿಧಾನಸೌಧದೊಳಗೆ ಪಾಕಿಸ್ತಾನಕ್ಕೆ ಜೈ ಎಂದು ಹೇಳಿದ ಮೇಲೆ ಕಾಂಗ್ರೆಸ್‌ಗೆ ಏನು ಉಳಿದಿಲ್ಲ ಅದ್ಯಾವುದೋ ಜಿರಲೆ ಪಕ್ಷವನ್ನಿಟ್ಟುಕೊಂಡು ಬಿಜೆಪಿ ಛೇಡಿಸಲಿಕ್ಕೆ ಜಿರಲೆ, ಸೊಳ್ಳೆ, ಹೆಗ್ಗಣಗಳಿಗೆ ಹೆದರುವ ಕಾಲ ಇದಲ್ಲ ಅವೆಲ್ಲವನ್ನೂ ನಿರ್ಲಕ್ಷಿಸಿ 2028ಕ್ಕೆ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬರುತ್ತದೆ. ಯಾವ ವಿಧಾನಸೌಧದೊಳಗೆ ಪಾಕಿಸ್ತಾನಕ್ಕೆ ಜೈ ಎಂದು ಕೂಗಿದರೊ ಅದೇ ವಿಧಾನಸೌಧದೊಳಗೆ ಭಾರತ್ ಮಾತಾಕಿ ಜೈ ಎಂದು ಅಧಿಕಾರ ಸ್ವೀಕರಿಸಿ ಪ್ರಮಾಣ ಸ್ವೀಕರಿಸುತ್ತಾರೆ ಅದನ್ನು ನೀವು ಬರೆದಿಟ್ಟುಕೊಳ್ಳಿ ಎಂದು ಕಾಂಗ್ರೆಸ್‌ಗೆ ತಿರುಗೇಟು ನೀಡಿದರು.

ಪಂಡಿತ್ ದೀನದಯಾಳ್ ಜೀ ಅವರು ಬಿಜೆಪಿ ಸಂಘಟನಾತ್ಮಕ ಸಂಬಂಧ ಪ್ರಶಿಕ್ಷಣದ ಕಲ್ಪನೆ ಕೊಟ್ಟಿದ್ದಾರೆ ಜೊತೆಗೆ ಅಂತ್ಯೋದಯ ಅಗತ್ಯತೆ ಪಕ್ಷಕ್ಕೆ ಮನವರಿಕೆ ಮಾಡಿದ್ದಾರೆ ಅವರು ಅಂದು ಪ್ರಶಿಕ್ಷಣಕ್ಕೆ ಕೊಟ್ಟ ಚಾಲನೆ ಇಂದು ಬಿಜೆಪಿಯಾಗಿ ಪರಿವರ್ತನೆಯಾಗಿದ್ದು, ಪ್ರಪಂಚದಲ್ಲಿ ಬಹುದೊಡ್ಡ ರಾಜಕೀಯ ಪಕ್ಷವಾಗಿದೆ. ಬಿಜೆಪಿ ತನ್ನ ಕಾರ್ಯಕರ್ತರಿಗೆ ಪ್ರಶಿಕ್ಷಣ ಕೊಡುವ ವ್ಯವಸ್ಥೆ ಮಾಡಿದೆ ಎಂದರು.

ಭಾರತದಲ್ಲಿ ರಾಷ್ಟ್ರ ಮಟ್ಟದಲ್ಲಿ ಮನ್ನಣೆ ಪಡೆದಂತಹ ರಾಜಕೀಯ ಪಕ್ಷಗಳ ಸಂಖ್ಯೆ ಸುಮಾರು 6 ಪಕ್ಷಗಳು. ರಾಜ್ಯ ಮಟ್ಟದಲ್ಲಿ ಚುನಾವಣೆ ಆಯೋಗದ ಮೂಲಕ ಮಾನ್ಯತೆ ಪಡೆದ ಸುಮಾರು 62ಕ್ಕೂ ಹೆಚ್ಚು ನೋಂದಾಯಿಸಲ್ಪಟ್ಟ ಸುಮಾರು 2500 ಇದ್ದು ಇಷ್ಟೊಂದು ರಾಜಕೀಯ ಪಕ್ಷಗಳ ನಡುವೆ ಸೈದ್ಧಾಂತಿಕ ವಿಚಾರಗಳು, ಅಭಿವೃದ್ಧಿಗಳ ಬಗ್ಗೆ ರಾಜಕಾರಣಿ, ಕಾರ್ಯಕರ್ತರು ಹೇಗಿದ್ದರೆ ಚೆನ್ನಾ ಅಂಥಾ ಹೇಳಿ ಪ್ರಶಿಕ್ಷಣದ ಮೂಲಕ ತರಬೇತಿ ಕೊಡುವ ಪ್ರಸ್ತುತ ಏಕೈಕ ರಾಜಕೀಯ ಪಕ್ಷ ಇದ್ದರೆ ಅದು ಬಿಜೆಪಿ ಮಾತ್ರವೇ. ಆ ಹಿನ್ನಲೆಯಲ್ಲಿ ನಮ್ಮ ಪ್ರಮುಖ ಕಾರ್ಯಕರ್ತರಿಗೆ ಪ್ರಶಿಕ್ಷಣ ಮಾಡುತ್ತಿದೆ. ಪ್ರಶಿಕ್ಷಣದಲ್ಲಿ ನಮ್ಮ ಕಾರ್ಯಪದ್ದತಿ ಏನು, ನಮ್ಮ ವೈಚಾರಿಕ ವಿಚಾರಗಳೇನು, ನಮ್ಮ ಪಂಚ ಸೂತ್ರಗಳೇನು ಎಂದು ಅದರ ಬಗ್ಗೆ ಚರ್ಚೆ ಮಾಡಲಾಗುವುದು ಎಂದರು.

ಕೇಂದ್ರ ಸರ್ಕಾರದ ಸಾಧನೆಗಳನ್ನು ಮನವರಿಕೆ ಮಾಡಿಕೊಡುತಾ, ಪಕ್ಷದ ವಿರುದ್ದ ನಡೆಯುವ ಷಡ್ಯಂತ್ರ ಮನನ ಮಾಡುತ್ತದೆ. ಅದನ್ನ ಸಾಮಾನ್ಯ ಜನರಿಗೆ ತಿಳಿಸುವಂತೆ ಒಟ್ಟಾರೆ ಒಂದೂವರೆ ದಿನಗಳ ಕಾಲ ಅತ್ಯಂತ ಅರ್ಥಪೂರ್ಣವಾಗಿ ದೇಶ ಕಟ್ಟುವ ಭಾಗವಾಗಿ ನನ್ನ ಜಾತಿ, ಧರ್ಮ, ಬದುಕಿಗಿಂತ ದೇಶ ದೊಡ್ಡದು ಎಂದು ರಾಷ್ಟ್ರಭಕ್ತರ ನಿರ್ಮಾಣ ಮಾಡಿ ಬಿಜೆಪಿ ರಾಷ್ಟ್ರೀಯತೆಗೆ ಒತ್ತು ನೀಡಿ ಕಾರ್ಯಕರ್ತರಿಗೆ ಹೊಸ ಉತ್ಸಾಹ, ಅನುಭವ ತುಂಬುವುದಕ್ಕೆ ಪ್ರಶಿಕ್ಷಣ ಆರಂಭವಾಗಿದೆ. ಮೈಸೂರು ಗ್ರಾಮಾಂತರ ಜಿಲ್ಲಾ ಸಮಿತಿ ತುಂಬಾ ಚೆನ್ನಾಗಿ ಕಾರ್ಯ ಕ್ರಮ ಆಯೋಜಿಸಿರುವುದು ತುಂಬಾ ಸಂತಸವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಾಜಿ ಸಚಿವ ಎನ್.ಮಹೇಶ್ ಮಾತನಾಡಿದರು. ಮೈಸೂರು ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಶಾಸಕರಾದ ಬಾಲರಾಜು, ಹರ್ಷವರ್ಧನ್, ವಿಭಾಗ ಸಹ ಸಂಯೋಜಕ ಬಾಲ ಸುಬ್ರಹ್ಮಣ್ಯಂ, ಮಾಜಿ ಅಧ್ಯಕ್ಷ ಸೋಮಶೇಖರ, ವಿಭಾಗ ಪ್ರಭಾರಿ ಸ್ವಾಮಿ ಮರುಳಾಪುರ, ಜಿಲ್ಲಾ ಪ್ರಧಾನಕಾರ್ಯದರ್ಶಿಗಳಾದ ರಾಮಚಂದ್ರ, ಪರೀಕ್ಷಿತರಾಜ ಹಾಜರಿದ್ದರು.

ಬಿಆರ್‌ಟಿಯಲ್ಲಿ ಹೆಣ್ಣಾನೆ ಕಳೇಬರ ಪತ್ತೆ



ಚಾಮರಾಜನಗರ: ತಾಲೂಕಿನ ಬಿಆರ್‌ಟಿ ಹುಲಿ ಸಂರಕ್ಷಿತಾರಣ್ಯ ಪ್ರದೇಶದ ಪುಣಜನೂರು ವನ್ಯಜೀವಿ ವಲಯದ ಬೇಡುಗುಳಿ ಶಾಖೆಯ ನೀರುದುರ್ಗಿ ಗಸ್ತಿನ ಮರುಳುಪಾಳದಲ್ಲಿನ ಅರಣ್ಯ ಪ್ರದೇಶದಲ್ಲಿ ಹೆಣ್ಣಾನೆ ಕಳೇಬರ ಪತ್ತೆಯಾಗಿದೆ.

ಸುಮಾರು ಎರಡು ವರ್ಷ ಪ್ರಾಯದ ಆನೆ ಮೃತಪಟ್ಟಿದ್ದು, ಮೇಲ್ನೋಟಕ್ಕೆ ಅನಾ ರೋಗ್ಯದಿಂದ ಆನೆಯು ಸಾವನ್ನಪ್ಪಿದೆ ಎಂದು ಶಂಕಿಸಲಾಗಿದೆ. ಆನೆಯ ಅಂಗಾಂಗಗಳ ಮಾದರಿಯನ್ನು ಪ್ರಯೋಗಾಲಯಕ್ಕೆ ರವಾನಿಸಲಾಗಿದ್ದು, ವರದಿ ಬಂದ ಬಳಿಕ ಆನೆಯ ಸಾವಿನ ಸತ್ಯಾಂಶ ತಿಳಿಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಳಕ್ಕೆ ಚಾಮರಾಜನಗರ ವನ್ಯಜೀವಿ ಉಪವಿಭಾಗ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ರಮೇಶ್ ಸೇರಿದಂತೆ ಬಿಆರ್‌ಟಿ ಅರಣ್ಯ ಪ್ರದೇಶದ ಅಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಕರ್ತವ್ಯ ಲೋಪ : ಪಿಡಿಓ ಅಮಾನತು

ಚಾಮರಾಜನಗರ, ಮೇ 25– ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಯಳಂದೂರು ತಾಲೂಕಿನ ಯರಿಯೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಡಿ. ಶಿವಕುಮಾರ್ ಅವರನ್ನು ಸೇವೆಯಿಂದ ಅಮಾನತುಗೊಳಿಸುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಆದೇಶಿಸಿದ್ದಾರೆ.

ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಡಿ. ಶಿವಕುಮಾರ್ ಅವರು ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆ ಕರೆದು ಸಭೆಯಲ್ಲಿ ಚರ್ಚಿಸಿ ಸಭೆಯ ತೀರ್ಮಾನದ ರೀತ್ಯಾ ಕ್ರಮವಹಿಸದೇ ಏಕಪಕ್ಷೀಯವಾಗಿ ವರ್ತಿಸಿ ಗ್ರಾಮದಲ್ಲಿ ಕೋಮು ಗಲಭೆ ಉಂಟಾಗಲು ಕಾರಣವಾಗಿರುವುದು ಹಾಗೂ ಕಚೇರಿ ಕರ್ತವ್ಯ ನಿರ್ವಹಿಸುವಲ್ಲಿ ವಿಫಲರಾಗಿರುವ ಸಂಬಂಧ ವರದಿ ಸಲ್ಲಿಕೆಯಾಗಿತ್ತು.

ಈ ಹಿನ್ನೆಲೆಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಇಲಾಖಾ ವಿಚಾರಣೆ ಕಾಯ್ದಿರಿಸಿ ಸೇವೆಯಿಂದ ಡಿ. ಶಿವಕುಮಾರ್ ಅವರನ್ನು ಅಮಾನತು ಮಾಡಿರುವುದಾಗಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಆದೇಶದಲ್ಲಿ ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಚಾಮರಾಜನಗರ: ಮೇ 26ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಪಡಗೂರು, ಶಿಂಡನಪುರ, ಸಿ.ಎನ್.ಹುಂಡಿ, ಶಿವಪುರ, ಬರಗಿ, ಮಲ್ಲಯ್ಯನಪುರ, ಗುಂಡ್ಲುಪೇಟೆ, ಕೋಡಿಹಳ್ಳಿ, ಬೇರಂಬಾಡಿ, ನೆನೆಕಟ್ಟೆ, ವೀರನಪುರ ಕೆಹೆಚ್‌ಬಿ, ಕೆಎಸ್‌ಎಸ್‌ಐಡಿಸಿ, ಬೆಳವಾಡಿ, ಬಾಚಳ್ಳಿ, ಬೊಮ್ಮಲಾಪುರ, ದಾರಿಬೇಗೂರು, ಕೊಡಸೋಗೆ, ಹಗ್ಗವಾಡಿ, ಶೀಲವಂತಪುರ, ಮೈದನಹಳ್ಳಿ, ಗುರುವಿನಪುರ, ಕೆಲ್ಲೂರು, ಲಕ್ಕೂರು, ಬೊಮ್ಮನಹಳ್ಳಿ, ಕುಂದಗೆರೆ, ಕಟ್ನವಾಡಿ, ದೇಪಾಪುರ, ಕಗ್ಗಳ, ಕೆಲಸಿಪುರ, ಹುತ್ತೂರು ಪಂಪ್ ಹೌಸ್, ವಾಟರ್ ಸಪ್ಲೆ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಪುಟ್ಟಮ್ಮ ನಿಧನ

ಚಾಮರಾಜನಗರ: ತಾಲೂಕಿನ ಚಿಕ್ಕ ಬೇಗೂರು ಗ್ರಾಮದ ಲೇಟ್ ನಾಗರಾಜಶೆಟ್ಟಿರವರ ಪತ್ನಿ ಪುಟ್ಟಮ್ಮ (86) ಸೋಮವಾರ ನಿಧನರಾದರು.



ಮೃತರಿಗೆ ಪ್ರಥಮ ದರ್ಜೆ ಗುತ್ತಿಗೆದಾರ ಸಿ.ಎನ್. ಮಂಜುನಾಥ್ ಸೇರಿದಂತೆ ಮೂವರು ಪುತ್ರರು, ನಾಲ್ವರು ಪುತ್ರಿಯರಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಸಂಜೆ ಚಿಕ್ಕಬೇಗೂರಿನಲ್ಲಿ ನಡೆಯಿತು.

ಮಾವು, ಹಲಸಿನೊಂದಿಗೆ ನೇರಳೆ ಹಣ್ಣು ಪೈಪೋಟಿ


ಚಾಮರಾಜನಗರ ಜಿಲ್ಲೆಯಲ್ಲಿ ನೇರಳೆ ಹಣ್ಣಿಗೆ ಭಾರೀ ಡಿಮ್ಯಾಂಡ್

ಚಾಮರಾಜನಗರ: ಪೂರ್ವ ಮುಂಗಾರು ಮಳೆ ಜಿಲ್ಲೆಯಲ್ಲಿ ಬಿರುಸುಗೊಂಡ ಬಳಿಕ ಮಾರುಕಟ್ಟೆಯಲ್ಲಿ ಮಾವು, ಹಲಸಿನೊಂದಿಗೆ ನೇರಳೆ ಹಣ್ಣು ಕೂಡ ಪೈಪೋಟಿ ನಡೆಸುತ್ತಿದ್ದು ಗ್ರಾಹಕರನ್ನು ತನ್ನತ್ತ ಸೆಳೆಯುತ್ತಿವೆ.

ಔಷಧೀಯ ಗುಣ ಹೊಂದಿರುವುದರಿಂದ ಗ್ರಾಹಕರು ನೇರಳೆ ಹಣ್ಣು ಖರೀದಿಗೆ ಮುಂದಾಗಿದ್ದಾರೆ. ಮೇ ತಿಂಗಳಿನಿಂದ ಜುಲೈ ನಡುವೆ ಸಿಗುವ ನೇರಳೆ ಹಣ್ಣು ಮಾರುಕಟ್ಟೆಯಲ್ಲಿ ಗರಿಷ್ಠ ಅಂದರೆ ಒಂದು ತಿಂಗಳು ಸಿಗಬಹುದಾಗಿದೆ. ವಾರದ ಹಿಂದೆಯಷ್ಟೇ ಮಾರುಕಟ್ಟೆಗೆ ಲಗ್ಗೆ ಇಟ್ಟಿರುವ ನೇರಳೆ ಹಣ್ಣಿನ ಬೆಲೆ ಆರಂಭದಲ್ಲಿ ಹೆಚ್ಚಾಗಿತ್ತು. ಆದರೆ ಹೆಚ್ಚು ಇಳುವರಿಯಿಂದ ಬರುಬರುತ್ತಾ ಕಡಿಮೆಯಾಗುತ್ತಿದೆ.

ಮಾರಾಟ ಜೋರು: ಸಾಮಾನ್ಯವಾಗಿ ನೇರಳೆ ಹಣ್ಣು ಫೆಬ್ರವರಿ, ಮಾರ್ಚ್ ತಿಂಗಳಿನಲ್ಲಿ ಹೂ ಬಿಟ್ಟು, ಏಪ್ರಿಲ್ ತಿಂಗಳಿನಲ್ಲಿ ಕಾಯಿ ಕಟ್ಟಿ ಮೇ ಅಥವಾ ಜೂನ್ ತಿಂಗಳಿನಲ್ಲಿ ಹಣ್ಣಾಗುತ್ತದೆ. ಈಗ ಮಾರುಕಟ್ಟೆಗೆ ಲಗ್ಗೆ ಇಟ್ಟಿರುವ ನೇರಳೆ ಹಣ್ಣಿನ ಮಾರಾಟ ಮಾರುಕಟ್ಟೆಯಲ್ಲಿ ಜೋರಾಗಿದೆ.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಸಮೀಪದಲ್ಲಿರುವ ರಸ್ತೆಗಳು, ರಥದ ಬೀದಿ, ಹಳೇ ಬಸ್‌ನಿಲ್ದಾಣ, ದೊಡ್ಡಂಗಡಿ ಬೀದಿ ಹಾಗೂ ಬಿ.ರಾಚಯ್ಯ ಜೋಡಿ ರಸ್ತೆಯ ಬದಿಗಳಲ್ಲಿ ನೇರಳೆ ಹಣ್ಣನ್ನು ತಳ್ಳುಗಾಡಿ, ಸೈಕಲ್‌ನಲ್ಲಿಟ್ಟುಕೊಂಡು ಮಾರಾಟ ಮಾಡಲಾಗುತ್ತಿದೆ.



ಹೆಚ್ಚಿನ ಬೇಡಿಕೆ: ಜಿಲ್ಲೆಯ ಚಾಮರಾಜನಗರ, ಗುಂಡ್ಲುಪೇಟೆ ತಾಲೂಕಿನ ವಿವಿಧ ಗ್ರಾಮಗಳಲ್ಲಿ ನೇರಳೆ ಹಣ್ಣನ್ನು ಹೆಚ್ಚಾಗಿ ಬೆಳೆಯುತ್ತಾರೆ. ಅದರಲ್ಲೂ ತೊರಹಳ್ಳಿ ಮೋಳೆ, ನೇರಳೆ, ಹಳೇಪುರ, ಹರವೆ, ಮಲೆಯೂರು ಇನ್ನಿತರ ಗ್ರಾಮೀಣ ಪ್ರದೇಶಗಳಲ್ಲಿ ಬೆಳೆಯುವ ನೇರಳೆ ಹಣ್ಣನ್ನು, ವ್ಯಾಪಾರಿಗಳು ಖರೀದಿ ಮಾಡಿಕೊಂಡು ಬಂದು ನಗರದಲ್ಲಿ ತಳ್ಳುಗಾಡಿಗಳಲ್ಲಿ ಮಾರಾಟ ಮಾಡುತ್ತಿರುವುದು ಹೆಚ್ಚಾಗಿ ಕಂಡು ಬರುತ್ತಿದೆ.

ಹಿಂದಿನ ವರ್ಷದಲ್ಲಿ ನೇರಳೆ ಹಣ್ಣು ಇಳುವರಿ ಕಡಿಮೆಯಾಗಿದ್ದರಿಂದ ಬೆಲೆ ಏರಿಕೆಯಾಗಿತ್ತು ಆದರೆ ಈ ವರ್ಷ ಇಳುವರಿ ಹೆಚ್ಚಾಗಿದ್ದು ಕೆಜಿ ನೇರಳೆ ಹಣ್ಣಿಗೆ 200 ರಿಂದ 250ರೂ. ವರೆಗೂ ಮಾರಾಟ ಮಾಡಲಾಗುತ್ತಿದೆ.

ನೇರಳೆಗೆ ಹೆಚ್ಚು ಬೇಡಿಕೆ: ಹಣ್ಣುಗಳ ರಾಜನ ಅರ್ಭಟದ ಮಧ್ಯೆಯೂ ನೇರಳೆಯೂ ಅಪಾರ ಪ್ರಮಾಣದ ಬೇಡಿಕೆ ಇರುವುದು ಗಮನಾರ್ಹ ಸಂಗತಿ.

ರೋಗಗಳಿಗೆ ಮದ್ದು: ನೇರಳೆ ಹಣ್ಣುಗಳು ಔಷಧೀಯ ಗುಣ ಹೊಂದಿದೆ. ಬಾಯಿ ದುರ್ಗಂಧ, ತೊದಲುವಿಕೆ ನಿವಾರಣೆ, ಮಧುಮೇಹ ನಿಯಂತ್ರಣ, ಪಚನ ಕ್ರಿಯೆ, ಗಂಟಲು ನೋವು, ಗೂರಲು, ಉಬ್ಬಸ ತಡೆಗೆ ಈ ನೇರಳೆ ಹಣ್ಣು ಉಪಯುಕ್ತವಾಗಿದೆ ಎನ್ನುತ್ತಾರೆ ವೈದ್ಯರು.

ಜಂಬೂ ನೇರಳೆ ಹಣ್ಣಿನ ಜ್ಯೂಸ್‌ನಿಂದ ಹೃದಯ ಕಾಯಿಲೆ, ರೋಗನಿರೋಧಕ ಶಕ್ತಿ ಹಾಗೂ ನಿರಂತರ ಭೇದಿ ನಿಯಂತ್ರಣಕ್ಕೆ ಬರುತ್ತದೆ ಎಂದು ಹೇಳಲಾಗುತ್ತದೆ. ಕ್ಯಾನ್ಸರ್ ರೋಗಾಣುಗಳನ್ನು ನಾಶಪಡಿಸುವ ಶಕ್ತಿಯನ್ನು ಹೊಂದಿರುವ ನೇರಳೆ ಯಕೃತ್ ಸ್ವಚ್ಛತೆಗೂ ಸಹಕಾರಿಯಾಗುತ್ತದೆ. ನೇರಳೆ ಹಣ್ಣಿನಲ್ಲಿ ಕ್ಯಾಲ್ಸಿಯಂ, ಪೊಟ್ಯಾಸಿಯಂ ಮತ್ತು ಕಬ್ಬಿನಾಂಶ ಹೆಚ್ಚಾಗಿ ಇರುವುದರಿಂದ ಗಾಯ, ಅಸ್ತಮಾ ಕಾಯಿಲೆಗೆ ರಾಮಬಾಣವಾಗಿದೆ. ಜೊತೆಗೆ ಅರ್ಜೀಣ, ಕಿಡ್ನಿ ಸಮಸ್ಯೆ ನಿವಾರಣೆಗೆ ನೇರಳೆ ಹಣ್ಣು ಅನುಕೂಲವಾಗಿದೆ ಎಂದು ವೈದ್ಯರು ಹೇಳುತ್ತಾರೆ.

> ಈ ಬಾರಿ ಜಿಲ್ಲೆಯ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ನೇರಳೆ ಹಣ್ಣು ಬರುತ್ತಿದೆ. ಕೆಜಿಗೆ 200 ರೂ.ಗಳಿಗೆ ಮಾರಾಟ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಹಣ್ಣು ಪೂರೈಕೆಯಾಗಲಿದ್ದು, ದರ ಮತ್ತಷ್ಟು ಕಡಿಮೆಯಾಗಲಿದೆ. ಆದರೆ, ಕಳೆದ ಬಾರಿ ನೇರಳೆ ಹಣ್ಣು ಖರೀದಿಸಲು ಜನರು ತೋರಿಸುತ್ತಿದ್ದ ಉತ್ಸಾಹ ಈ ಬಾರಿ ತೋರಿಸುತ್ತಿಲ್ಲ. – ಶಿವು, ಹಣ್ಣಿನ ವ್ಯಾಪಾರಿ.

ನಿಷೇಧಿತ ಕ್ವಾರಿ ಸಮೀಪ ನೀರಿನಲ್ಲಿ ಕೊಳೆತ ಸ್ಥಿತಿಯಲ್ಲಿ ಮೃತ ದೇಹ ಪತ್ತೆ

ಗುಂಡ್ಲುಪೇಟೆ: ತಾಲೂಕಿನ ಮಡಹಳ್ಳಿ ಗ್ರಾಮದ ಗುಮ್ಮಕಲ್ಲು ಗುಡ್ಡದ ನಿಷೇಧಿತ ಕ್ವಾರಿಯ ನೀರಿನಲ್ಲಿ ಸೋಮವಾರ ವ್ಯಕ್ತಿಯೊಬ್ಬರ ಮೃತದೇಹ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಇದನ್ನು ನೋಡಲು ಈ ಪ್ರದೇಶದಲ್ಲಿ ಸಾರ್ವಜನಿಕರು ನೂರಾರು ಸಂಖ್ಯೆಯಲ್ಲಿ ಸೇರಿದ್ದರು.

ಸೋಮವಾರ ಬೆಳಗ್ಗೆ ಕ್ವಾರಿಯ ನೀರಿನಲ್ಲಿ ಮೃತದೇಹ ಇರುವುದನ್ನು ನೋಡಿದ ದನಗಾಯಿಗಳು ಪೊಲೀಸರಿಗೆ ಮಾಹಿತಿ ನೀಡಿದರು. ನಂತರ ಸ್ಥಳೀಯ ಈಜುಗಾರರ ಮೂಲಕ ಮೃತದೇಹವನ್ನು ನೀರಿನಿಂದ ಮೇಲೆತ್ತಲಾಯಿತು. ನಂತರ ಮರಣೋತ್ತರ ಪರೀಕ್ಷೆ ಸಲುವಾಗಿ ಮೃತದೇಹವನ್ನು ಗುಂಡ್ಲುಪೇಟೆ ಸಾರ್ವಜನಿಕ ಆಸ್ಪತ್ರೆಗೆ ಸಾಗಿಸಲಾಯಿತು. ಮೃತನ ಜೇಬಿನಲ್ಲಿ ದೊರೆತ ದಾಖಲೆ ಆಧರಿಸಿ ಮೃತರನ್ನು ಮಂಜು ಬಿನ್ ಚನ್ನಬಸಪ್ಪ, 55 ವರ್ಷ, ಹಂಗಳ ಗ್ರಾಮ ಎಂದು ಗುರುತಿಸಲಾಗಿದೆ.

ಮರಣೋತ್ತರ ಪರೀಕ್ಷೆ ನಂತರ ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಘಟನೆ ಸಂಬಂಧ ಗುಂಡ್ಲುಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮರದ ವ್ಯಾಪಾರದ ಮೂಲಕ ಜೀವನ ನಡೆಸುತ್ತಿದ್ದ ಮಂಜು ಅವರಿಗೆ ಈಚೆಗೆ ಆರೋಗ್ಯ ಸಮಸ್ಯೆ ಕಾಣಿಸಿಕೊಂಡಿತ್ತು. ಈ ಹಿನ್ನೆಲೆಯಲ್ಲಿ ಮನೆಯಲ್ಲಿ ಕೆಲವು ಅಸಮಧಾನಗಳು ಉಂಟಾಗಿದ್ದವು. ಹೀಗಾಗಿ ಮನನೊಂದು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಸಂಶಯಾಯಿಸಲಾಗಿದೆ.

ಗಣಿಗಾರಿಕೆ ಸಂದರ್ಭದಲ್ಲಿ ಪರವಾನಗಿದಾರ ನಿಯಮಾನುಸಾರ ಗಣಿ ಪ್ರದೇಶದ ಸುತ್ತಲೂ ತಂತಿ ಬೇಲಿ ಹಾಕಿಸಬೇಕು ಎಂಬ ನಿಯಮವಿದೆ. ಆದರೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳ ನಿರ್ಲಕ್ಷದಿಂದ ಈ ನಿಯಮ ಜಾರಿಯಾಗಿಲ್ಲ. ಗುಡ್ಡಕುಸಿತದ ಹಿನ್ನೆಲೆಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಈ ಪ್ರದೇಶದಲ್ಲಿ ಗಣಿಗಾರಿಕೆ ನಡೆಸದಂತೆ ಆದೇಶಿಸಿದೆ. ನಿರ್ಜನ ಪ್ರದೇಶವಾದ ಇಲ್ಲಿಗೆ ವಿದ್ಯಾರ್ಥಿಗಳು, ಯುವಕರು ಈಜಲು ಬರುತ್ತಾರೆ. ಇವರಿಗೆ ಸೂಕ್ತ ರಕ್ಷಣೆ ಇಲ್ಲ. ಈಗ ಆತ್ಮಹತ್ಯೆಗೆ ಈ ಪ್ರದೇಶವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆದ್ದರಿಂದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಕ್ವಾರಿ ಬಳಿಗೆ ಜನರು ತೆರಳದಂತೆ ಸೂಕ್ತ ತಂತಿ ಬೇಲಿ ಅಥವಾ ತಡೆಗೋಡೆ ಮಾಡಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಮತ್ತೆ ಪೆಟ್ರೋಲ್, ಡೀಸೆಲ್ ದರ ಏರಿಕೆಗೆ ಕಾಂಗ್ರೆಸ್ ಖಂಡನೆ

ಕೇಂದ್ರ ಸರ್ಕಾರದಿಂದ 'ಇಂಧನ ಲೂಟಿ'

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಪ್ರಧಾನಿ ವಿರುದ್ಧ ಕಿಡಿ ನುಡಿ

ಬೆಂಗಳೂರು, ಮೇ 25, (ಕೆಎಂಶಿ)– ಕೇಂದ್ರದ ಬಿಜೆಪಿ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಪ್ರತಿ ಲೀಟರ್‌ಗೆ 7.52 ಹೆಚ್ಚಿಸುವ ಮೂಲಕ "ಇಂಧನ ಲೂಟಿ'ಯನ್ನು ಆರಂಭಿಸಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಇಂದಿಲ್ಲಿ ಕಿಡಿಕಾರಿದ್ದಾರೆ.

ಪಕ್ಷದ ಕಚೇರಿಯಲ್ಲಿಂದು ಜಂಟಿ ಪತ್ರಿಕಾಗೋಷ್ಠಿ ನಡೆಸಿದ ನಾಯಕರು ಕೇಂದ್ರದ ಈ ನಿರ್ಧಾರದಿಂದ ವೇತನ ವರ್ಗ, ರೈತರು, ಬಡವರು, ಗೃಹಿಣಿಯರು, ಸಣ್ಣ ಉದ್ಯಮಿಗಳು ಮತ್ತು ಜನಸಾಮಾನ್ಯರ ಜೇಬು ಹಾಗೂ ಬಜೆಟ್ ಪಾಲಿಗೆ ಅತ್ಯಂತ ವಿನಾಶಕಾರಿಯಾಗಿದೆ ಎಂದು ಬಣ್ಣಿಸಿದರು.

ಈ ಅತಿರೇಕದ ಲೂಟಿ ಮತ್ತು ಪಿಕ್‌ಪಾಕೆಟ್ ವಿರುದ್ಧ ಸಾಮಾನ್ಯ ಜನರು ವಿವಿಧ ರೂಪದಲ್ಲಿ ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಆದರೂ, ಬಿಜೆಪಿ ನಾಯಕರು ಮತ್ತು ಮೋದಿ ಸರ್ಕಾರವು ಜನರ ಸಂಕಷ್ಟವನ್ನು ಹಾಸ್ಯ ಮಾಡುತ್ತಾ, ಕನ್ನಡಿಗರು ಮತ್ತು ದೇಶದ ಜನರು ಎದುರಿಸುತ್ತಿರುವ ಜೀವನೋಪಾಯದ ಬಿಕ್ಕಟ್ಟಿಗೆ ಯಾವುದೇ ಸ್ಪಂದನೆ ನೀಡದೆ ಮೌನವಾಗಿದೆ.

'ಜನರ ಲೂಟಿ' ಕೇವಲ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳಿಗೆ ಮಾತ್ರ ಸೀಮಿತವಾಗಿಲ್ಲ, ಬದಲಿಗೆ ಗೃಹಬಳಕೆಯ ಗ್ಯಾಸ್, ವಾಣಿಜ್ಯ ಗ್ಯಾಸ್, ಸಣ್ಣ ಎಫ್‌ಟಿಎಲ್ ಸಿಲಿಂಡರ್ ಹಾಗೂ ಸಿಎನ್‌ಜಿ ಬೆಲೆಗಳ ಭಾರೀ ಏರಿಕೆ ಕಂಡಿದೆ. ಇದು ದೈನಂದಿನ ಬಳಕೆಯ ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳ ಮೇಲೂ ತೀವ್ರ ಪರಿಣಾಮ ಬೀರಿದೆ.



ಬಿಜೆಪಿ ಮತ್ತು ಮೋದಿ ಸರ್ಕಾರದ ಈ ಹಗಲು ದರೋಡೆಯು ಕೇವಲ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಅಬಕಾರಿ ಮತ್ತು ಕಸ್ಟಮ್ಸ್ ಸುಂಕವನ್ನು ವಿಧಿಸುವ ಮೂಲಕ 43 ಲಕ್ಷ ಕೋಟಿ ಸಂಗ್ರಹಿಸಿ ಸಾಮಾನ್ಯ ಜನರ ಜೇಬಿಗೆ ಕತ್ತರಿ ಹಾಕುವುದಕ್ಕೆ ಮಾತ್ರ ಸೀಮಿತವಾಗಿಲ್ಲ ಎಂದರು.

ಅಷ್ಟೇ ಅಲ್ಲ ತುರ್ತು ಸಂದರ್ಭಗಳಲ್ಲಿ ದೇಶಕ್ಕೆ ನೆರವಾಗಲು ಇರುವ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ 'ತುರ್ತು ಮೀಸಲು ನಿಧಿ'ಯನ್ನು ಲೂಟಿ ಮಾಡುವ ಹಂತಕ್ಕೂ ತಲುಪಿದೆ.

ಮೇ 23 ರಂದು, ಅಂದರೆ 2 ದಿನಗಳ ಹಿಂದೆ, ಡಾಲರ್ ಎದುರು ಭಾರತೀಯ ರೂಪಾಯಿಯ ಮೌಲ್ಯವು ತೀವ್ರವಾಗಿ ಕುಸಿದಿರುವುದರ ಲಾಭವನ್ನು ಪಡೆದುಕೊಂಡು, ಆರ್‌ಬಿಐನ ಅಮೂಲ್ಯವಾದ 'ವಿದೇಶಿ ವಿನಿಮಯ ಮೀಸಲು' ಅನ್ನು ಮಾರಾಟ ಮಾಡುವ ಮೂಲಕ ಮೋದಿ ಸರ್ಕಾರವು ಆರ್‌ಬಿಐನಿಂದ 2.87 ಲಕ್ಷ ಕೋಟಿಯನ್ನು ಪಡೆದುಕೊಂಡಿದೆ.

ಕಳೆದ 12 ವರ್ಷಗಳಲ್ಲಿ, ಮೋದಿ ಸರ್ಕಾರವು ಆರ್‌ಬಿಐನಿಂದಲೇ 14 ಲಕ್ಷ ಕೋಟಿಯನ್ನು ಸಂಗ್ರಹಿಸಿದೆ. ಇದು ಬಿಜೆಪಿ ಸರ್ಕಾರ ನಡೆಸಿರುವ ಒಟ್ಟು 57 ಲಕ್ಷ ಕೋಟಿ ಲೂಟಿಯನ್ನು ಬಹಿರಂಗಪಡಿಸುತ್ತದೆ.

ಕಳೆದ 11 ದಿನಗಳಲ್ಲಿ ಬಿಜೆಪಿಯು ಸಾಮಾನ್ಯ ಜನರ ಮೇಲೆ 4 ಬಾರಿ ಬೆಲೆ ಏರಿಕೆಯ ದಾಳಿ ನಡೆಸಿದೆ: ಮೇ 23, 2026 ರಂದು ಸಿಎನ್‌ಜಿ ಬೆಲೆಯನ್ನು ಸಹ ಪ್ರತಿ ಕೆ.ಜಿಗೆ 1 ರಷ್ಟು ಹೆಚ್ಚಿಸಲಾಗಿದ್ದು, ಕಳೆದ 11 ದಿನಗಳಲ್ಲಿ ಒಟ್ಟು 4 ಹೆಚ್ಚಳವಾಗಿದೆ. ಇದರ ಪರಿಣಾಮವಾಗಿ ಇಂದು ಬೆಂಗಳೂರಿನಲ್ಲಿ ಸಿಎನ್‌ಜಿ ಬೆಲೆ ಪ್ರತಿ ಕೆಜಿಗೆ 90.10 ತಲುಪಿದೆ.

2014 ರಿಂದ 2025 ರವರೆಗೆ, ಮೋದಿ ಸರ್ಕಾರವು ಪೆಟ್ರೋಲ್ ಮೇಲೆ ಸರಾಸರಿ 19.70 ಮತ್ತು ಡೀಸೆಲ್ ಮೇಲೆ 15.50 ಅಬಕಾರಿ ಸುಂಕವನ್ನು ವಿಧಿಸಿದೆ ಇದು ಸಾಮಾನ್ಯ ಭಾರತೀಯರು ಪೆಟ್ರೋಲ್ ಬೆಲೆಯ 25% ಮತ್ತು ಡೀಸೆಲ್ ಬೆಲೆಯ 22.1% ರಷ್ಟನ್ನು ಮೋದಿ ಸರ್ಕಾರದ ಖಜಾನೆಗೆ ತೆರಿಗೆ ರೂಪದಲ್ಲಿ ಸಂಗ್ರಹವಾಗುತ್ತಿದೆ. ಈ ಮೂಲಕ ಅತ್ಯಗತ್ಯ ಇಂಧನವನ್ನು ಲಾಭ ಗಳಿಸುವ ಸಾಧನವನ್ನಾಗಿ ಪರಿವರ್ತಿಸಲಾಗಿದೆ.

ಮೋದಿ ಸರ್ಕಾರವು ಅಬಕಾರಿ ಸುಂಕವನ್ನು 21 ಬಾರಿ ಪರಿಷ್ಕರಿಸಿದ್ದು, ಅದರಲ್ಲಿ 12 ಬಾರಿ ಬೆಲೆ ಹೆಚ್ಚಳ ಮಾಡಿದೆ. ಇದು ಬೆಲೆಗಳನ್ನು ಕಡಿತಗೊಳಿಸುತ್ತೇವೆ ಎಂದು ಹೇಳುತ್ತಲೇ ಸಾಮಾನ್ಯ ಜನರಿಂದ ಹಣವನ್ನು ದೋಚುವ ವ್ಯವಸ್ಥಿತ ಮಾದರಿಯನ್ನು ತೋರಿಸುತ್ತದೆ.

ಮೋದಿ ಸರ್ಕಾರ ಮತ್ತು ಬಿಜೆಪಿ ಈ ಇಂಧನ ಲೂಟಿಯನ್ನು ತಕ್ಷಣವೇ ನಿಲ್ಲಿಸಬೇಕು ಮತ್ತು ಪೆಟ್ರೋಲ್, ಡೀಸೆಲ್, ಗೃಹಬಳಕೆಯ ಗ್ಯಾಸ್, ವಾಣಿಜ್ಯ ಗ್ಯಾಸ್, ಸಣ್ಣ ಸಿಲಿಂಡರ್, ಸಿಎನ್‌ಜಿ ಮತ್ತು ಪಿಎನ್‌ಜಿ ಬೆಲೆಗಳನ್ನು ಕೂಡಲೇ ಕಡಿತಗೊಳಿಸಬೇಕು ಎಂದು ಆಗ್ರಹಿಸಿದರು.

ನಮ್ಮ ಗ್ಯಾರಂಟಿ ಇಲ್ಲದಿದ್ದರೆ ಗತಿಯೇನು?

ಡಿಸಿಎಂ ಡಿ.ಕೆ. ಶಿವಕುಮಾರ್ ಅಚ್ಚರಿ ಪ್ರಶ್ನೆ

ಬೆಂಗಳೂರು, ಮೇ 25, (ಕೆಎಂಶಿ)– ಕೇಂದ್ರ ಸರ್ಕಾರ ಬೆಲೆ ಏರಿಕೆ ಮೂಲಕ ಜನರ ಮೇಲೆ ಆರ್ಥಿಕ ಹೊರೆ ಹೆಚ್ಚಿಸಿದರೆ, ರಾಜ್ಯ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ಜನಸಾಮಾನ್ಯರ ಆರ್ಥಿಕ ಹೊರೆ ಇಳಿಸುತ್ತಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಗ್ಯಾರಂಟಿ ಇಲ್ಲವಾಗಿದ್ದರೆ ಪರಿಸ್ಥಿತಿ ಯಾವ ರೀತಿ ಇರುತ್ತಿತ್ತು ಎಂದು ಆಲೋಚನೆ ಮಾಡಿ ಎಂದರು.

ನಮ್ಮ ಗ್ಯಾರಂಟಿ ಕೇವಲ ಕರ್ನಾಟಕಕ್ಕೆ ಮಾತ್ರವಲ್ಲ, ಇಡೀ ದೇಶವೇ ಮೆಚ್ಚಿದೆ. ವಿಶ್ವಸಂಸ್ಥೆಯೇ ಪ್ರಶಂಸೆ ಮಾಡಿದೆ. ಬೆಲೆ ಏರಿಕೆ ಗಗನಕ್ಕೆ, ಆದಾಯ ಪಾತಾಳಕ್ಕೆ ಕುಸಿಯುತ್ತಿದೆ. ಅನೇಕ ಹೋಟೆಲ್ ಗಳು ಸಿಲಿಂಡರ್ ದರ ಏರಿಕೆ ಹಾಗೂ ಅಭಾವದಿಂದ ಅರ್ಧ ಬಂದ್ ಮಾಡಿದ್ದಾರೆ.

ಈ ವರ್ಷ ವಾಣಿಜ್ಯ ಸಿಲಿಂಡರ್ ಬೆಲೆಯನ್ನು ಮಾರ್ಚ್ 1 ರಂದು 28, ಮಾರ್ಚ್ 7ರಂದು 114.50, ಮಾರ್ಚ್ 23ರಂದು 49, ಏಪ್ರಿಲ್ 1ರಂದು 195 ರಿಂದ 218 ರವರೆಗೆ, ಮೇ 1ರಂದು 993 ನಷ್ಟು ಏರಿಕೆ ಮಾಡಿದ್ದಾರೆ ಎಂದು ವಿವರಿಸಿದರು.

ಈ ಬೆಲೆ ಏರಿಕೆ ಎಲ್ಲರ ಬದುಕಿಗೆ ಶಾಪವಾಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಕಡಿಮೆ ಇದ್ದರೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಬೆಲೆ ಏರಿಕೆ ಮಾಡಲಾಗಿದೆ. ಇಂಧನ ಮೇಲಿನ ತೆರಿಗೆ ಮೂಲಕ ಕೇಂದ್ರ ಸರ್ಕಾರ ನಿತ್ಯ 1 ಸಾವಿರ ಕೋಟಿ ಸಂಗ್ರಹಿಸುತ್ತಿದೆ.



ಈ ತೆರಿಗೆ ಬಿಟ್ಟು ಜನಸಾಮಾನ್ಯರ ಮೇಲಿನ ಆರ್ಥಿಕ ಹೊರೆ ಕಡಿಮೆ ಮಾಡಬಹುದಾಗಿತ್ತು. ಬೇರೆ ಯಾವುದೇ ದೇಶದಲ್ಲಿ ಈ ರೀತಿ ಬೆಲೆ ಏರಿಕೆಯಾಗಿಲ್ಲ. ಕಳೆದ 11 ದಿನಗಳಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು 7.52 ರೂ. ಹೆಚ್ಚಳ ಮಾಡಲಾಗಿದೆ. ಇದರಿಂದ ಜನಸಾಮಾನ್ಯರ ಮೇಲೆ ಪರಿಣಾಮ ಬೀರಿದೆ ಎಂದು ತಿಳಿಸಿದರು.

ಮಾನ–ಮಾರ್ಯಾದೆ ಇಲ್ಲದ ಬಿಜೆಪಿ ನಾಯಕರು ರಾಜ್ಯ ಸರ್ಕಾರಕ್ಕೆ ಬೆಲೆ ಇಳಿಸಲು ಹೇಳುತ್ತಿದ್ದಾರೆ. ಕೇಂದ್ರ ಸರ್ಕಾರದ ಬೆಲೆ ಏರಿಕೆ ವಿರುದ್ಧ ಸುಲಿಗೆ ಎಂದು ಟೀಕೆ ಮಾಡಿದೆವು. 100 ನಾಟೌಟ್ ಎಂದು ಪ್ರತಿಭಟನೆ ಮಾಡಿದೆವು. ನಿಘಂಟಿನಲ್ಲಿರುವ ಎಲ್ಲಾ ಪದ ಪ್ರಯೋಗ ಮಾಡಿ ಟೀಕೆ ಮಾಡಿದರೂ ಮಾನ–ಮರ್ಯಾದೆ ಇಲ್ಲದೆ, ರಾಜ್ಯ ಸರ್ಕಾರ ತೆರಿಗೆ ಕಡಿಮೆ ಮಾಡಬೇಕು ಎಂದು ವಿರೋಧ ಪಕ್ಷದ ನಾಯಕರಾದ ಆರ್.ಅಶೋಕ್ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ಹೇಳುತ್ತಿದ್ದಾರೆ. ಮೊದಲು ನೀವು ಕೇಂದ್ರ ಸರ್ಕಾರದ ಸುಲಿಗೆ ನಿಲ್ಲಿಸಿ ಎಂದು ವಾಗ್ದಾಳಿ ನಡೆಸಿದರು.

ಬೆಲೆ ಏರಿಕೆ ವಿರುದ್ಧ ಜನರ ಗಮನ ಸೆಳೆಯುವುದು, ಜಾಗೃತಿ ಮೂಡಿಸುವ ಕೆಲಸ ಮಾಡುತ್ತೇವೆ. ಜನರೇ ಈ ಜನವಿರೋಧಿ ಕೇಂದ್ರ ಸರ್ಕಾರವನ್ನು ಕಿತ್ತೊಗೆಯುವ ಕೆಲಸ ಆಗಬೇಕು. ಮೋದಿ ಅವರ ನೇತೃತ್ವದ ಬಿಜೆಪಿ ಸರ್ಕಾರ ಸಾಧನೆ ಬಗ್ಗೆ ಮಾತನಾಡುತ್ತಾರೆ. ಮೋದಿ ಅವರು ಮದುವೆಗೆ ಚಿನ್ನ ಖರೀದಿ ಮಾಡಬೇಡಿ, ಸರಿಯಾಗಿ ಊಟ ಮಾಡಬೇಡಿ ಎಂದು ಹೇಳಿ ಜನರನ್ನು ನಿಯಂತ್ರಿಸಲು ಹೇಗೆ ಸಾಧ್ಯ ಎಂದರು.

ಗ್ಯಾರಂಟಿಯಲ್ಲಿ 100 ಕೋಟಿ ದುರ್ಬಳಕೆ: ಕೆಲವು ಗ್ಯಾರಂಟಿ ಫಲಾನುಭವಿಗಳು ಮೃತಪಟ್ಟಿದ್ದು, ಸುಮಾರು 100 ಕೋಟಿಯಷ್ಟು ಹಣ ಬೇರೆಯವರಿಗೆ ಹೋಗಿ ದುರ್ಬಳಕೆಯಾಗಿದೆ. ಇನ್ನು ಬೇರೆಯವರ ದೂರವಾಣಿ ಸಂಖ್ಯೆ ಕೊಟ್ಟಿರುವುದರಿಂದ ಸರಿಯಾದ ಫಲಾನುಭವಿಗಳಿಗೆ ಯೋಜನೆ ತಲುಪುತ್ತಿದೆಯೇ ಇಲ್ಲವೇ ಎಂದು ತಿಳಿಯಬೇಕಿದೆ. ಹೀಗಾಗಿ ಫಲಾನುಭವಿಗಳ ದಾಖಲೆ ಸಂಗ್ರಹಿಸುವ ಬಗ್ಗೆ ಚರ್ಚೆ ಮಾಡುವ ಬಗ್ಗೆ ಸಲಹೆ ಬಂದಿದೆ. ಪ್ರತಿ ತಾಲೂಕಿನಲ್ಲಿ ಇದನ್ನು ಪರಿಶೀಲನೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಇಂಧನ ದರ ಹೆಚ್ಚಳದ ಮೂಲಕ ದೇಶ, ಜನಸಾಮಾನ್ಯರ ಲೂಟಿ

ಸಿಎಂ ಸಿದ್ದರಾಮಯ್ಯ ಆಕ್ರೋಶ

ಬೆಂಗಳೂರು, ಮೇ 25, (ಕೆಎಂಶಿ)–ಮೋದಿಯವರು ಪ್ರಧಾನಿ ಆದ ಬಳಿಕ ಸತತವಾಗಿ ಪೆಟ್ರೋಲ್ ಡೀಸೆಲ್ ಬೆಲೆ ಹೆಚ್ಚಳ ಮಾಡುವ ಮೂಲಕ ದೇಶವನ್ನು ಹಾಗೂ ಜನಸಾಮಾನ್ಯರನ್ನು ಲೂಟಿ ಮಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ಮತ್ತು ಗ್ಯಾಸ್ ದರಗಳ ಏರಿಸಿದ್ದು, ದೇಶದ ಇತಿಹಾಸದಲ್ಲಿ ಹೀಗೆ ಏರಿಕೆಯಾಗಿದ್ದಿಲ್ಲ. ಜನಸಾಮಾನ್ಯರು, ಮಧ್ಯಮ ವರ್ಗದ ಜನರ ಜೀವನ ದುಸ್ತರವಾಗಿದೆ. ಬೆಲೆಯೇರಿಕೆಯಿಂದ ಜನ ತತ್ತರಿಸಿದ್ದಾರೆ ಎಂದರು.

ಬಿಜೆಪಿ ಅಧಿಕಾರಕ್ಕೆ ಬಂದರೆ ಗುಜರಾತ್ ಮಾದರಿ ಸರ್ಕಾರ ಬರುತ್ತದೆ. ಒಳ್ಳೆಯ ದಿನಗಳು ಬರುತ್ತವೆ ಎಂದು ಹೇಳಿ ಜನರಿಗೆ ಟೋಪಿ ಹಾಕಿದ್ದಾರೆ. ಕಳೆದ 11 ದಿನಗಳಿಂದ 4 ಬಾರಿ ಪೆಟ್ರೋಲ್, ಡೀಸೆಲ್ ಹಾಗೂ ಗ್ಯಾಸ್ ದರ ಏರಿಕೆಯಾಗಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ಬೆಲೆ 110.93 ರೂ.ಗಳಾಗಿವೆ. ಡೀಸೆಲ್ ದರ 98.89 ರೂ.ಗಳಾಗಿವೆ 7.52 ರೂ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯಾಗಿದೆ. ಪ್ರಧಾನಿ ಮೋದಿಯವರು ದೇಶವನ್ನು ಲೂಟಿ ಮಾಡುತ್ತಿರುವುದು ರುಜುವಾತಾಗುತ್ತಿದೆ ಎಂದರು.



ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ 2014ರ ಮೇ ತಿಂಗಳಲ್ಲಿ 71.41 ರೂ. ಪೆಟ್ರೋಲ್ ಲೀ. ಒಂದಕ್ಕೆ ಬೆಲೆಯಿದ್ದರೆ, ಡೀಸೆಲ್ 56.71 ದರ ಇತ್ತು. ಅಂದು 412 ರೂ. ಆಗಿದ್ದ ಗ್ಯಾಸ್ ಸಿಲಿಂಡರ್ ಬೆಲೆ, ಇಂದು 915 ರೂ. ಆಗಿದೆ, ಇದು ದುಪ್ಪಟ್ಟಿಗಿಂತ ಹೆಚ್ಚಾಗಿದೆ ಮನಮೋಹನ್ ಸಿಂಗ್ ಅವರ ಅವಧಿಯಲ್ಲಿ ಕಚ್ಚಾ ತೈಲದ ಬೆಲೆ ಹೋಲಿಸಿದರೆ ಪ್ರಸ್ತುತ ಬೆಲೆ ಇಳಿದಿದ್ದರೂ ಕೂಡ, ಪೆಟ್ರೋಲ್ ಡೀಸೆಲ್ ಬೆಲೆ ಹೆಚ್ಚುತ್ತಿದೆ 65 ರಿಂದ 75 ಡಾಲರ್ ಬೆಲೆ ಇದ್ದಾಗ ಈ ಕುಸಿತ ಬೆಲೆಯ ಲಾಭ ಗ್ರಾಹಕರಿಗೆ ದೊರೆಯಲಿಲ್ಲ.

ಪ್ರಸ್ತುತ ಕಚ್ಚಾ ತೈಲದ ಬೆಲೆ 100 ಡಾಲರ್ ಮಿತಿಯೊಳಗಿದ್ದರೂ, ಕೇಂದ್ರ ಸರ್ಕಾರ ಪೆಟ್ರೋಲ್ ಡೀಸೆಲ್ ಬೆಲೆಯನ್ನು ಸತತ ನಾಲ್ಕು ಬಾರಿ ಏರಿಕೆ ಮಾಡಿದೆ. ಇದರಿಂದಾಗಿ ಗ್ರಾಹಕರಿಗೆ, ರೈತರಿಗೆ, ಜನಸಾಮಾನ್ಯರಿಗೆ ಈ ಬೆಲೆ ಏರಿಕೆಯ ಬಿಸಿ ತಟ್ಟಲಿದೆ ಮೋದಿಯವರು ದೇಶವನ್ನು ಹಾಗೂ ಜನಸಾಮಾನ್ಯರನ್ನು ಲೂಟಿ ಮಾಡುತ್ತಿದ್ದಾರೆ ಎಂದರು.

ಅಂಬೇನಾಲಿ ಘಾಟ್‌ನಲ್ಲಿ ಭಯಾನಕ ಅಪಘಾತ

ಸಾವಿರ ಅಡಿ ಆಳದ ಪ್ರಪಾತಕ್ಕೆ ಬಿದ್ದ ಎಸ್‌ಯುವಿ ಕಾರು; 8 ಯುವಕರು ಸಾವು

ರಾಯಗಢ: ಮಹಾರಾಷ್ಟ್ರದ ರಾಯಗಢ ಜಿಲ್ಲೆಯಲ್ಲಿ ಸೋಮವಾರ ಬೆಳಗಿನ ಜಾವ ಭಯಾನಕ ಅಪಘಾತ ಸಂಭವಿಸಿದ್ದು, ಎಸ್‌ಯುವಿ ಕಾರೊಂದು ಒಂದು ಸಾವಿರ ಅಡಿ ಆಳವಾದ ಪ್ರಪಾತಕ್ಕೆ ಉರುಳಿ ಬಿದ್ದ ಪರಿಣಾಮ ಎಂಟು ಪ್ರವಾಸಿಗರು ಮೃತಪಟ್ಟಿದ್ದಾರೆ.

ಪಶ್ಚಿಮ ಘಟ್ಟದ ಅತ್ಯಂತ ಅಪಾಯಕಾರಿ ಪ್ರದೇಶಗಳಲ್ಲಿ ಒಂದಾದ ಅಂಬೆನಾಲಿ ಘಾಟ್ ಬಳಿಯ ಮಹಾಬಲೇಶ್ವರ–ಪೋಲಾದ್‌ಪುರ ರಸ್ತೆಯಲ್ಲಿ ಇಂದು ಬೆಳಗಿನ ಜಾವ 2.30 ರ ಸುಮಾರಿಗೆ ಈ ಭೀಕರ ಅಪಘಾತ ಸಂಭವಿಸಿದೆ.

ಮೃತ ಯುವಕರು ಸತಾರಾ ಜಿಲ್ಲೆಯ ನಿವಾಸಿಗಳಾಗಿದ್ದು, ದುರಂತ ಸಂಭವಿಸಿದಾಗ ದಪೋಲಿಯಿಂದ ಸತಾರಾಕ್ಕೆ ಪ್ರಯಾಣಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮೃತರನ್ನು ಸತಾರಾ ನಿವಾಸಿಗಳಾದ ರಿತೇಶ್ ಲೋಖಂಡೆ(22), ಸುಹಾಸ್ ಲೋಖಂಡೆ(20) ಉತ್ಕರ್ಷ್ ಶಿಂಗ್ಟೆ(21), ನಿಖಿಲ್ ಶಿಂಗ್ಟೆ(25), ಮಹೇಶ್ ಪವಾರ್ (25), ಆದಿತ್ಯ ಸಾಳುಂಖೆ(21), ರಾಜೇಶ್ ಕಾಟ್ಕರ್(35) ಹಾಗೂ ರತ್ನಿಗಿರಿಯ ಅಂಶ್ ಚವಾಣ್(19) ಎಂದು ಗುರುತಿಸಲಾಗಿದೆ.

ಪ್ರಾಥಮಿಕ ಮಾಹಿತಿಯ ಪ್ರಕಾರ, ಮೃತ 8 ಯುವಕರು ಸ್ಕಾರ್ಪಿಯೋ ಎಸ್‌ಯುವಿ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಕಾರು ಕಡಿದಾದ ರಸ್ತೆಯ ತಿರುವಿನಲ್ಲಿ ಚಾಲಕನ ನಿಯಂತ್ರಣ ಕಳೆದುಕೊಂಡು ಆಳವಾದ ಪ್ರಪಾತಕ್ಕೆ ಬಿದ್ದಿದೆ ಎಂದು ವರದಿಯಾಗಿದೆ.

ಕೆಎಸ್‌ಎಫ್ ವತಿಯಿಂದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಜೂ.1ರಿಂದ ತರಬೇತಿ

ಮೈಸೂರು, ಮೇ 25– ಮೈಸೂರಿನ ಕೃಷಿಕ್ ಸರ್ವೋದಯ ಫೌಂಡೇಶನ್ (ಕೆಎಸ್‌ಎಫ್) ಮೈಸೂರು ಶಾಖೆಯ ವತಿಯಿಂದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಜೂನ್ 1ರಿಂದ ತರಬೇತಿ ಹಮ್ಮಿಕೊಳ್ಳಲಾಗಿದೆ. ವಿಜಯನಗರ 2ನೇ ಹಂತ, ಜನರಲ್ ಕೆ.ಎಸ್.ತಿಮ್ಮಯ್ಯ ರಸ್ತೆಯಲ್ಲಿರುವ ಕೆಎಸ್‌ಎಫ್ ಅಕಾಡೆಮಿಯಲ್ಲಿ ತರಬೇತಿ ಆಯೋಜಿಸಲಾಗಿದ್ದು, ಸಿವಿಲ್ ಸೇವಾ ಪರೀಕ್ಷೆಗಳಾದ ಯುಪಿಎಸ್‌ಸಿ, ಕೆಎಎಸ್, ಬ್ಯಾಂಕಿಂಗ್, ಎಸ್‌ಎಸ್‌ಸಿ, ರೈಲ್ವೆ ನೇಮಕಾತಿ ಮಂಡಳಿ(ಆರ್‌ಆರ್‌ಬಿ)ಯ ಗ್ರೂಪ್ ಸಿ ಹುದ್ದೆ, ಪಿಎಸ್‌ಐ, ಪಿಸಿ, ಇಎಸ್‌ಐ, ಎಫ್‌ಡಿಎ, ಎಸ್‌ಡಿಎ, ಪಿಡಿಓ, ವಿಎಓ ಹಾಗೂ ಜಿಪಿಎಸ್‌ಟಿಆರ್/ಹೆಚ್‌ಎಸ್‌ಟಿಆರ್ ಸೇರಿದಂತೆ ವಿವಿಧ ಪರೀಕ್ಷೆಗಳಿಗೆ ಮಾರ್ಗದರ್ಶನ ನೀಡಲಾಗುವುದು.

ವ್ಯಕ್ತಿತ್ವ ವಿಕಸನ, ವಿಷಯಾಧಾರಿತ ಅಧ್ಯಯನ, ಪರೀಕ್ಷಾ ತಂತ್ರಗಳು, ಮಾದರಿ ಪರೀಕ್ಷೆಗಳು, ವೈಯಕ್ತಿಕ ಮಾರ್ಗದರ್ಶನಕ್ಕೆ ಆದ್ಯತೆ ನೀಡಲಾಗುತ್ತಿದ್ದು, ಆಸಕ್ತರು ಹೆಸರು ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಶೈಕ್ಷಣಿಕ ಸಂಯೋಜಕರಾದ ಎಂ.ವಿ.ಜ್ಯೋತಿ(ಮೊ.ಸಂ.8296031570) ಅವರನ್ನು ಸಂಪರ್ಕಿಸಬಹುದು ಎಂದು ಕೆಎಸ್‌ಎಫ್ ಕಾರ್ಯದರ್ಶಿ ಹೆಚ್.ಕಿಶೋರ್ ಚಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'3ಎಫ್' ಮೇಲೆ ನಿಗಾ ವಹಿಸಿ

ಕೇಂದ್ರ ಸಚಿವೆ ಸೀತಾರಾಮನ್ ಕರೆ

ಮುಂಬೈ: ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಮಧ್ಯೆ ಇಂಧನ, ರಸಗೊಬ್ಬರ ಮತ್ತು ವಿದೇಶೀ ವಿನಿಮಯ – 3ಎಫ್ ಗಳ ಮೇಲೆ ತೀವ್ರ ನಿಗಾ ವಹಿಸಬೇಕೆಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸೋಮವಾರ ಕರೆ ನೀಡಿದ್ದಾರೆ.

ಇಂದು ಭಾರತೀಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಬ್ಯಾಂಕ್‌ನ 37ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಹಣಕಾಸು ಸಚಿವೆ, ಜಾಗತಿಕ ಅನಿಶ್ಚಿತತೆಯ ಹೊರ ತಾಗಿಯೂ ಭಾರತದ ಆರ್ಥಿಕತೆಯು ಸ್ಥಿತಿಸ್ಥಾಪಕತ್ವವನ್ನು ಹೊಂದಿದೆ ಎಂದು ಪ್ರತಿಪಾದಿಸಿದರು.

ಪ್ರಧಾನಿ ನರೇಂದ್ರ ಮೋದಿಯವರ ಪರಹಿತಚಿಂತನೆಯ ಬಗ್ಗೆ ಮನವಿ ಮಾಡಿದ ನಂತರ ದೇಶದ ಆರ್ಥಿಕತೆಯ ಬಗ್ಗೆ ನಕಾರಾತ್ಮಕ ಮತ್ತು ನಿರಾಶಾದಾಯಕ ವಾತಾವರಣ ಸೃಷ್ಟಿಸುತ್ತಿರುವ ವಿಮರ್ಶಕರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ಸೀತಾರಾಮನ್ ಅವರು, ಭಾರತವು ಸುಳ್ಳು ಭಯ ಮತ್ತು ಆತಂಕದ ವಾತಾವರಣ ಸೃಷ್ಟಿಸುವುದನ್ನು ಸಹಿಸುವುದಿಲ್ಲ. ನಮ್ಮ ಮಾತು ಮತ್ತು ಕೃತಿಗಳ ಮೂಲಕ ಜನರಲ್ಲಿ ವಿಶ್ವಾಸ ತುಂಬುವ ಕೆಲಸ ಮಾಡಬೇಕೇ ಹೊರತು ನಿರಾಶಾವಾದವನ್ನಲ್ಲ" ಎಂದರು.



ದೇಶೀಯ ಬೆಳವಣಿಗೆಯನ್ನು ಕಾಪಾಡಿಕೊಳ್ಳಲು ಭಾರತದ ನೀತಿ ಪ್ರತಿಕ್ರಿಯೆಯನ್ನು ಮಾಪನಾಂಕ ಮಾಡಲಾಗಿದೆ ಎಂದು ಹೇಳಿದ ಹಣಕಾಸು ಸಚಿವೆ, ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಕಡಿತಗೊಳಿಸಿದೆ. ಇದರಿಂದಾಗಿ ಸರ್ಕಾರಕ್ಕೆ ಸುಮಾರು 1 ಲಕ್ಷ ಕೋಟಿ ರೂ.ಗೂ ಅಧಿಕ ಆದಾಯ ನಷ್ಟವಾಗುತ್ತಿದ್ದರೂ ಜಾಗತಿಕ ತೈಲ ಬೆಲೆ ಏರಿಕೆಯಿಂದ ಸಾಮಾನ್ಯರನ್ನು ರಕ್ಷಿಸಲು ಸರ್ಕಾರ ಈ ಕ್ರಮ ತೆಗೆದುಕೊಂಡಿದೆ ಎಂದರು.

ಕಚ್ಚಾ ತೈಲ ಬೆಲೆ ಹೆಚ್ಚಿದ ಜೊತೆಗೆ, ರಸಗೊಬ್ಬರ ಬೆಲೆಗಳು "ಊಹಿಸಲಾಗದ" ಮಟ್ಟವನ್ನು ತಲುಪಿದೆ ಮತ್ತು ಹೆಚ್ಚಿದ ಚಿನ್ನದ ಬೆಲೆಗಳು ಬಾಹ್ಯ ರಂಗದಲ್ಲಿ ಕೆಲವು ಸವಾಲುಗಳನ್ನು ಸೃಷ್ಟಿಸುತ್ತಿವೆ ಎಂದು ಹಣಕಾಸು ಸಚಿವೆ ಹೇಳಿದ್ದಾರೆ.

ಮಧ್ಯಪ್ರಾಚ್ಯ ಬಿಕ್ಕಟ್ಟು ಮೂರನೇ ತಿಂಗಳಿಗೆ ಕಾಲಿಡುತ್ತಿರುವುದರಿಂದ ಇಂಧನ, ರಸಗೊಬ್ಬರ ಮತ್ತು ವಿದೇಶೀ ವಿನಿಮಯ ಈ "ಮೂರು ಎಫ್"ಗಳ ಮೇಲೆ ತೀವ್ರ ನಿಗಾ ವಹಿಸುವ ಅವಶ್ಯಕತೆಯಿದೆ ಎಂದು ಸೀತಾರಾಮನ್ ಹೇಳಿದರು.

ಎಐಎಡಿಎಂಕೆ ಮೂವರು ಶಾಸಕರು ರಾಜೀನಾಮೆ ನೀಡಿ ಟಿವಿಕೆಗೆ ಸೇರ್ಪಡೆ

ಪಳನಿಸ್ವಾಮಿಗೆ ಮತ್ತೊಂದು ಹೊಡೆತ!


ಮರಗತಮ್


ಜಯಕುಮಾರ್


ಸತ್ಯಭಾಮ

ಚೆನ್ನೈ: ಇತ್ತೀಚಿನ ಚುನಾವಣಾ ಸೋಲಿನ ನಂತರ ಆಂತರಿಕ ಬಿಕ್ಕಟಿನಿಂದ ಬಳಲುತ್ತಿರುವ ಎಐಎಡಿಎಂಕೆಗೆ ಮತ್ತೊಂದು ಹೊಡೆತ ಬಿದ್ದಿದೆ. ಅದರ ಮೂವರು ಶಾಸಕರು ಸೋಮವಾರ ರಾಜೀನಾಮೆ ನೀಡಿದ್ದು, ಮುಖ್ಯಮಂತ್ರಿ ವಿಜಯ್ ನೇತೃತ್ವದ ಟಿವಿಕೆಗೆ ಸೇರ್ಪಡೆಯಾಗಿದ್ದಾರೆ.

ಶಾಸಕರಾದ ಮರಗತಮ್ ಕುಮಾರವೇಲ್, ಜಯಕುಮಾರ್ ಮತ್ತು ಸತ್ಯಭಾಮ ಅವರು ಸಲ್ಲಿಸಿದ ರಾಜೀನಾಮೆ ಪತ್ರಗಳನ್ನು ತಮಿಳುನಾಡು ವಿಧಾನಸಭಾ ಸ್ಪೀಕರ್ ಜೆಸಿಡಿ ಪ್ರಭಾಕರ್ ಅಂಗೀಕರಿಸಿದ್ದಾರೆ.

ಎಐಎಡಿಎಂಕೆ ಹಿರಿಯ ನಾಯಕ ಸಿವಿ ಷಣ್ಮುಗಂ ನೇತೃತ್ವದ 30 ಎಐಎ ಡಿಎಂಕೆ ಶಾಸಕರು ವಿಜಯ್ ಅವರ ಟಿವಿಕೆ ಸರ್ಕಾರಕ್ಕೆ ಬೆಂಬಲ ನೀಡಿದ ಎರಡು ವಾರಗಳ ನಂತರ ಈ ಬೆಳವಣಿಗೆ ನಡೆದಿದೆ. ಎಡಪ್ಪಾಡಿ ಪಳನಿಸ್ವಾಮಿ ನೇತೃತ್ವದ ಪಕ್ಷಕ್ಕೆ ರಾಜೀನಾಮೆ ನೀಡಿರುವ ಈ ಮೂವರು ಶಾಸಕರು ಬಂಡಾಯ ಬಣದ ಭಾಗವಾಗಿದ್ದರು.

ಕುಮಾರವೇಲ್ ಮಧುರಾಂತಕಂ ಕ್ಷೇತ್ರದಿಂದ, ಸತ್ಯಭಾಮ ಧಾರಾಪುರಂನಿಂದ ಮತ್ತು ಜಯಕುಮಾರ್ ಪೆರುಂದುರೈ ಕ್ಷೇತ್ರದಿಂದ ಎಐಎಡಿಎಂಕೆ ಟಿಕೆಟ್‌ಗಳ ಮೇಲೆ ಗೆದ್ದಿದ್ದರು. ಧಾರಾಪುರಂ ಮತ್ತು ಪೆರುಂದುರೈ ಪಶ್ಚಿಮ ತಮಿಳುನಾಡಿನ ಕೊಂಗು ಪ್ರದೇಶದಲ್ಲಿ ಎಐಎಡಿಎಂಕೆಯ ಸಾಂಪ್ರದಾಯಿಕ ಭದ್ರಕೋಟೆಯ ಭಾಗವಾಗಿದ್ದರೆ, ಮಧುರಾಂತಕಂ ಚೆನ್ನೈ ಬಳಿ ಇದೆ. ರಾಜೀನಾಮೆ ಸಲ್ಲಿಸಿದ ಕೂಡಲೇ, ಶಾಸಕರು ಟಿವಿಕೆ ಸಚಿವ ಆಧವ್ ಅರ್ಜುನ ಅವರನ್ನು ಅವರ ಕೊಠಡಿಯಲ್ಲಿ ಭೇಟಿಯಾದರು.

ಈ ಮೂವರು ಶಾಸಕರು ಮೇ 13 ರಂದು ನಡೆದ ವಿಶ್ವಾಸಮತ ಸಾಬೀತು ಸಮಯದಲ್ಲಿ ಪಕ್ಷದ ವಿಪ್ ಅನ್ನು ಧಿಕ್ಕರಿಸಿ ಟಿವಿಕೆ ಸರ್ಕಾರವನ್ನು ಬೆಂಬಲಿಸಿ ಮತ ಚಲಾಯಿಸಿದ 25 ಶಾಸಕರಲ್ಲಿ ಸೇರಿದ್ದಾರೆ.

ಎಐಎಡಿಎಂಕೆ ಬಂಡಾಯ ಬಣದ ಐದು ಮಂದಿ ಪಕ್ಷದ ಮುಖ್ಯಸ್ಥ ಎಡಪ್ಪಾಡಿ ಪಳನಿಸ್ವಾಮಿ ಅವರ ಬಳಿಗೆ ತಮ್ಮ ನಿಷ್ಠೆಯನ್ನು ಬದಲಾಯಿಸಿದ್ದರು. ಇದರೊಂದಿಗೆ, ವಿಧಾನಸಭೆಯಲ್ಲಿ ಪಳನಿಸ್ವಾಮಿ ಅವರನ್ನು ಬೆಂಬಲಿಸುವ ಶಾಸಕರ ಸಂಖ್ಯೆ 27 ಕ್ಕೆ ಏರಿದೆ. ಪಳನಿಸ್ವಾಮಿ ಬಣಕ್ಕೆ ಮರಳಿರುವವರಲ್ಲಿ ಆರ್ಕೋಟ್‌ನ ಎಸ್‌ಎಂ ಸುಕುಮಾರ್ ಸೇರಿದ್ದಾರೆ.

ಎನ್‌ಟಿಎ ಪಾಠ ಕಲಿತಿಲ್ಲ: ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಬಗ್ಗೆ ಸುಪ್ರೀಂಕೋರ್ಟ್ ಬೇಸರ

ನವದೆಹಲಿ: ಹಿಂದೆಯೂ ವರದಿಯಾಗಿದ್ದ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳಿಂದ ಪಾಠ ಕಲಿಯಲು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ವಿಫಲವಾಗಿದೆ ಎಂದು ಸುಪ್ರೀಂ ಕೋರ್ಟ್ ಸೋಮವಾರ ಅಸಮಾಧಾನ ವ್ಯಕ್ತಪಡಿಸಿದೆ.



ಎನ್‌ಟಿಎ ಬದಲು ಸಮರ್ಥ ಮತ್ತು ಸ್ವಾಯತ್ತ ಏಜೆನ್ಸಿಗೆ ನೀಟ್–ಯುಜಿ ಪರೀಕ್ಷೆ ಆಯೋಜನೆಯ ಹೊಣೆ ವಹಿಸಬೇಕು ಎಂದು ಕೋರಲಾದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಈ ಸಂಬಂಧ ಪ್ರತಿಕ್ರಿಯೆ ನೀಡುವಂತೆ ಕೇಂದ್ರ ಸರ್ಕಾರ, ಎನ್‌ಟಿಎ ಮತ್ತು ಸಿಬಿಐಗೆ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅಲೋಕ್ ಆರಾಧೆ ಅವರಿದ್ದ ಪೀಠವು ಮೇಲ್ಮನವಿ ಅರ್ಜಿಗಳ ಪ್ರತಿಗಳನ್ನು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಇತರ ಪ್ರತಿವಾದಿಗಳಿಗೂ ನೀಡುವಂತೆ ನಿರ್ದೇಶನ ನೀಡಿದೆ.

2024ರಲ್ಲಿ ಹೊರಡಿಸಲಾಗಿರುವ ನಿರ್ದೇಶನಗಳಿಗೆ ಸಂಬಂಧಿಸಿದಂತೆ ಗುರುವಾರದೊಳಗೆ ಅಫಿಡವಿಟ್ ಸಲ್ಲಿಸುವಂತೆ ಎನ್‌ಟಿಎಗೆ ಸೂಚಿಸಿದೆ.

ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಸೇರಿದ ಭೂಮಿಗೆ ಚಿಕ್ಕೇಗೌಡ ಅತಿಕ್ರಮ ಪ್ರವೇಶ; ಬೇಲಿ ಹಾಕಲೆತ್ನ

ಘಟನೆ ವೇಳೆ ಸ್ಥಳದಲ್ಲಿ ನಾನಿರಲಿಲ್ಲ; ವಿಷಯವೂ ಗೊತ್ತಿಲ್ಲ: ರಾಜೀವ್ ಸ್ಪಷ್ಟನೆ

ಮೈಸೂರು, ಮೇ 25– ಜಮೀನಿನ ವಿಚಾರಕ್ಕೆ ಸಂಬಂಧಿಸಿದಂತೆ ಹಲ್ಲೆ ನಡೆಸಿರುವ ಆರೋಪದಡಿ ತಮ್ಮ ವಿರುದ್ಧ ಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿರುವ ಬಗ್ಗೆ ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷರೂ ಆದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸ್ಪಷ್ಟನೆ ನೀಡಿದ್ದು, ತಮ್ಮ ವಿರುದ್ಧದ ಆರೋಪವನ್ನು ತಳ್ಳಿಹಾಕಿದ್ದಾರೆ.


ಹೆಚ್.ವಿ.ರಾಜೀವ್

ಎಂ.ಎನ್.ಅಸೋಸಿಯೇಟ್ಸ್ ಪಾಲುದಾರರಾದ ಬಿ.ಎನ್.ನಾರಾಯಣ ಅವರು ಮೈಸೂರು ತಾಲೂಕು, ಜಯಪುರ ಹೋಬಳಿ, ಬಲ್ಲಹಳ್ಳಿ ಗ್ರಾಮದ ಸರ್ವೇ ನಂ.103/2, ಹೊಸ ಸರ್ವೇ ನಂ.103/5ರ 1 ಎಕರೆ 1 ಗುಂಟೆ ಜಮೀನನ್ನು ಕೆ.ಸಾಲುಂಡಿ ಗ್ರಾಮದ ಲೇಟ್ ಮಾಲೇಗೌಡ ಉರುಫ್ ಗುಡ್ಡಯ್ಯ ಅವರ ಧರ್ಮಪತ್ನಿ ಶ್ರೀಮತಿ ಕರಗಮ್ಮ ಹಾಗೂ ಕುಟುಂಬದವರಿಂದ ದಿನಾಂಕ 18–08–2006ರಂದು(ನೋಂದಣಿ ಪತ್ರ ಸಂಖ್ಯೆ(ಎಂವೈಎನ್–1–14941/2006–07) ಖರೀದಿಸಿರುತ್ತಾರೆ. ಆ ಬಗ್ಗೆ ಕೆ.ಸಾಲುಂಡಿಯ ಚಿಕ್ಕೇಗೌಡರಿಗೆ ಮಾಹಿತಿ ಇದ್ದು, ಸದರಿ ಕರಗಮ್ಮ ಅವರ ಕ್ರಯದ ಕರಾರು ಪತ್ರಕ್ಕೆ ಸಹಿ ಮಾಡಿ, ಎಂ.ಎನ್.ಅಸೋಸಿಯೇಟ್ಸ್‌ನಿಂದ 2 ಲಕ್ಷ ರೂ. ಚೆಕ್(ನಂ.361826) ಅನ್ನು ಪಡೆದುಕೊಂಡಿದ್ದಾರೆ.

ಹೀಗೆ ಖರೀದಿಸಿದ ಸದರಿ ಜಮೀನನ್ನು ಮೈಸೂರು ಜಿಲ್ಲಾಧಿಕಾರಿಗಳಿಂದ ವಸತಿ ಉದ್ದೇಶಕ್ಕೆ 06–03–2012(ಕ್ರಮಾಂಕ ಎಎಲ್‌ಎನ್(3)ಸಿಆರ್209/2011–12)ರಲ್ಲಿ ಭೂಪರಿವರ್ತನೆ ಮಾಡಿಸಲಾಗಿದೆ. ನಂತರ ಆ ಜಮೀನನ್ನು ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘವು ತನ್ನ ಸದಸ್ಯರಿಗೆ ನಿವೇಶನ ಕಲ್ಪಿಸುವ ಸಲುವಾಗಿ 22–3–2012ರಲ್ಲಿ (ನೋಂದಣಿ ಪತ್ರ–ಎಂವೈಎನ್–1–29924/2011–12) ಖರೀದಿಸಿ, ನಂತರ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಬಡಾವಣೆ ನಕ್ಷೆಗೆ ಅನುಮೋದನೆ ಪಡೆಯಲಾಗಿದೆ.

ಸದರಿ ಜಮೀನು ಸಂಬಂಧ ಎಂ.ಎನ್.ಅಸೋಸಿಯೇಟ್ಸ್ ಪಾಲುದಾರರಾದ ಬಿ.ಎನ್.ನಾರಾಯಣರಿಗೆ ಕ್ರಯದ ಕರಾರು ಮಾಡುವ ಸಂದರ್ಭದಲ್ಲಿ ಚಿಕ್ಕೇಗೌಡ ಬಿನ್ ಸಣ್ಣಮರೀಗೌಡ ಎಂಬುವರು ಕರಗಮ್ಮ ಮತ್ತು ಮಕ್ಕಳೊಂದಿಗೆ ಸಂಘರ್ಷ ಮಾಡಿಕೊಂಡಿದ್ದರು. ಆ ವೇಳೆ ಕರಗಮ್ಮ ಕುಟುಂಬದವರು ಜಮೀನಿನ ಬಾಬ್ತು 2 ಲಕ್ಷದ ಎಂ.ಎನ್.ಅಸೋಸಿಯೇಟ್ಸ್ ಸಂಸ್ಥೆಯ ಚೆಕ್ ಅನ್ನು ಚಿಕ್ಕೇಗೌಡರಿಗೆ ನೀಡಿದ್ದರು. ನಂತರ ಚಿಕ್ಕೇಗೌಡರು ನಗದೀಕರಿಸಿಕೊಂಡಿದ್ದಾರೆ ಹಾಗಾಗಿ, ಈ ಸರ್ವೆ ನಂಬರ್ ಜಮೀನಿಗೂ ಅವರಿಗೂ ಯಾವುದೇ ಸಂಬಂಧವಿಲ್ಲ. ಆದರೂ ದುರುದ್ದೇಶದಿಂದ ಅನಗತ್ಯ ತೊಂದರೆ ನೀಡುತ್ತಿದ್ದಾರೆ.

ಅದೇ ರೀತಿ ಮೈಸೂರು ತಾಲೂಕು ಜಯಪುರ ಹೋಬಳಿ ಬಲ್ಲಹಳ್ಳಿ ಗ್ರಾಮದ ಸರ್ವೆ ನಂಬರ್ 104/1ರ 2 ಎಕರೆ 1 ಗುಂಟೆ ಜಮೀನನ್ನು ಇದೇ ಚಿಕ್ಕೇಗೌಡರಿಂದ 14–11–2007ರಂದು ಎಂ.ಎನ್.ಅಸೋಸಿಯೇಟ್ಸ್ ಪಾಲುದಾರರ ಪರವಾಗಿ ಸುಮಿತ್ರಮೂರ್ತಿಯವರಿಗೆ ನೋಂದಣಿಯಾಗಿತ್ತು. ನಂತರ ಸದರಿ ಸರ್ವೆ ನಂಬರ್ ಜಮೀನನ್ನು ಸುಮಿತ್ರಮೂರ್ತಿ ಅವರಿಂದ 22–3–2012ರಂದು ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ನೋಂದಣಿಯಾಗಿದೆ.

ನಂತರ ಸದರಿ ಸಂಘವು ಸದರಿ ಜಮೀನನ್ನು ಅಭಿವೃದ್ಧಿ ಮಾಡುವ ಸಂದರ್ಭದಲ್ಲಿ ಚಿಕ್ಕೇಗೌಡರು ಅಡಚಣೆ ಮಾಡಿದ್ದು, ಆನಂತರ ಅವರ ಕುಟುಂಬದ ಇತರ ಸದಸ್ಯರ ಮೂಲಕ ನ್ಯಾಯಾಲಯದಲ್ಲಿ(ಅಸಲು ದಾವಾ ಸಂಖ್ಯೆ ಓಎಸ್ ನಂ.443/2020) ದಾವೆ ಹೂಡಿದ್ದರು. ಆ ಪ್ರಕರಣ ರಾಜಿ ಮೂಲಕ ಇತ್ಯರ್ಥವಾಗಿದ್ದು, ಇದಕ್ಕೆ ಪ್ರತಿಫಲವಾಗಿ ಎಂ.ಎನ್.ಅಸೋಸಿಯೇಟ್ಸ್ ಅವರಿಂದ 2 ಲಕ್ಷ ರೂ. ಚೆಕ್(ನಂ.001212) ಅನ್ನು ಚಿಕ್ಕೇಗೌಡರು ಪಡೆದು ನಗದೀಕರಿಸಿಕೊಂಡಿದ್ದಾರೆ. ಅದೇ ವೇಳೆ ಚಿಕ್ಕೇಗೌಡರ ಕುಟುಂಬದ ಸದಸ್ಯರು ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ 21–2–2024ರಂದು ಸಮ್ಮತಿ ಪತ್ರ ನೋಂದಣಿ ಮಾಡಿಕೊಟ್ಟಿದ್ದಾರೆ.

ಒಟ್ಟಾರೆ ಎಂ.ಎನ್.ಅಸೋಸಿಯೇಟ್ಸ್ ಮೂಲಕ ಸದರಿ ಎರಡೂ ಜಮೀನುಗಳು ನಿಯಮಬದ್ಧವಾಗಿ ಜ್ಞಾನಗಂಗಾ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಕ್ರಯವಾಗಿದೆ. ಆದಾಗ್ಯೂ ಸಂಘದ ಕೆಲಸಗಳಿಗೆ ಅನಗತ್ಯವಾಗಿ ತೊಂದರೆ ನೀಡಲಾಗುತ್ತಿದೆ. ಸಂಘದ ಜಮೀನಿನಲ್ಲಿ ಅತಿಕ್ರಮವಾಗಿ ತಂತಿ ಬೇಲಿ ಹಾಕಲು ಹುನ್ನಾರ ನಡೆಸಿದ್ದಲ್ಲದೆ, ವಿನಾಕಾರಣ ನನ್ನ ವಿರುದ್ಧವೂ ಆರೋಪ ಮಾಡಲಾಗಿದೆ ಎಂದು ಹೆಚ್.ವಿ.ರಾಜೀವ್ ಸ್ಪಷ್ಟಪಡಿಸಿದ್ದಾರೆ.

ಜೀರ್ಣೋದ್ಧಾರಗೊಂಡ ಕೆ.ಆರ್.ಆಸ್ಪತ್ರೆ ಮುಂಭಾಗದ ಬಸ್ ನಿಲ್ದಾಣ ಉದ್ಘಾಟಿಸಿದ ಸಂಸದ ಯದುವೀರ್


ಶತಮಾನದ ಬಸ್ ನಿಲ್ದಾಣವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೋಮವಾರ ಉದ್ಘಾಟಿಸಿದರು.

ಮೈಸೂರು, ಮೇ 25 (ಜಿಎ)– ಮೈಸೂರಿನ ಕೆ.ಆರ್.ಆಸ್ಪತ್ರೆ ಮುಂಭಾಗ ಶತಮಾನದ ಪ್ರಯಾಣಿಕರ ತಂಗುದಾಣವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸೋಮವಾರ ಉದ್ಘಾಟಿಸಿದರು.

ಅಳಿವಿನಂಚಿನಲ್ಲಿದ್ದ ಶತಮಾನದ ಬಸ್ ನಿಲ್ದಾಣವನ್ನು ಮೈಸೂರಿನ ರಘುಲಾಲ್ ಮೆಡಿಕಲ್ ಸಂಸ್ಥೆ ಜೀರ್ಣೋದ್ಧಾರ ಮಾಡಿದ್ದು, ಸಾರ್ವಜನಿಕರಿಂದ ಮೆಚ್ಚುಗೆ ಗಳಿಸಿಕೊಂಡಿತ್ತು. ಸಾಮಾಜಿಕ ಜಾಲತಾಣದಲ್ಲಿ 'ಮೈಸೂರಿನ ಕಥೆಗಳು' ಪೇಜ್ ಧರ್ಮೇಂದ್ರ ದುಸ್ಥಿತಿಯಲ್ಲಿದ್ದ ಬಸ್ ನಿಲ್ದಾಣದ ಬಗ್ಗೆ ತಮ್ಮ ಪೇಜ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದರು. ಈ ವಿಡಿಯೋ ಅನ್ನು ಗಮನಿಸಿದ ರಘುಲಾಲ್ ಮೆಡಿಕಲ್ ಸಂಸ್ಥೆಯ ಮಾಲೀಕರಾದ ರಾಘವನ್ ಪ್ರೇರಣೆಗೊಂಡು ತಕ್ಷಣ ಜೀರ್ಣೋದ್ಧಾರ ಕಾರ್ಯ ಪೂರ್ಣಗೊಳಿಸಿದ್ದರು.

ಮಹಾರಾಜರು ಬಸ್ ನಿಲ್ದಾಣವನ್ನು ಸ್ಥಾಪಿಸಿದ್ದರು. ಅವರ ವಂಶಸ್ಥರು ಮರು ಉದ್ಘಾಟನೆ ಮಾಡಲು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಆಹ್ವಾನಿಸಲಾಗಿತ್ತು. ಅದರಂತೆ ಯದುವೀರ್ ಅವರು ಆಮಂತ್ರಣವನ್ನು ಒಪ್ಪಿ ಸಂತಸದಿಂದ ಸೋಮವಾರ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ರಘುಲಾಲ್ ಕಂಪನಿಯ ಮಾಲೀಕರಾದ ರಾಘವನ್, 'ಮೈಸೂರಿನ ಕಥೆಗಳು' ಧರ್ಮೇಂದ್ರ ಸ್ನೇಕ್ ಶ್ಯಾಂ ಮತ್ತಿತರರು ಉಪಸ್ಥಿತರಿದ್ದರು.

ಸಮಾಜಕ್ಕೆ ಬಸವಾದಿ ಶಿವಶರಣರ ವಿಚಾರಧಾರೆ ಕೊಡುಗೆ ಅಪಾರ

ಕನಕಪುರ ದೇಗುಲ ಮಠದ ಪೀಠಾಧ್ಯಕ್ಷ ಚೆನ್ನಬಸವ ಸ್ವಾಮೀಜಿ

ಹೆಚ್.ಡಿ.ಕೋಟೆ, ಮೇ 25– ಸಮುದಾಯದಲ್ಲಿ ಶಿಕ್ಷಣ ಕ್ರಾಂತಿ ಆಗಿದೆ. ಯುವಕರಲ್ಲಿ ಸಂಸ್ಕಾರ ಕ್ರಾಂತಿ ಆಗಬೇಕು ಎಂದು ಕನಕಪುರ ದೇಗುಲ ಮಠದ ಪೀಠಾಧ್ಯಕ್ಷ ಚೆನ್ನಬಸವ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಶ್ರೀಶಿವರಾತ್ರೀಶ್ವರ ಮಂಗಳ ಮಂಟಪದಲ್ಲಿ ಸೋಮವಾರ ನಡೆದ ವಿಶ್ವಗುರು ಜಗಜ್ಯೋತಿ ಬಸವೇಶ್ವರ 893ನೇ ಜಯಂತಿಯಲ್ಲಿ ಆಶೀರ್ವಚನ ನೀಡಿ ಮಾತನಾಡಿದ ಅವರು, ಪ್ರಸ್ತುತ ಯುವಕರು ಕಾಯಕ ಪ್ರಜ್ಞೆ ಮೈಗೂಡಿಸಿಕೊಂಡು ಉತ್ತಮ ನಡೆ ನುಡಿಗಳಂತೆ ಬದುಕಬೇಕು ಎಂದರು.

ಸಮಾಜಕ್ಕೆ ಬಸವಾದಿ ಶಿವಶರಣರ ವಿಚಾರಧಾರೆಗಳು ದೊಡ್ಡ ಕೊಡುಗೆ ನೀಡಿವೆ. ಬಸವಣ್ಣನವರ ಇವನಾರವ ಇವನಾರವ ಎನ್ನುವ ಮಾತು ಇಡೀ ಜಗತ್ತು ಒಪ್ಪಿಕೊಂಡಿದೆ. ಬಸವಣ್ಣನವರ ವಚನ, ವಿಚಾರಧಾರೆ, ಬದುಕು ಮತ್ತು ಸಂಘಟನೆಯು ಜಾಗೃತಿ ಜಗತ್ತಿಗೆ ಮಾದರಿಯಾಗಿದೆ. ನಮ್ಮ ಸಮಾಜವು ಇತರೆ ಸಮಾಜದೊಂದಿಗೆ ಪ್ರೀತಿ, ವಿಶ್ವಾಸದಿಂದ ಎಲ್ಲರನ್ನೂ ಗೌರವಿಸುವ ಕೆಲಸ ಮಾಡುತ್ತಿದೆ ಎಂದು ತಿಳಿಸಿದರು.

ಪ್ರಾದೇಶಿಕ ಹೆಚ್ಚುವರಿ ಆಯುಕ್ತ ಡಾ. ಶಿವರಾಜು ಮಾತನಾಡಿ, ನಗರದ ಮಕ್ಕಳಿಗಿಂತ ಕಡಿಮೆ ಇಲ್ಲ ಎನ್ನುವ ರೀತಿ ಗ್ರಾಮೀಣ ಮಕ್ಕಳು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿ ಸಾಧನೆ ಮಾಡಿದ್ದಾರೆ. ತಾಲೂಕಿನ ಜನರು ಹಲವು ಸವಾಲುಗಳನ್ನು ಎದುರಿಸುತ್ತಿದ್ದರೂ ಪ್ರಕೃತಿ ಜೊತೆಗೆ ಬದುಕುತ್ತಿರುವುದು ಸಂತೋಷದ ಸಂಗತಿ ಎಂದರು.

ಎಲ್ಲಿ ಸಂಘಟನೆ ಇರುತ್ತದೆಯೋ ಅಲ್ಲಿ ಸೋಲು ಇರುವುದಿಲ್ಲ. ನಮಗೆ ಗುರುಗಳಿದ್ದಾರೆ ಆದರೆ ಗುರಿ ಕಾಣುವಲ್ಲಿ ವಿಫಲರಾಗಿದ್ದೇವೆ. ಉನ್ನತ ಹುದ್ದೆ ಪಡೆಯುವ ದಿಕ್ಕಿನಲ್ಲಿ ಮಕ್ಕಳು ಗುರಿ ಇಟ್ಟುಕೊಂಡು ಸಾಧನೆ ಮಾಡಬೇಕು ಎಂದರು.

ಬಡತನ ಮತ್ತು ಇತರೆ ಸವಾಲುಗಳ ಕೀಳರಿಮೆ ಬಿಟ್ಟು ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದು ಪೋಷಕರಿಗೆ ಹಾಗೂ ತಾಲೂಕಿಗೆ ಕೀರ್ತಿ ತರುವ ದಿಕ್ಕಿನಲ್ಲಿ ಮುಂದಾಗಬೇಕು. ಬಡತನ ಕಾರಣಕ್ಕಾಗಿ ಶಿಕ್ಷಣ ಮೊಟಕುಗೊಳಿಸಬಾರದು ಎಂದರು.

ಸಾಹಿತಿ ಕಿರಣ್ ಶಿಡ್ಲೇಹಳ್ಳಿ ಮಾತನಾಡಿ, ಸಮಾಜದ ನೋವು ಅರ್ಥ ಆಗದೆ ಇದ್ದರೇ ಬಸವಣ್ಣನವರು ಅರ್ಥ ಆಗುವುದಿಲ್ಲ. ಕೇವಲ ಬಸವಣ್ಣನವರ ಜಯಂತಿ ಆಚರಣೆ ಮಾಡಿದರೆ ಸಾಲದು ಅನುಸರಣೆ ಮಾಡಿದರೆ ಮಾತ್ರ ಆಚರಣೆಗೆ ಅರ್ಥ ಬರುತ್ತದೆ. ಹೀಗಾಗಿ ವಿದ್ಯಾವಂತ ಯುವ ಪೀಳಿಗೆ ಬಸವಣ್ಣನವರ ವಿಚಾರಧಾರೆಯನ್ನು ಅರ್ಥ ಮಾಡಿಸಬೇಕು ಎಂದರು.

ಮಾನವನನ್ನು ಮಾನವನನ್ನಾಗಿ ನೋಡದ ಇದ್ದ ಕಾಲದಲ್ಲಿ ಆಶಾಕಿರಣವಾಗಿ ಬಂದವರು ಬಸವಣ್ಣ. 12ನೇ ಶತಮಾನದಲ್ಲಿ ವ್ಯಕ್ತಿ ಆಧಾರದ ಮೇಲೆ ಜಾತಿ ವ್ಯವಸ್ಥೆ ಇತ್ತೇ ಹೊರತು ಇಂದಿನ ಜಾತಿ ವ್ಯವಸ್ಥೆ ಇರಲಿಲ್ಲ. ಸಂಪ್ರದಾಯದ ಹೆಸರಿನಲ್ಲಿ ಮೌಢ್ಯ ಆಚರಣೆ ಇತ್ತು ಅದನ್ನು ಹೋಗಲಾಡಿಸುವ ಕೆಲಸ ಮಾಡಿದವರು ಬಸವಣ್ಣ ಎಂದು ತಿಳಿಸಿದರು.

ಕಾರ್ಯಕ್ರಮಕ್ಕೂ ಮುನ್ನ ಪಟ್ಟಣದ ಜೂನಿಯರ್ ಕಾಲೇಜು ಮೈದಾನದಲ್ಲಿ ಬೆಳ್ಳಿ ರಥದಲ್ಲಿ ಇರಿಸಿದ್ದ ಜಗಜ್ಯೋತಿ ಬಸವೇಶ್ವರ ಪುತ್ಥಳಿ ಮೆರವಣಿಗೆಗೆ ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕರಾದ ಅನಿಲ್ ಚಿಕ್ಕಮಾದು, ಶಾಸಕ ಗಣೇಶ್ ಪ್ರಸಾದ್ ಚಾಲನೆ ನೀಡಿದರು. ಈ ವೇಳೆ ಮಹಿಳೆಯರು ಪೂರ್ಣ ಕುಂಭ ಕಳಸ ಹೊತ್ತು, ಅಲಂಕರಿಸಿದ ಜೋಡಿ ಎತ್ತುಗಳೊಂದಿಗೆ ಮಂಗಳ ವಾದ್ಯ, ವೀರಗಾಸೆ, ಡೊಳ್ಳು ಕುಣಿತ, ನಂದಿ ಧ್ವಜ, ನಗಾರಿ, ತಮಟೆ, ನಾಡಿ ಗೊಂಬೆ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಪಟ್ಟಣದ ಮುಖ್ಯ ರಸ್ತೆಯಲ್ಲಿ ಸಾಗಿದ ಮೆರವಣಿಗೆ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಸಮಾವೇಶಗೊಂಡಿತು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಈ ವೇಳೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ರುದ್ರಪ್ಪ, ಹಂಚೀಪುರ ಮಠದ ಚನ್ನಬಸವ ಸ್ವಾಮೀಜಿ, ತೋಟದ ದಾರ್ಯ, ದಡದಳ್ಳಿ ಮಠದ ಷಡಕ್ಷರ ಸ್ವಾಮೀಜಿ, ಪಡುವಲು ವಿರಕ್ತ ಮಠದ ಮಹದೇವ ಸ್ವಾಮೀಜಿ, ಮಾದಾಪುರ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಪುರದ ಮಠ ನಾಗೇಂದ್ರ ಸ್ವಾಮೀಜಿ, ಬಸವ ಬಳಗದ ಮಾಜಿ ಅಧ್ಯಕ್ಷ ಪ್ರದೀಪ್ ಕುಮಾರ್, ಜೆಡಿಎಸ್ ಮುಖಂಡರಾದ ಕೆ.ಎಂ.ಕೃಷ್ಣ ನಾಯಕ, ಜಯಪ್ರಕಾಶ್ ಚಿಕ್ಕಣ್ಣ, ಮಹಾಸಭಾ ಪ್ರಧಾನ ಕಾರ್ಯದರ್ಶಿ ಪ್ರವೀಣ್ ಕುಮಾರ್, ಅಖಿಲಭಾರತ ವೀರಶೈವ ಮಹಾಸಭಾ ರಾಜ್ಯ ನಿರ್ದೇಶಕ ಮೊತ್ತ ಬಸವರಾಜಪ್ಪ, ಜಿಲ್ಲಾ ಉಪಾಧ್ಯಕ್ಷ ಬಿ.ವಿ.ಬಸವರಾಜು, ಉಪಾಧ್ಯಕ್ಷರಾದ ಎ.ಪಿ.ಶಿವರಾಜು, ಶ್ವೇತಾ, ರವೀಶ್, ಶಿವಸ್ವಾಮಿ, ಸಹ ಕಾರ್ಯದರ್ಶಿ ಜೆ.ಎಂ. ಮಹದೇವಪ್ಪ, ಖಜಾಂಚಿ ಗಿರೀಶ್, ಬಸವೇಶ್ವರ ಅಲ್ಪವೃದ್ಧಿ ಸಹಕಾರ ಸಂಘದ ಅಧ್ಯಕ್ಷ ಪಿ.ನಾಗರಾಜಪ್ಪ ಸುರೇಶ್, ವಕೀಲ ಮೋಹನ್ ಕುಮಾರ್, ಜೆ.ಪಿ.ಶಿವರಾಜಪ್ಪ, ಸ್ವಾಮಿ, ದೇವಮಣಿ, ಮುಖಂಡರಾದ ಗುರುಸ್ವಾಮಿ, ಕಾಶಿಪತಿ, ಮಾದರಾಜು, ಕೆಂಡಗಣ್ಣ ಸ್ವಾಮಿ, ಸತೀಶ್ ಬಹದ್ದೂರ್, ಗಣಪತಿ, ಮಹೇಶ, ನಾಗಣ್ಣ, ವೀರಪ್ಪ, ವಿವೇಕ್, ಬಸವಣ್ಣ, ಬಸವರಾಜಪ್ಪ, ದಾಕ್ಷಾಯಿಣಿ ಇದ್ದರು.



ಜಗಜ್ಯೋತಿ ಬಸವೇಶ್ವರ ಪುತ್ಥಳಿ ಮೆರವಣಿಗೆಗೆ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕರಾದ ಅನಿಲ್ ಚಿಕ್ಕಮಾದು, ಗಣೇಶ್ ಪ್ರಸಾದ್ ಚಾಲನೆ ನೀಡಿದರು.

> "ಬಸವಣ್ಣನವರು ಅಂತರ್ಜಾತಿ ವಿವಾಹ ಮಾಡುವ ಮೂಲಕ ಕಲ್ಯಾಣ ಕ್ರಾಂತಿ ಮಾಡಿದರು. ನಾವೆಲ್ಲರೂ ಸಮಾನರು ಎಂದು ಸಾರಿದ ಮೊದಲ ಮಾನವತಾವಾದಿ ಕ್ರಾಂತಿಕಾರಿ ಬಸವಣ್ಣ. ವಿಶ್ವ ಪುರುಷ ಎಂದು ಬಸವಣ್ಣನವರಿಗೆ ಮೊದಲು ನಾಮಕರಣ ಮಾಡಿದವರು ಡಾ.ಬಿ.ಆರ್.ಅಂಬೇಡ್ಕರ್. ಹಾಗಾಗಿ ಬಸವಣ್ಣನವರ ಚಿಂತನೆಗಳು ಸಾರ್ವಕಾಲಿಕ. ಅದನ್ನು ಅರ್ಥ ಮಾಡಿಕೊಂಡು ಸಾಗಿದರೆ ಸಮಾಜದಲ್ಲಿ ಸಮಾನತೆಯನ್ನು ಕಾಣಲು ಸಾಧ್ಯ. – ಕಿರಣ್ ಶಿಡ್ಲೇಹಳ್ಳಿ, ಸಾಹಿತಿ.

ಮಳೆಗಾಗಿ ಪ್ರಾರ್ಥಿಸಿ

ಶ್ರೀಒಡೆದ ಕಲ್ಲು ಬಸವೇಶ್ವರಸ್ವಾಮಿಗೆ ವಿಶೇಷ ಪೂಜೆ

ತಿ.ನರಸೀಪುರ, ಮೇ 25– ಪವಾಡ ಪುರುಷರಾದ ರಾಚಪ್ಪಾಜಿ ಹಾಗೂ ಸಿದ್ದಪ್ಪಾಜಿಯವರ ಪವಾಡದಿಂದ ಬೃಹತ್ ಬಂಡೆ ಕಲ್ಲು ಒಡೆದು 2 ಭಾಗವಾಗಿದೆ ಎನ್ನಲಾದ ತಾಲೂಕಿನ ದೊಡ್ಡಲಕ್ಷ್ಮಿಪುರ ಎಲ್ಲೆಗೆ ಸೇರಿದ ಚಿದರವಳ್ಳಿ–ಬೊಮ್ಮನಹಳ್ಳಿ ಗ್ರಾಮದ ಪವಿತ್ರ ಕ್ಷೇತ್ರ ಶ್ರೀಒಡೆದ ಕಲ್ಲು ಬಸವೇಶ್ವರಸ್ವಾಮಿಗೆ ಸೋಮವಾರ ವಿಶೇಷ ಪೂಜಾ ಕೈಂಕರ್ಯ ನಡೆಸಲಾಯಿತು.

ಚಿದರವಳ್ಳಿ–ಬೊಮ್ಮನಹಳ್ಳಿ ಗ್ರಾಮದಲ್ಲಿ ಬಂಡೆ ಕಲ್ಲು ಒಡೆದು 2 ಭಾಗವಾಗಿದ್ದು, ಇದು ಪುಣ್ಯ ಪುರುಷರ ಪವಾಡದಿಂದ ಆಗಿದೆ ಎಂಬ ನಂಬಿಕೆಯಿಂದ ಗ್ರಾಮಸ್ಥರು ಅನೇಕ ವರ್ಷಗಳಿಂದ ಪೂಜಾ ಕೈಂಕರ್ಯ ನೆರವೇರಿಸುತ್ತಾ ಬಂದಿದ್ದಾರೆ. ಸೋಮವಾರ ಮಳೆಯ ದೇವರು ಎಂದೇ ಕರೆಯಲ್ಪಡುವ ಈ ದೇವರಿಗೆ ಗ್ರಾಮಸ್ಥರು ಶ್ರದ್ಧಾ ಭಕ್ತಿಯಿಂದ ಪೂಜೆ ಸಲ್ಲಿಸಿ ಪ್ರಸಾದ ವಿತರಿಸಿದರು.



ಶ್ರೀಒಡೆದ ಕಲ್ಲು ಬಸವೇಶ್ವರಸ್ವಾಮಿಗೆ ಶ್ರೀಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ ಪೂಜೆ ಸಲ್ಲಿಸಿದರು.

ಹಲವಾರ ಮುಡುಕನಪುರ ಮಠದ ಷಡಕ್ಷರ ದೇಶೀಕೇಂದ್ರ ಸ್ವಾಮೀಜಿ ಒಡೆದ ಕಲ್ಲು ಬಸವೇಶ್ವರಸ್ವಾಮಿಗೆ ಗ್ರಾಮಸ್ಥರೊಡಗೂಡಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಒಡೆದ ಕಲ್ಲು ಬಸವೇಶ್ವರ ಸ್ವಾಮಿ ಕ್ಷೇತ್ರ ಪವಿತ್ರ ಕ್ಷೇತ್ರವಾಗಿದೆ. 12ನೇ ಶತಮಾನದಲ್ಲಿ ಕಲ್ಯಾಣ ಕ್ರಾಂತಿಯಾದಾಗ ಶರಣರು ಛಿದ್ರಗೊಂಡಿದ್ದ ಸಂದರ್ಭ ಈ ಕ್ಷೇತ್ರದಲ್ಲಿ ಒಂದು ಶರಣರ ತಂಡ ವಾಸ್ತವ್ಯ ಹೂಡಿತ್ತು. ರಾಚಪ್ಪಾಜಿ, ಸಿದ್ದಪ್ಪಾಜಿಯಂತಹ ಪವಾಡ ಪುರುಷರು ಇಲ್ಲಿಗೆ ಬಂದು ಬೇರೆಡೆಗೆ ಸಂಚಾರ ಮಾಡಿದ್ದರು. ಆಗ ಅಖಂಡವಾದ ಬಂಡೇಕಲ್ಲು ಒಡೆದು 2 ಭಾಗವಾಗಿತ್ತು ಎನ್ನಲಾಗಿದ್ದು, ಹೀಗಾಗಿ ಒಡೆದ ಕಲ್ಲು ಬಸವೇಶ್ವರ ಕ್ಷೇತ್ರ ಎಂದು ಪ್ರಖ್ಯಾತಿ ಪಡೆಯಿತು ಎಂದರು.

> "ಗ್ರಾಮದಲ್ಲಿ ಪ್ರತಿವರ್ಷ ಸಮಯಕ್ಕೆ ಸರಿಯಾಗಿ ಮಳೆಯಾಗದಿದ್ದಾಗ ಗ್ರಾಮಸ್ಥರೆಲ್ಲರೂ ಸೇರಿ ಪರ ಮಾಡಿ ಅನ್ನಸಂತರ್ಪಣೆ ಮಾಡುವ ಪದ್ಧತಿ ರೂಢಿಯಲ್ಲಿದೆ. ಅನ್ನ ಸಂತರ್ಪಣೆ ಮಾಡಿ ದೇವರ ಮೆರವಣಿಗೆ ಊರು ತಲುಪುವ ವೇಳೆಗೆ ಸರಿಯಾಗಿ ಮಳೆ ಬರುತ್ತದೆ ಇದು ಈಗಲೂ ನಡೆಯುತ್ತಿದೆ. ಹಾಗಾಗಿ ಈ ಸತ್ಯ ಕ್ಷೇತ್ರ ಪವಾಡ ಕ್ಷೇತ್ರವಾಗಿದೆ. ಮಳೆ ಬರದಿದ್ದಾಗ ಮಳೆ ಬರಿಸುವ ಶಕ್ತಿ ಇದೆ ಎಂದರೆ ಅದು ಒಡೆದ ಕಲ್ಲು ಬಸವೇಶ್ವರ ಕ್ಷೇತ್ರಕ್ಕೆ ಮಾತ್ರವೇ ಇದೆ. ಈಗ ರೈತರು ಸಂಕಲ್ಪ ಮಾಡಿ ಪೂಜೆ ಸಲ್ಲಿಸಿದ್ದು, ಭಗವಂತ ಎಲ್ಲಾ ಸಂಕಲ್ಪಗಳನ್ನು ಈಡೇರಿಸಲಿದ್ದಾನೆ. ಕ್ಷೇತ್ರವು ಸುತ್ತಮುತ್ತಲ ಗ್ರಾಮಕ್ಕೆ ಸಂಬಂಧಿಸಿದ್ದಾಗಿರುವುದರಿಂದ ಇನ್ನೂ ಹೆಚ್ಚಿನ ರೀತಿಯಲ್ಲಿ ಬೆಳೆದು ಅಭಿವೃದ್ಧಿ ಹೊಂದಲಿ. – ಶ್ರೀಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ.

ನಿರಂತರ ದಾಸೋಹ ನಡೆಯಲಿ: ಒಡೆದ ಕಲ್ಲು ಬಸವೇಶ್ವರ ದೇವಸ್ಥಾನ ವ್ಯಾಪ್ತಿಯ 14 ಗ್ರಾಮಗಳ ಎಲ್ಲರೂ ಸೇರಿ ದೇವಸ್ಥಾನದ ಟ್ರಸ್ಟ್ ಮಾಡಿ, ದೇವರ ಪೂಜೆಯನ್ನು ನಿರಂತರವಾಗಿ ಮಾಡುವಂತಾಗಬೇಕು. ನಾಡಿನ ಮಳೆಯ ದೇವರೆಂದೇ ಪ್ರಸಿದ್ಧವಾಗಿ, ರೈತರ ಜೀವನಾಡಿಯಾಗಿರುವ ಬಸಪ್ಪನಿಗೆ ಇಲ್ಲೊಂದು ನೆರಳು ಮಾಡಿ ದಾಸೋಹ ಪ್ರಕ್ರಿಯೆ ನಡೆಯುವಂತೆ ಅಭಿವೃದ್ಧಿ ಮಾಡಿ ತೋಪು ಮಾಡಬೇಕೆಂಬ ಸಂಕಲ್ಪವನ್ನು ಸಾರ್ವಜನಿಕರು, ಗ್ರಾಮಸ್ಥರು ಮಾಡಿರುವುದು ಉತ್ತಮ ಬೆಳವಣಿಗೆ. ಒಡೆದ ಕಲ್ಲು ಬಸಪ್ಪ ಎಲ್ಲರಿಗೂ ಮಂಗಳವನ್ನುಂಟು ಮಾಡಲಿ ಎಂದು ಆಶಿಸಿದರು.

ಚಿದರವಳ್ಳಿ, ಬೊಮ್ಮನಹಳ್ಳಿ, ದೊಡ್ಡಲಕ್ಷ್ಮಿಪುರ, ಕಳ್ಳೀಪುರ, ನಾಗಲಗೆರೆ, ಬೂದ ಹಳ್ಳಿ ಸೇರಿದಂತೆ ವಿವಿಧ ಗ್ರಾಮದ ಮುಖಂಡರು ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಾರ್ವಜನಿಕ ಆಸ್ಪತ್ರೆ ನಿರ್ಮಾಣಕ್ಕೆ ಚಾಲನೆ

ಸರಗೂರು, ಮೇ 25– ಪಟ್ಟಣದ ಸಮೀಪ 30 ಕೋಟಿ ರೂ. ವೆಚ್ಚದ ಸಾರ್ವಜನಿಕ ಆಸ್ಪತ್ರೆ ನಿರ್ಮಾಣ ಕಾಮಗಾರಿಗೆ ಸೋಮವಾರ ಚಾಲನೆ ನೀಡಲಾಯಿತು.



ಸ್ಥಳವನ್ನು ಅಧಿಕಾರಿಗಳು ಪರಿಶೀಲಿಸಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮಾತನಾಡಿ, ತಾಲೂಕಿನಲ್ಲಿ 30 ಕೋಟಿ ರೂ. ವೆಚ್ಚದಲ್ಲಿ 100 ಹಾಸಿಗೆ ಸಾಮರ್ಥ್ಯದ ಹೈಟೆಕ್ ಆಸ್ಪತ್ರೆ ನಿರ್ಮಾಣವಾಗಲಿದೆ. ಇದರಿಂದ ತಾಲೂಕಿನ 90 ಗ್ರಾಮಗಳಿಗೆ ಅನುಕೂಲವಾಗಲಿದೆ. ಈ ಆಸ್ಪತ್ರೆಯಲ್ಲಿ ಸುಸಜ್ಜಿತ ಹೆರಿಗೆ ಕೊಠಡಿ, ಒಳರೋಗಿಗಳ ದಾಖಲಾತಿ ಕೊಠಡಿ, ಪ್ರಯೋಗಾಲಯ, ಎಕ್ಸ್ ರೇ ಮೆಷಿನ್ ಕೊಠಡಿ ಸೇರಿದಂತೆ ಎಲ್ಲಾ ರೀತಿಯ ಸೌಕರ್ಯಗಳನ್ನು ಒದಗಿಸಲಾಗುವುದು. ಇದನ್ನು ತಾಲೂಕಿನ ಜನತೆ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ತಹಸೀಲ್ದಾರ್ ಶ್ರೀನಿವಾಸ್ ಮಾತನಾಡಿ, ಸರಗೂರು ತಾಲೂಕು ಸಾರ್ವಜನಿಕ ಆಸ್ಪತ್ರೆ ಕಾಮಗಾರಿ ಪ್ರಾರಂಭವಾಗಿದೆ. ಇದಕ್ಕೆ ಸಾರ್ವಜನಿಕರ ಸಹಕಾರ ಅಗತ್ಯ. ಇಲ್ಲಿನ ನಿವೇಶನವು ಸರ್ಕಾರಿ ಸ್ಥಳವಾಗಿದ್ದು, ಕಾನೂನು ರೀತಿ ಮೇಲಿನ ಅಧಿಕಾರಿಗಳ ನಿರ್ದೇಶನದಂತೆ ಆರೋಗ್ಯ ಇಲಾಖೆಗೆ ಜಮೀನು ಹಸ್ತಾಂತರಿಸಲಾಗಿದ್ದು, ಇದೀಗ ಆಸ್ಪತ್ರೆ ನಿರ್ಮಾಣ ಕಾಮಗಾರಿ ಆರಂಭವಾಗಿದೆ ಎಂದರು.

ಈ ವೇಳೆ ಕಂಟ್ರಾಕ್ಟರ್ ಗಿರೀಶ್, ಪಳನಿ ಸ್ವಾಮಿ, ಎಸ್‌ಐ ಕಿರಣ್, ಆರ್‌ಐ ರವಿಚಂದ್ರ, ಗ್ರಾಮ ಲೆಕ್ಕಾಧಿಕಾರಿ, ಪೊಲೀಸ್, ಆರೋಗ್ಯ ಇಲಾಖೆ ಸಿಬ್ಬಂದಿ ವರ್ಗ ಇನ್ನಿತರರು ಹಾಜರಿದ್ದರು.

ಕೈಗಾರಿಕೆಗೆ ಜಮೀನು ನೀಡಿರುವ

ರೈತ ಕುಟುಂಬದವರಿಗೆ ಉದ್ಯೋಗ ನೀಡದೆ ವಂಚನೆ: ಪ್ರತಿಭಟನೆ

ನಂಜನಗೂಡು, ಮೇ 25– ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸಲು ಜಮೀನು ನೀಡಿರುವ ರೈತ ಕುಟುಂಬದ ಸದಸ್ಯರಿಗೆ ಉದ್ಯೋಗ ನೀಡದೆ ವಂಚಿಸಲಾಗುತ್ತಿದೆ ಎಂದು ಆರೋಪಿಸಿ ಸಂತ್ರಸ್ಥ ಕುಟುಂಬಗಳ ರೈತರು ತಾಲೂಕಿನ ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿರುವ ಯುನೈಟೆಡ್ ಬ್ರಿವರೀಸ್(ಯುಬಿ) ಕಾರ್ಖಾನೆ ಮುಂಭಾಗ ಪ್ರತಿಭಟನೆ ನಡೆಸಿದರು.

ಸೋಮವಾರ ಬೆಳಗ್ಗೆ ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿರುವ ಮದ್ಯ ತಯಾರಿಕಾ ಕಾರ್ಖಾನೆ ಮುಂಭಾಗ ಪ್ರತಿಭಟನೆ ಆರಂಭಿಸಿದ ರೈತ ಕುಟುಂಬಗಳ ಸದಸ್ಯರು ಮಾತನಾಡಿ, ಈ ಪ್ರದೇಶದಲ್ಲಿ ಕಾರ್ಖಾನೆ ನಿರ್ಮಾಣಕ್ಕಾಗಿ 62 ಎಕರೆ ಭೂಮಿ ಪಡೆದುಕೊಂಡಿದ್ದಾರೆ. ಕೆಐಡಿಬಿ ಅಧಿಕಾರಿಗಳು ರೈತರಿಂದ ಜಮೀನು ವಶಕ್ಕೆ ಪಡೆಯುವ ಮುನ್ನ ಸಂತ್ರಸ್ಥ ಕುಟುಂಬಗಳ ಸದಸ್ಯರಿಗೆ ಖಾಯಂ ಉದ್ಯೋಗ ಕೊಡಿಸುವುದಾಗಿ ಒಪ್ಪಂದ ಮಾಡಿಕೊಂಡಿದ್ದರು. ಆದರೆ ಕಾರ್ಖಾನೆ ಆರಂಭಗೊಂಡು 14 ವರ್ಷಗಳಾಗಿದ್ದರೂ, ಭೂಮಿ ಕಳೆದುಕೊಂಡಿರುವ ರೈತ ಕುಟುಂಬಗಳ ಸದಸ್ಯರಿಗೆ ಈವರೆಗೂ ಉದ್ಯೋಗ ನೀಡಲು ಮುಂದಾಗಿಲ್ಲ. ಹೀಗಾಗಿ ರೈತರು ಹೋರಾಟಕ್ಕೆ ಮುಂದಾಗಿದ್ದಾರೆ. ತಕ್ಷಣ ಜಿಲ್ಲಾಧಿಕಾರಿಗಳು ಮಧ್ಯಪ್ರವೇಶಿಸಿ ಕೆಐಡಿಬಿ ಅಧಿಕಾರಿಗಳ ಸಮ್ಮುಖದಲ್ಲಿ ಕಾರ್ಖಾನೆ ಆಡಳಿತ ಮಂಡಳಿಯವರ ಸಭೆ ಕರೆದು ಭೂಮಿ ಕಳೆದುಕೊಂಡಿರುವ ರೈತರಿಗೆ ನ್ಯಾಯ ದೊರಕಿಸಿ ಕೊಡಬೇಕು. ಇಲ್ಲವಾದಲ್ಲಿ ಮುಂಬರುವ ದಿನಗಳಲ್ಲಿ ಹೋರಾಟ ತೀವ್ರಗೊಳಿಸುವುದಾಗಿ ಎಚ್ಚರಿಸಿದರು.



ಸಂತ್ರಸ್ಥ ಕುಟುಂಬಗಳ ರೈತರು ಯುನೈಟೆಡ್ ಬ್ರಿವರೀಸ್(ಯುಬಿ) ಕಾರ್ಖಾನೆ ಎದುರು ಪ್ರತಿಭಟನೆ ನಡೆಸಿದರು.

ಇದೇ ವೇಳೆ ಪ್ರತಿಭಟನಾಕಾರರು ಕೆಲ ಕಾಲ ಕೈಗಾರಿಕಾ ಪ್ರದೇಶದ ಮುಖ್ಯರಸ್ತೆಯಲ್ಲಿ ವಾಹನ ಸಂಚಾರಕ್ಕೆ ತಡೆಯೊಡ್ಡಿ ಪ್ರತಿಭಟನೆಗೆ ಮುಂದಾಗಿದ್ದರಿಂದ ವಾಹನ ಸಂಚಾರಕ್ಕೆ ತೊಡಕುಂಟಾಗಿತ್ತು. ಈ ವೇಳೆ ಸ್ಥಳಕ್ಕಾಗಮಿಸಿದ ಪೊಲೀಸರು ಪ್ರತಿಭಟನಾನಿರತರ ಮನವೊಲಿಸಿದ್ದರಿಂದ ಪ್ರತಿಭಟನಾಕಾರರು ಪ್ರತಿಭಟನೆ ಹಿಂಪಡೆದರು.

ಪ್ರತಿಭಟನೆಯಲ್ಲಿ ಶಶಿಕುಮಾರ್, ಟಿ.ಜೆ.ಮಹದೇವ್, ಕೆಲ್ಲೂಪುರ ರವಿ, ಶ್ರೀಕಂಠ ಸೇರಿದಂತೆ ಕೆಂಪಿಸಿದ್ಧನಹುಂಡಿ ಹಾಗೂ ತಾಂಡವಪುರ ಗ್ರಾಮಗಳ 30ಕ್ಕೂ ಹೆಚ್ಚು ಮಂದಿ ರೈತರು ಭಾಗವಹಿಸಿದ್ದರು.

ರೈತ ಸಂಘದಿಂದ ನಾಳೆ ಪ್ರತಿಭಟನೆ

ಹುಣಸೂರು, ಮೇ 25– ರಾಸಾಯನಿಕ ಗೊಬ್ಬರ ಹಾಗೂ ಡೀಸೆಲ್, ಪೆಟ್ರೋಲ್ ಬೆಲೆ ಏರಿಕೆ ಖಂಡಿಸಿ ನಗರದಲ್ಲಿ ಮೇ 27ರಂದು ಬೆಳಗ್ಗೆ 11 ಗಂಟೆಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರತಿಭಟನೆ ಬಳಿಕ ತಹಸೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಹೀಗಾಗಿ ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಘಟಕದ ಎಲ್ಲಾ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು, ಪ್ರಗತಿಪರ ಸಂಘಟನೆಗಳ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರತಿಭಟನೆ ಯಶಸ್ವಿಗೊಳಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ತಂಬಾಕಿಗೆ ಸೂಕ್ತ ಬೆಂಬಲ ಬೆಲೆಗೆ ಆಗ್ರಹಿಸಿ ಪ್ರತಿಭಟನೆ

ಹುಣಸೂರು, ಮೇ 25– ತಂಬಾಕಿಗೆ ಸೂಕ್ತ ಬೆಂಬಲ ಬೆಲೆ ನಿಗದಿಪಡಿಸುವಂತೆ ಒತ್ತಾಯಿಸಿ ನಗರದ ಉಪವಿಭಾಗಾಧಿಕಾರಿ ಕಚೇರಿ ಎದುರು ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ರಾಜ್ಯ ತಂಬಾಕು ಬೆಳೆಗಾರರ ಹಿತರಕ್ಷಣಾ ಹೋರಾಟ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಉಪವಿಭಾಗಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಧಿಕ್ಕಾರ ಕೂಗಿ, ತಂಬಾಕು ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಂತರ ಮಾತನಾಡಿದ ಕೆಪಿಆರ್‌ಎಸ್ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ ಅವರು, ಸಾಲ ಸೋಲ ಮಾಡಿ ತಂಬಾಕು ಹದಗೊಳಿಸಿರುವ ರೈತ ಉತ್ತಮ ಬೆಲೆಯ ನಿರೀಕ್ಷೆಯಲ್ಲಿದ್ದ. ಆದರೆ ಇಂದು ಸೂಕ್ತ ಬೆಂಬಲ ಬೆಲೆ ಸಿಗದೇ ಕಂಗಾಲಾಗಿದ್ದಾನೆ. ಹೀಗಾಗಿ ಪ್ರತಿ ಕೆಜಿ ತಂಬಾಕಿಗೆ 410 ರೂ.ಗಳ ಬೆಂಬಲ ಬೆಲೆ ನಿಗದಿಪಡಿಸಲು ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಬೇಕು. ಬೆಲೆ ಕುಸಿತ ಪರಿಣಾಮ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಈಗಾಗಲೇ ಸಭೆ ನಡೆದರೂ ಯಾವುದೇ ಪ್ರಯೋಜನ ಆಗಿಲ್ಲ. ಈ ಕೂಡಲೇ ಜಿಲ್ಲಾಧಿಕಾರಿಗಳು ಸಭೆ ನಿರ್ಣಯಗಳನ್ನು ಜಾರಿಗೊಳಿಸಲು ಮುಂದಾಗಬೇಕು ಎಂದು ಒತ್ತಾಯಿಸಿದರು.



ತಂಬಾಕಿಗೆ ಸೂಕ್ತ ಬೆಂಬಲ ಬೆಲೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸಲಾಯಿತು.

ಈ ಭಾಗದ ಜನಪ್ರತಿನಿಧಿಗಳು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು. ಮಾರುಕಟ್ಟೆ ಆರಂಭದಲ್ಲಿ ಗುಣಮಟ್ಟದ ತಂಬಾಕಿಗೆ 320 ರೂ. ಇತ್ತು. ನಂತರ ಕಂಪನಿಗಳು ಕೆಜಿಗೆ 240ರಿಂದ 260 ರೂ.ಗೆ ಬೆಲೆ ಇಳಿಸಿರುವುದರಿಂದ ಕೆಜಿಗೆ 80 ರಿಂದ 100 ರೂ. ನಷ್ಟ ಅನುಭವಿಸುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೆಪಿಆರ್‌ಎಸ್‌ನ ಜಿಲ್ಲಾ ಉಪಾಧ್ಯಕ್ಷ ಕೆ.ಬಸವರಾಜು ಮಾತನಾಡಿ, ಸೂಕ್ತ ಬೆಂಬಲ ಬೆಲೆ ಸಿಗದ ಕಾರಣ ರೈತ ಸಂಕಷ್ಟಕ್ಕೆ ಸಿಲುಕಿದ್ದಾನೆ. ಹೀಗಾಗಿ ಕೇಂದ್ರ ಸರ್ಕಾರ 410 ರೂ.ಗಳ ಬೆಂಬಲ ಬೆಲೆ ನಿಗದಿಪಡಿಸಬೇಕು. ಪ್ರಸ್ತುತ ತಂಬಾಕು ಬೆಳೆಯುವ ಖರ್ಚು ವೆಚ್ಚ ದುಪ್ಪಟ್ಟಾಗಿದೆ. ಆದರೆ ರೈತರಿಗೆ ಮಾತ್ರ ನ್ಯಾಯಯುತ ಬೆಲೆ ಸಿಗುತ್ತಲೇ ಇಲ್ಲ. ಅಲ್ಲದೇ ರೈತರಿಗೆ ಮತ್ತಷ್ಟು ಅನ್ಯಾಯ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಈ ವೇಳೆ ಕೆಪಿಆರ್‌ಎಸ್ ಜಿಲ್ಲಾಧ್ಯಕ್ಷ ಚಿಕ್ಕಣ್ಣಗೌಡ, ತಾಲೂಕು ಅಧ್ಯಕ್ಷ ಚಂದ್ರಶೇಖರ್, ಕಾರ್ಯದರ್ಶಿ ಹೆಚ್.ಡಿ.ಬೀರೇಶ್ವರ್, ಮುಖಂಡ ಬಸವರಾಜು, ಹೋರಾಟ ಸಮಿತಿಯ ಗೋವಿಂದಯ್ಯ, ನಟರಾಜು, ಪುಟ್ಟರಾಜು, ಗೋವಿಂದೇಗೌಡ, ಕರಿಯಪ್ಪ, ಮೈಲಾರಿ, ಕರಿಯಣ್ಣ, ಸಿಂಧ್ಯಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಚಲನಚಿತ್ರದ ಪೋಸ್ಟರ್ ಬಿಡುಗಡೆ



ಹುಣಸೂರಲ್ಲಿ ನಡೆದ ಬೃಹತ್ ಉದ್ಯೋಗ ಮೇಳದಲ್ಲಿ ಬಿಗ್‌ಬಾಸ್ ವಿನ್ನರ್ ಗಿಲ್ಲಿನಟ ಅಭಿನಯದ ಸರ್ವೇ ನಂ.45 ಚಲನಚಿತ್ರದ ಪೋಸ್ಟರ್ ಅನ್ನು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಬಿಡುಗಡೆಗೊಳಿಸಿದರು. ಈ ವೇಳೆ ನಿರ್ದೇಶಕ ಶಿವಕುಮಾರ್ ಎಂ.ಶೆಟ್ಟಳ್ಳಿ, ಹೂಡಾ ಅಧ್ಯಕ್ಷ ಹೆಚ್.ಪಿ.ಅಮರನಾಥ್, ನಟರಾದ ಕುಮಾರ್ ಅರಸೇಗೌಡ, ರಾಘವೇಂದ್ರ ಕುಮಾರ್, ಸಹ ನಿರ್ಮಾಪಕರಾದ ಆನಂದ್, ಅರಸು, ಕಲ್ಲಹಳ್ಳಿ ಕೌಶಿಕ್ ಇನ್ನಿತರರಿದ್ದರು.

ಕಪಿಲಾ ಸೇತುವೆ ಮೇಲೆ ವಾಹನ ಸವಾರರಿಗೆ ತೀವ್ರ ಸಮಸ್ಯೆ

ಕೆನಾಲ್ ಮುಚ್ಚಿ ಸುಗಮ ಸಂಚಾರಕ್ಕೆ ಅವಕಾಶ ನೀಡುವಂತೆ ಮನವಿ

ತಿ.ನರಸೀಪುರ, ಮೇ 25– ಪಟ್ಟಣಕ್ಕೆ ಬರುವ ವಾಹನ ಸಂಚಾರ ದಟ್ಟಣೆ ತಪ್ಪಿಸಲು ಹಾಗೂ ವಾಹನಗಳು ಪಟ್ಟಣ ಪ್ರವೇಶಿಸದೇ ಬೈಪಾಸ್ ಹೆದ್ದಾರಿಯಲ್ಲಿ ತೆರಳುವ ಉದ್ದೇಶಕ್ಕಾಗಿ ನಿರ್ಮಿಸಿರುವ ನೂತನ ಕಪಿಲಾ ಸೇತುವೆ ಈಗ ವಾಹನ ಸವಾರರನ್ನು ಕೆರಳುವಂತೆ ಮಾಡಿದೆ. ಕಪಿಲಾ ಸೇತುವೆ ಮೇಲೆ ನಿರ್ಮಿಸಿರುವ ಕೆನಾಲ್ (ಮಳೆ ನೀರು ಹರಿದು ಹೋಗಲು ಮಾಡಿರುವ ಜಾಗ) ನಿಂದ ತೀವ್ರ ಸಮಸ್ಯೆ ಎದುರಾಗಿದ್ದು, ಕೂಡಲೇ ಕೆನಾಲ್ ಸರಿಪಡಿಸಿ ವಾಹನಗಳು ಸುಗಮವಾಗಿ ಸಂಚರಿಸಲು ಅವಕಾಶ ಮಾಡಿಕೊಡುವಂತೆ ಕನ್ನಡ ಸೇನೆ–ಕರ್ನಾಟಕ ಸಂಘಟನೆಯ ಜಿಲ್ಲಾ ಘಟಕ ಒತ್ತಾಯಿಸಿದೆ.

ಸಾರ್ವಜನಿಕರು ಹಾಗೂ ವಾಹನ ಸವಾರರಿಂದ ಸೇತುವೆ ಮೇಲೆ ಉಂಟಾಗಿರುವ ಹಳ್ಳ ಮುಚ್ಚುವಂತೆ ತೀವ್ರ ಒತ್ತಾಯ ಕೇಳಿ ಬಂದ ಹಿನ್ನೆಲೆಯಲ್ಲಿ ಕನ್ನಡ ಸೇನೆ–ಕರ್ನಾಟಕ ಸಂಘಟನೆಯ ತಾಲೂಕು ಘಟಕದ ಅಧ್ಯಕ್ಷ ಭೈರಾಪುರ ಕೆ.ರಾಚು ಕೂಡಲೇ ಸೇತುವೆ ಮೇಲೆ ಉಂಟಾಗಿರುವ ಸಮಸ್ಯೆಯನ್ನು ತ್ವರಿತವಾಗಿ ಬಗೆಹರಿಸುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಹಾಗೂ ಕ್ಷೇತ್ರದ ಶಾಸಕರಾಗಿ ಮುಖ್ಯಮಂತ್ರಿಯಾಗಿರುವ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದರು.



ಕಪಿಲಾ ಸೇತುವೆ ಮೇಲಿನ ಕೆನಾಲ್‌ಗಳನ್ನು ಮುಚ್ಚುವಂತೆ ಕನ್ನಡ ಸೇನೆ–ಕರ್ನಾಟಕ ಸಂಘಟನೆ ಸದಸ್ಯರು ಒತ್ತಾಯಿಸಿದರು.

ಕಪಿಲಾ ಸೇತುವೆ ಮೇಲೆ ಮಾಡಿರುವ ಅವೈಜ್ಞಾನಿಕ ಕೆನಾಲ್‌ಗಳ ಬಗ್ಗೆ ಮಾಹಿತಿ ನೀಡಿ ಮಾತನಾಡಿದ ಭೈರಾಪುರ ರಾಚು, ಹೊಸ ಸೇತುವೆ ನಿರ್ಮಾಣವಾದ ಸಂದರ್ಭದಲ್ಲಿ ಕೆನಾಲ್‌ಗಳನ್ನು ರಬ್ಬರ್‌ನಿಂದ ಮುಚ್ಚಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿತ್ತು. ಆದರೆ ಕೆಲವರು ಹೊಸ ಸೇತುವೆ ಬಿರುಕು ಬಿಟ್ಟಿದೆ ಎಂಬ ತಪ್ಪು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಅಧಿಕಾರಿಗಳು ಸೇತುವೆ ಮೇಲೆ ಬಿದ್ದ ನೀರು ಸರಾಗವಾಗಿ ಹರಿದು ಹೋಗಲು ತೆಗೆಯಲಾಗಿದ್ದ ಹಳ್ಳಕ್ಕೆ ಮುಚ್ಚಲಾಗಿದ್ದ ರಬ್ಬರ್ ಅನ್ನು ತೆಗೆದ ಹಿನ್ನೆಲೆಯಲ್ಲಿ ಈಗ ತೀವ್ರವಾದ ಸಮಸ್ಯೆ ಎದುರಾಗಿದೆ ಎಂದರು.

ರಾತ್ರಿ ವೇಳೆ ಅಪಘಾತದ ಭೀತಿ: ಸೇತುವೆ ಮೇಲಿನ ಕೆನಾಲ್‌ಗಳಿಂದ ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟಾಗುತ್ತಿದೆ. ವಾಹನ ಸವಾರರು ಸಂಚರಿಸುವ ವೇಳೆ ವಾಹನ ನಿಯಂತ್ರಣ ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದ್ದು, ಅಪಘಾತದ ಭೀತಿ ಹೆಚ್ಚಾಗಿದೆ. ವಿಶೇಷವಾಗಿ ರಾತ್ರಿ ಹಾಗೂ ಮಳೆ ಸಂದರ್ಭ ಸೇತುವೆ ಮೇಲೆ ನೀರು ನಿಲ್ಲುವುದರಿಂದ ಕೆನಾಲ್‌ಗಳು ಕಾಣಿಸದ ಪರಿಣಾಮ ಸವಾರರು ಸಂಕಷ್ಟ ಅನುಭವಿಸುತ್ತಿದ್ದಾರೆ. ಸಂಬಂಧಿಸಿದ ಅಧಿಕಾರಿಗಳು ಕೂಡಲೇ ಕೆನಾಲ್‌ಗಳನ್ನು ಮುಚ್ಚಬೇಕೆಂದು ಒತ್ತಾಯಿಸಿದರು.

ಈ ವೇಳೆ ವಾಟಾಳು ಜಿ.ಎನ್.ಪುಟ್ಟಸ್ವಾಮಿ, ಭೈರಾಪುರ ರಮೇಶ್, ಕೇಬಲ್ ಸ್ವಾಮಿ, ತಬಲಾ ರಾಚಪ್ಪ, ಮರಡೀಪುರ ಸಿದ್ದರಾಜು, ಸ್ವಾಮಿ ಇದ್ದರು.

> "ಕಪಿಲಾ ಸೇತುವೆ ಮೇಲೆ ನಿತ್ಯ ಲಕ್ಷಾಂತರ ವಾಹನಗಳು ಸಂಚರಿಸುತ್ತವೆ. ಕೊಳ್ಳೇಗಾಲ, ಚಾಮರಾಜನಗರ, ಮಲೆ ಮಹದೇಶ್ವರ ಬೆಟ್ಟ ಸೇರಿದಂತೆ ನೆರೆಯ ತಮಿಳುನಾಡಿಗೂ ಹೋಗಲು ಇದೇ ಸೇತುವೆ ಅವಲಂಬಿಸಲಾಗಿದೆ. ಆದರೆ ಸೇತುವೆ ಮೇಲೆ 15 ಕಡೆ ಇರುವ ಹಳ್ಳದಿಂದ ಸಾರ್ವಜನಿಕರು ತೀವ್ರ ಸಮಸ್ಯೆ ಎದುರಿಸುವಂತಾಗಿದೆ. ಸೇತುವೆ ಮೇಲಿನ ಹಳ್ಳದ ಮೇಲೆ ವಾಹನಗಳು ಸಂಚರಿಸುವ ವೇಳೆ ವಾಹನ ಸವಾರರು ತೀವ್ರ ಬೆನ್ನು ನೋವಿಗೆ ಒಳಗಾಗುತ್ತಿದ್ದಾರೆ. ಅಲ್ಲದೇ ವಾಹನಗಳ ಶಾಕ್ ಅಬ್ಸರ್ವರ್ ಕೂಡ ಹಾಳಾಗುತ್ತಿದ್ದು, ಕೂಡಲೇ ಈ ಸಂಬಂಧ ಅಧಿಕಾರಿಗಳು ಗಮನಹರಿಸಿ ಸಮಸ್ಯೆ ಪರಿಹರಿಸಬೇಕು. – ಭೈರಾಪುರ ರಾಚು, ಕನ್ನಡ ಸೇನೆ–ಕರ್ನಾಟಕ ಸಂಘಟನೆ.

ವಿಜೃಂಭಣೆಯ ಮಾಸ್ತಮ್ಮನವರ ಜಾತ್ರಾ ಮಹೋತ್ಸವ



ಶಕ್ತಿದೇವತೆ ಮಾಸ್ತಮ್ಮನವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಹೆಚ್.ಡಿ.ಕೋಟೆ, ಮೇ 25– ತಾಲೂಕಿನ ಕಾಕನಕೋಟೆ ಬಳ್ಳೆ ಗೇಟ್‌ನಲ್ಲಿರುವ ಶಕ್ತಿದೇವತೆ ಮಾಸ್ತಮ್ಮನವರ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಮೊದಲಿಗೆ ಕಬಿನಿ ಹಿನ್ನೀರಿನಲ್ಲಿರುವ ಹಳೇ ಮಾಸ್ತಿ ಗುಡಿಗೆ ಅರ್ಚಕರಾದ ವೀರಭದ್ರಪ್ಪ ಅವರು ವಿಶೇಷ ಪೂಜೆ ಸಲ್ಲಿಸಿದ ನಂತರ ಕಳಸವನ್ನು ಮಹೇಂದ್ರ, ಲಕ್ಷ್ಮಿ ಆನೆಗಳೊಂದಿಗೆ ಮಂಗಳವಾದ್ಯ, ಚಂಡೆ, ಸತ್ತಿಗೆ ಮೆರವಣಿಗೆ ಮೂಲಕ ದೇವಾಲಯಕ್ಕೆ ತಂದು ಮಾಸ್ತಮ್ಮನಿಗೆ ವಿಶೇಷ ಪೂಜೆ ಸಲ್ಲಿಸ ಲಾಯಿತು. ಇದೇ ವೇಳೆ ಸಾವಿರಾರು ಭಕ್ತರಿಗೆ ಅರಣ್ಯ ಇಲಾಖೆಯಿಂದ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು.

ಜಾತ್ರೆ ಅಂಗವಾಗಿ ಉದ್ದೂರು ಗೇಟ್ ಬಳಿ ತಿಂಡಿ ತಿನಿಸು, ಇತರೆ ಅಂಗಡಿ ಮುಂಗಟ್ಟುಗಳನ್ನು ತೆರೆಯಲಾಗಿತ್ತು. ಮುಂಜಾಗ್ರತಾ ಕ್ರಮವಾಗಿ ಭಕ್ತರಿಗೆ ಯಾವುದೇ ತೊಂದರೆಯಾಗದಂತೆ ಅರಣ್ಯ ಹಾಗೂ ಪೊಲೀಸ್ ಇಲಾಖೆಯಿಂದ ಭದ್ರತೆ ಕೈಗೊಳ್ಳಲಾಗಿತ್ತು.

ವಿಶ್ವವಿಖ್ಯಾತ ಕಾಕನಕೋಟೆ ಬಳ್ಳೆಯಲ್ಲಿ ಖೆಡ್ಡಾ ನಡೆಸುತ್ತಿದ್ದಾಗ ಮೈಸೂರಿನ ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್, ಜಯ ಚಾಮರಾಜ ಒಡೆಯರ್ ನಂತರ ಅರಣ್ಯ ಇಲಾಖೆ ಅಧಿಕಾರಿಗಳು ಶಕ್ತಿದೇವತೆ ಮಾಸ್ತಮ್ಮನಿಗೆ ಮೊದಲು ವಿಶೇಷ ಪೂಜೆ ಸಲ್ಲಿಸಿ ನಂತರ ಕಾರ್ಯಾಚರಣೆ ನಡೆಸುತ್ತಿದ್ದರು. ಅಲ್ಲದೇ ಮಹಾನಟ ಡಾ.ರಾಜ್ ಕುಮಾರ್, ಡಾ.ವಿಷ್ಣುವರ್ಧನ್, ಎಂ.ಪಿ.ಶಂಕರ್ ಗಂಧದಗುಡಿ ಚಿತ್ರೀಕರಣ ಸಂದರ್ಭ ದೇವಿಗೆ ಪೂಜೆ ಸಲ್ಲಿಸಿ ಚಿತ್ರೀಕರಣ ಆರಂಭಿಸಿದ್ದನ್ನು ಸ್ಮರಿಸಬಹುದು.

ಈ ಹಿಂದೆ ಬಳ್ಳೆ ಆನೆ ಶಿಬಿರದಲ್ಲಿ 30ಕ್ಕೂ ಹೆಚ್ಚು ಆನೆಗಳನ್ನು ಸಾಕಲಾಗಿತ್ತು ಅಲ್ಲದೇ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದಲ್ಲಿ ಅಂಬಾರಿ ಹೊತ್ತ ಐರಾವತ, ದ್ರೋಣ, ಅರ್ಜುನ ಸೇರಿದಂತೆ ಇನ್ನಿತರ ಆನೆಗಳಿಗೆ ಮಾಸ್ತಮ್ಮನ ಆಶೀರ್ವಾದವಿತ್ತು ಎನ್ನಲಾಗಿದೆ.

ಗಣಪತಿ ಸಚ್ಚಿದಾನಂದ ಸ್ವಾಮೀಜಿ ಜನ್ಮ ದಿನೋತ್ಸವ

ಸಾಧು ಸಂತರು ಸನಾತನ ಧರ್ಮವನ್ನು ಸರಿ ದಾರಿಯಲ್ಲಿ ಕೊಂಡೊಯ್ಯುತ್ತಿದ್ದಾರೆ

● ಚಿಂತಕ ಚಕ್ರವರ್ತಿ ಸೂಲಿಬೆಲೆ ಅಭಿಮತ ● ವಿಶ್ವಕ್ಕೆ ಶಾಂತಿ ಸಂದೇಶ ನೀಡುವ ಸಾಮರ್ಥ್ಯ ಹಿಂದು ಧರ್ಮಕ್ಕಿದೆ

ಮೈಸೂರು, ಮೇ 25(ಎಂಟಿವೈ)– ಸಾಧು ಸಂತರ ತಪಸ್ಸಿನಿಂದ ದೇಶದಲ್ಲಿ ಸನಾತನ ಧರ್ಮ ಗಟ್ಟಿಗೊಂಡಿದೆ ಎಂದು ಆಧ್ಯಾತ್ಮಿಕ ಚಿಂತಕ ಚಕ್ರವರ್ತಿ ಸೂಲಿಬೆಲೆ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಅವಧೂತ ದತ್ತ ಪೀಠದ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನಡೆದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾಧು–ಸಂತರ ಅದ್ಭುತ ಶಕ್ತಿ ಹಾಗೂ ತಪಸ್ಸಿನಿಂದ ಭಾರತದಲ್ಲಿ ಸನಾತನ ಧರ್ಮ ಶಕ್ತಿಯುತವಾಗಿದೆ. ಧರ್ಮ ಮತ್ತು ಸಂಸ್ಕೃತಿಯ ಹಾದಿ ವಿಚಲಿತಗೊಳ್ಳದಂತೆ ಸಾಧು ಸಂತರು ನೋಡಿಕೊಂಡಿದ್ದು, ಸನಾತನ ಧರ್ಮವನ್ನು ಮುನ್ನಡೆಸಿಕೊಂಡು ಬಂದಿದ್ದಾರೆ. ಜಂಜಾಟದಲ್ಲಿ ನಮ್ಮಲ್ಲಿರುವ ಸತ್ ಚಿಂತನೆಗಳ ಬ್ಯಾಟರಿ ಬೇಗನೆ ಡಿಸ್ಚಾರ್ಜ್ ಆಗುತ್ತದೆ. ಆದರೆ ಗುರುಗಳ ಕಣ್ಣಿನ ನೋಟ ಮತ್ತು ಅವರ ಮಂದಹಾಸಕ್ಕೆ ನಮ್ಮನ್ನು ಮತ್ತೆ ಚಾರ್ಜ್ ಮತ್ತು ರೀಚಾರ್ಜ್ ಮಾಡುವ ಅದ್ಭುತ ಸಾಮರ್ಥ್ಯವಿದೆ. ಗುರುವಿನ ಆಶೀರ್ವಾದದ ಮೂಲಕ ಸದಾ ಸ್ಫೂರ್ತಿ ಸೆಲೆ ಹರಿಯುತ್ತಿರುತ್ತದೆ ಎಂದರು.



ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ನಡೆದ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅವರ ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ ಚಿಂತಕ ಚಕ್ರವರ್ತಿ ಸೂಲಿಬೆಲೆ ಮಾತನಾಡಿದರು.

ಗುರುವಿನ ಆರಾಧನೆ ಮಾಡುವುದರಿಂದ ವಿಭಿನ್ನ ನದಿಗಳು ಸಾಗರ ಸೇರುವಂತೆ ಇಂದು ವಿವಿಧ ಭಾಷಿಕರಾದ ನಾವು ಭಾಷೆಗಳ ಗಡಿಯನ್ನು ಮೀರಿ ಗುರುವಿನ ಸ್ಮರಣೆಗೆ ಒಂದೇ ಕಡೆ ಸೇರಿರುವುದು ಅತ್ಯಂತ ಅದ್ಭುತ ಸಂಗತಿ. ನಾವೆಲ್ಲರೂ ಭಗವಂತನಿಂದ ಆಯ್ದುಕೊಳ್ಳಲ್ಪಟ್ಟವರಾಗಿದ್ದೇವೆ. ಆ ದೈವೀ ಶಕ್ತಿಯೇ ನಮ್ಮನ್ನು ಇಲ್ಲಿಗೆ ಕರೆತಂದಿದೆ. ಗಣಪತಿ ಶ್ರೀಗಳು ವಿಶ್ವದಾದ್ಯಂತ, ಆಂಜನೇಯನ ಚಿಂತನೆಗಳನ್ನು ಮತ್ತು ದತ್ತನ ವಿಚಾರಗಳನ್ನು ಬಿತ್ತರಿಸುತ್ತಿದ್ದಾರೆ. ಭಾರತ ಮಾತೆಯ ಹಿರಿಮೆಯನ್ನು ಜಗತ್ತಿಗೆ ಮುಟ್ಟಿಸಲು ಅವರು ನಡೆಸುತ್ತಿರುವ ಪ್ರಯತ್ನಗಳು ಕೇವಲ ವ್ಯಕ್ತಿಗತವಲ್ಲ, ಅದು ದೈವೀ ಸಂಕಲ್ಪ ಎಂದು ಬಣ್ಣಿಸಿದರು.

ಹುಟ್ಟಿದ ಹಬ್ಬದ ಉತ್ಸವ: ನಾವೆಲ್ಲರೂ ಹುಟ್ಟಿದ ದಿನ ಆಚರಿಸಿಕೊಳ್ಳುತ್ತೇವೆ. ಆದರೆ ಸಮಾಜಕ್ಕಾಗಿ ಬದುಕುವ ಸಂತರ ಜನ್ಮ ದಿನವು 'ಹುಟ್ಟಿದ ಹಬ್ಬದ ಉತ್ಸವ'ವಾಗಿ ಮಾರ್ಪಡುತ್ತದೆ. ಜಗತ್ತು ಧ್ವಂಸದ ಹಾದಿಯಲ್ಲಿ ಸಾಗುತ್ತಿರುವಾಗ ವಿಶ್ವಕ್ಕೆ ಶಾಂತಿಯ ಸಂದೇಶ ನೀಡುವ ಸಾಮರ್ಥ್ಯ ನಮ್ಮ ಹಿಂದು ಧರ್ಮಕ್ಕಿದೆ. ಆ ದಾರಿಯಲ್ಲಿ ನಾವೆಲ್ಲರೂ ಗುರುಗಳ ಮಾರ್ಗದರ್ಶನದಲ್ಲಿ ಶ್ರದ್ಧೆಯಿಂದ ಹೆಜ್ಜೆ ಇಡಬೇಕಾಗಿದೆ ಎಂದು ಕರೆ ನೀಡಿದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಗಣಪತಿ ಸಚ್ಚಿದಾನಂದ ಸ್ವಾಮೀಜಿ ವಹಿಸಿದ್ದರು. ಈ ವೇಳೆ ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ದೃಶ್ಯಂ–3 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಪೆಟ್ರಿಯೋಟ್ (ಮ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕರುಪ್ಪು (ತ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ದೃಶ್ಯಂ–3 (ಕ)	4 ಪ್ರದರ್ಶನಗಳು
ಲಿಡೋ	
ಕೋಟಿಗೊಬ್ಬ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕುಚುಕು (ಕ)	4 ಪ್ರದರ್ಶನಗಳು

ವಿದ್ಯುತ್ ಅಡಚಣೆಗೆ ಪರಿಹಾರವಾಗಿ ಟ್ರಾನ್ಸ್‌ಫಾರ್ಮರ್ ಬ್ಯಾಂಕ್ ಸ್ಥಾಪನೆ

ಸೆಸ್ಕ್ ಯೋಜಿತ ಕ್ರಮ

ಜಿಲ್ಲಾವಾರು ಸಹಾಯವಾಣಿ ಸಂಖ್ಯೆ
ಮೈಸೂರು – 18005990062
ಕೊಡಗು – 18005990061
ಚಾ.ನಗರ – 18005990063
ಮಂಡ್ಯ – 18005990064
ಹಾಸನ – 18005990065

ಮೈಸೂರು, ಮೇ 25(ಎಂಟಿವೈ)– ಗ್ರಾಮೀಣ ಪ್ರದೇಶ ಸೇರಿದಂತೆ ತಾಲೂಕು ಕೇಂದ್ರಗಳಲ್ಲಿ ಅಡಚಣೆರಹಿತ ವಿದ್ಯುತ್ ಪೂರೈಕೆ ಮಾಡುವ ವಿದ್ಯುತ್ ಪರಿವರ್ತಕಗಳ ಬ್ಯಾಂಕ್ ಸ್ಥಾಪಿಸಿ, ಹೆಚ್ಚುವರಿ ಟ್ರಾನ್ಸ್‌ಫಾರ್ಮರ್‌ಗಳನ್ನು ಸಂಗ್ರಹಿಸಿಕೊಳ್ಳಲು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ಕ್ರಮ ಕೈಗೊಂಡಿದೆ.

ಸೆಸ್ಕ್ ವ್ಯಾಪ್ತಿಗೆ ಒಳಪಡುವ ಮೈಸೂರು, ಮಂಡ್ಯ, ಚಾಮರಾಜನಗರ, ಕೊಡಗು ಹಾಗೂ ಹಾಸನ ಜಿಲ್ಲೆಗಳ ಎಲ್ಲಾ ತಾಲೂಕುಗಳಲ್ಲಿರುವ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆಗೆ ಅನುಗುಣವಾಗಿ ಹೆಚ್ಚುವರಿ ಟ್ರಾನ್ಸ್‌ಫಾರ್ಮರ್‌ಗಳನ್ನು ನಿಗಮದ ವಿವಿಧ ದಾಸ್ತಾನು ಕೇಂದ್ರಗಳಲ್ಲಿ ಬಫರ್ ಸ್ಟಾಕ್ ಸಂಗ್ರಹಿಸಿಡಲಾಗಿದ್ದು, ತಾಲೂಕಿನ ಯಾವುದೇ ಪ್ರದೇಶದಲ್ಲಿರುವ ವಿದ್ಯುತ್ ಪರಿವರ್ತಕಗಳಲ್ಲಿ ದೋಷ ಉಂಟಾದರೂ ತ್ವರಿತವಾಗಿ ಬದಲಾವಣೆ ಅಥವಾ ದುರಸ್ತಿ ಕಾರ್ಯಕೈಗೊಳ್ಳಲು ಅನುಕೂಲವಾಗಲಿದೆ ಎಂದು ಸೆಸ್ಕ್ ಅಧಿಕಾರಿಗಳು ತಿಳಿಸಿದ್ದಾರೆ.

ಮುಂಗಾರು ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಮಳೆ ಹಾಗೂ ಗಾಳಿಯಿಂದಾಗಿ ಕೆಲವೆಡೆ ಟ್ರಾನ್ಸ್‌ಫಾರ್ಮರ್‌ಗಳಿಗೆ ಹಾನಿಯಾಗುವ ಸಾಧ್ಯತೆಯೂ ಹೆಚ್ಚಾಗಿದೆ. ಹಾನಿಗೊಳಗಾದ ಟಿಸಿಗಳನ್ನು ಶೀಘ್ರವಾಗಿ ದುರಸ್ತಿ ಮಾಡಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗದಂತೆ ಕ್ರಮವಹಿಸಲು ಸೆಸ್ಕ್ ಸನ್ನದ್ಧವಾಗಿದೆ. ಆದ್ದರಿಂದ ಸಾರ್ವಜನಿಕರು ಮತ್ತು ರೈತರು ಟ್ರಾನ್ಸ್‌ಫಾರ್ಮರ್‌ಗಳಲ್ಲಿ ದೋಷ ಕಂಡು ಬಂದಲ್ಲಿ ಕೂಡಲೇ ಸೆಸ್ಕ್ 24*7 ಸಹಾಯವಾಣಿ 1912 ಅಥವಾ ಸಮೀಪದ ಸೇವಾ ಕೇಂದ್ರಗಳಿಗೆ ಮಾಹಿತಿ ನೀಡುವಂತೆ ಕೋರಿದ್ದಾರೆ.

ವಿದ್ಯುತ್ ಸಂಪರ್ಕ ಪಡೆಯಬಹುದು: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಸೆಸ್ಕ್) ವ್ಯಾಪ್ತಿಯಲ್ಲಿನ ನಗರ ಅಥವಾ ಗ್ರಾಮೀಣ ಪ್ರದೇಶಗಳ ಗ್ರಾಹಕರು ಯಾವುದೇ ವಿದ್ಯುತ್ ಸಂಪರ್ಕದ ಮಾಹಿತಿಗಾಗಿ ಚಾವಿಸನಿನಿ(ಸೆಸ್ಕ್) ಉಪವಿಭಾಗ/ವಿಭಾಗದ ಅಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಮೆಟ್ರಿಕ್ ನಂತರದ ಪ್ರೋತ್ಸಾಹಧನಕ್ಕೆ ಅರ್ಜಿ ಆಹ್ವಾನ

ಮೈಸೂರು, ಮೇ 25– ಸಮಾಜ ಕಲ್ಯಾಣ ಇಲಾಖಾ ವತಿಯಿಂದ 2025–26ನೇ ಶೈಕ್ಷಣಿಕ ಸಾಲಿನಲ್ಲಿ ಮೆಟ್ರಿಕ್ ನಂತರದ ದ್ವಿತೀಯ ಪಿಯುಸಿ, 3 ವರ್ಷದ ಪಾಲಿಟೆಕ್ನಿಕ್ ಡಿಪ್ಲೋಮಾ, ಪದವಿ, ಸ್ನಾತಕೋತ್ತರ ಪದವಿ ಹಾಗೂ ವೃತ್ತಿಪರ ಕೋರ್ಸ್‌ಗಳನ್ನು ಪೂರ್ಣಗೊಳಿಸಿ ಪ್ರಥಮ ಪ್ರಯತ್ನದಲ್ಲಿ, ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದ್ದು, ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಗಳು ಇಲಾಖೆಯ https://swdservices.karnataka.gov.in/PrizeMoneyClientApp/register ವೆಬ್‌ಸೈಟ್‌ನಲ್ಲಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ–0821–2520910 ನ್ನು ಸಂಪರ್ಕಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಳೆ ಅವಾಂತರದಿಂದ ಎಚ್ಚೆತ್ತ ಪಾಲಿಕೆ; ಪ್ರಮುಖ ಸ್ಥಳಗಳಲ್ಲಿ ಪೈಪ್‌ಲೈನ್ ಕಾಮಗಾರಿ

ಮೈಸೂರು, ಮೇ 25(ಎಂಟಿವೈ)– ಮಳೆಗಾಲಕ್ಕೆ ಮುನ್ನ ಮೈಸೂರು ಮಹಾನಗರ ಪಾಲಿಕೆ ಎಚ್ಚೆತ್ತುಕೊಂಡಂತಿದೆ. ಮಳೆ ನೀರು ಚರಂಡಿ ತುಂಬಿ ಹರಿದು ಅವಾಂತರ ಸೃಷ್ಟಿಸುವ ಭೀತಿಯಿಂದ ವಿವಿಧೆಡೆ ಹೊಸದಾಗಿ ಪೈಪ್‌ಲೈನ್ ಮಾರ್ಗವನ್ನು ಅಳವಡಿಸುವ ಕಾಮಗಾರಿ ಆರಂಭವಾಗಿದೆ.

ಬರಿ ಮಳೆ ಬಂದರೆ ಸಾಕು ಮೈಸೂರಿನ ಜಯ ಚಾಮರಾಜ ಒಡೆಯರ್ (ಹಾರ್ಡಿಂಜ್ ವೃತ್ತ) ವೃತ್ತದಲ್ಲಿ ಮಳೆ ನೀರಿನೊಂದಿಗೆ ಒಳಚರಂಡಿ ನೀರು ರಸ್ತೆಯಲ್ಲಿ ಹರಿಯುತ್ತಿತ್ತು. ದೇವರಾಜ ಅರಸ್ ರಸ್ತೆ, ಸಯ್ಯಾಜಿರಾವ್ ರಸ್ತೆ, ಇರ್ವಿನ್ ರಸ್ತೆ ಧನ್ವಂತರಿ ರಸ್ತೆ ಅಶೋಕ ರಸ್ತೆ ಹರ್ಷ ರಸ್ತೆ, ದೊಡ್ಡಗಡಿಯಾರ ಜಂಕ್ಷನ್ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಿಂದ ಮಳೆ ಹಾಗೂ ಚರಂಡಿ ನೀರು ಹರಿದು ಬಂದು ಹಾರ್ಡಿಂಜ್‌ವೃತ್ತದಲ್ಲಿ ಅವಾಂತರ ಸೃಷ್ಟಿಸುತ್ತಿತ್ತು. ಪಕ್ಕದಲ್ಲಿಯೇ ದೊಡ್ಡ ಮೋರಿ ಇದ್ದರೂ ಅದಕ್ಕೆ ಸಂಪರ್ಕ ಕಲ್ಪಿಸುವ ಒಳಚರಂಡಿ ಮಾರ್ಗವಿರಲಿಲ್ಲ.


ಮೈಸೂರಿನ ಜಯ ಚಾಮರಾಜ ಒಡೆಯರ್(ಹಾರ್ಡಿಂಜ್) ವೃತ್ತದಲ್ಲಿ ಹೊಸದಾಗಿ ಒಳಚರಂಡಿ ಪೈಪ್‌ಲೈನ್ ಕಾಮಗಾರಿ ನಡೆಸುತ್ತಿರುವುದು.

ವರ್ಷವಿಡೀ ಸುಮ್ಮನಿದ್ದ ನಗರಪಾಲಿಕೆ ಅಧಿಕಾರಿಗಳು ಇನ್ನೇನು ಮಳೆ ಆರಂಭವಾಗುವ ಸನಿಹದಲ್ಲಿ ಇಂತಹ ಪ್ರಮುಖ ಕಾಮಗಾರಿ ಕೈಗೆತ್ತಿಕೊಂಡಿರುವುದರ ಬಗ್ಗೆ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ತರಾತುರಿಯಲ್ಲಿ ನಡೆಯುತ್ತಿರುವ ಈ ಕಾಮಗಾರಿಯ ಗುಣಮಟ್ಟ ದೇವರೇ ಬಲ್ಲ ಎಂದು ವ್ಯಂಗ್ಯವಾಡಿದ್ದಾರೆ.

ಈ ಹಿನ್ನೆಲೆಯಲ್ಲಿ ಹಾರ್ಡಿಂಗ್ ವೃತ್ತದಲ್ಲಿ 500 ಮೀಟರ್ ಅಂತರದ ಒಳಚರಂಡಿ ಮಾರ್ಗವನ್ನು ಹೊಸದಾಗಿ ನಿರ್ಮಿಸಲಾಗುತ್ತಿದೆ. ಈ ಹಿಂದೆ ಮಳೆಗಾಲದಲ್ಲಾದ ಅವಾಂತರವನ್ನು ಮನಗಂಡು ಒಳಚರಂಡಿ ಮಾರ್ಗಕ್ಕೆ 5 ಅಡಿ ಅಗಲದ ಪೈಪ್ ಬಳಸಲಾಗುತ್ತಿದೆ. ಇದರಿಂದ ಮಳೆ ಮತ್ತು ಚರಂಡಿ ನೀರು ಎಷ್ಟೇ ಪ್ರಮಾಣದಲ್ಲಿ ಬಂದರೂ ಸರಾಗವಾಗಿ ಪೈಪ್ ಮೂಲಕ ಹರಿದು ಚರಂಡಿ ಸೇರಲಿದೆ. ಇದರಿಂದ ಮಳೆ ನೀರಿನಿಂದಾಗಿ ಹಾರ್ಡಿಂಜ್ ವೃತ್ತದಲ್ಲಿ ವಾಹನ ಸವಾರರಿಗೆ ಅಡಚಣೆ ತಪ್ಪಿದಂತಾಗಲಿದೆ.

ಕಾಮಗಾರಿಯಿಂದ ಟ್ರಾಫಿಕ್ ಜಾಮ್: ಹಾರ್ಡಿಂಜ್ ವೃತ್ತದಲ್ಲಿ ಇಟ್ಟಿಗೆಗೂಡು ರಸ್ತೆ ಜಂಕ್ಷನ್ ಮೋರಿಯಿಂದ ಪೈಪ್‌ಲೈನ್ ಕಾಮಗಾರಿ ನಡೆಯುತ್ತಿದೆ. ಮಿರ್ಜಾ ರಸ್ತೆ ಜಂಕ್ಷನ್, ಸಿದ್ದಾರ್ಥ ಹೋಟೆಲ್ ರಸ್ತೆ ಜಂಕ್ಷನ್ ಮೂಲಕ ಹಾದು ಬಿ.ಎನ್.ರಸ್ತೆಯ ಡಾ.ರಾಜ್‌ಕುಮಾರ್ ಪಾರ್ಕ್ ಜಂಕ್ಷನ್‌ವರೆಗೆ ಪೈಪ್‌ಲೈನ್ ಕಾಮಗಾರಿ ನಡೆಸಲಾಗುತ್ತಿದೆ. ಕಳೆದ ಎರಡು ದಿನದಿಂದ ಕಾಮಗಾರಿ ನಡೆಯುತ್ತಿದ್ದು, ಇನ್ನು 3 ಅಥವಾ 4ದಿನದೊಳಗೆ ಪೂರ್ಣಗೊಳ್ಳಲಿದೆ. ಈಗಾಗಲೇ ವೃತ್ತದಲ್ಲಿ ಎರಡು ರಸ್ತೆಯ ಜಂಕ್ಷನ್‌ನಲ್ಲಿ ಕಾಮಗಾರಿ ಪೂರ್ಣಗೊಂಡಿದ್ದು, ವಾಹನ ಸಂಚಾರಕ್ಕೆ ಅವಕಾಶ ಮಾಡಿಕೊಡಲಾಗಿದೆ ಆದರೆ, ಹಾರ್ಡಿಂಜ್ ವೃತ್ತದ ಕಡೆಗೆ ಮಿನಿ ವಿಧಾನಸೌಧದ ಕಡೆಯಿಂದ ಬರುವ ವಾಹನಗಳ ಸಂಚಾರಕ್ಕೆ ಬದಲಿ ಮಾರ್ಗ ಸೂಚಿಸಲಾಗಿದೆ. ನಾಳೆ ಬಿಎನ್ ರಸ್ತೆ ಅಗೆಯುವ ಸಂಭವವಿದ್ದು, ಗ್ರಾಮಾಂತರ ಬಸ್ ನಿಲ್ದಾಣದ ಕಡೆ ಸಂಚರಿಸುವ ವಾಹನಗಳ ಸಂಚಾರ ವ್ಯತ್ಯಯ ಉಂಟಾಗಲಿದೆ. ಪಾಲಿಕೆ ನಡೆಸುತ್ತಿರುವ ಕಾಮಗಾರಿಯ ಸ್ಥಳದಲ್ಲಿ ಸಂಚಾರ ಪೊಲೀಸರು ಬೀಡು ಬಿಟ್ಟಿದ್ದು, ವಾಹನಗಳ ಸಂಚಾರಕ್ಕೆ ಪರ್ಯಾಯ ಮಾರ್ಗದ ಬಗ್ಗೆ ಸೂಚನೆ ನೀಡುತ್ತಿದ್ದಾರೆ.


ಚರಂಡಿ ಕಾಮಗಾರಿಯಿಂದಾಗಿ ಟ್ರಾಫಿಕ್ ಜಾಮ್ ಉಂಟಾಗಿರುವುದು

ಕಾಕ್ರೋಚ್ ಜನತಾ ಪಾರ್ಟಿ ಹೆಸರಿನಲ್ಲಿ ಬಿಜೆಪಿ ವಿರುದ್ಧ ಅಪಪ್ರಚಾರ

ಮೈಸೂರಿನಲ್ಲಿ ಮಾಜಿ ಕೇಂದ್ರ ಸಚಿವ ಡಿ.ವಿ.ಸದಾನಂದಗೌಡ ಕಿಡಿ

- ▶ಕಾಕ್ರೋಚ್ ಬೆಂಬಲಿಸುವ ರಹಸ್ಯ ತಂಡವಿದೆ
- ▶ಈಗ ನಾವು ಜಿರಳೆಗೆ ಔಷಧಿ ಹಾಕಿದ್ದೇವೆ
- ▶ನಾನು ರಾಜ್ಯಸಭಾ ಚುನಾವಣೆಯ ಆಕಾಂಕ್ಷಿ
- ▶ವಿಜಯೇಂದ್ರ ಕಾಲಾವಧಿ ಮುಗಿಯಲಿ ನೋಡೋಣ



ಮೈಸೂರು, ಮೇ25(ಬಿಎಲ್‌ಯು)– ಕಾಕ್ರೋಚ್ ಜನತಾ ಪಾರ್ಟಿ ಹೆಸರಿನಲ್ಲಿ ಬಿಜೆಪಿ ವಿರುದ್ಧ ಅಪಪ್ರಚಾರ ನಡೆಯುತ್ತಿದ್ದು, ಇದಕ್ಕೆ ರಹಸ್ಯವಾಗಿ ಬೆಂಬಲ ನೀಡುವ ತಂಡವೊಂದಿದೆ ಎಂದು ಕೇಂದ್ರದ ಮಾಜಿ ಸಚಿವ ಡಿ.ವಿ.ಸದಾನಂದಗೌಡ ಕಿಡಿಕಾರಿದರು.

ಮೈಸೂರಿನಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮನೆಯಲ್ಲಿ ಜಿರಳೆಗೆ ಔಷಧಿ ಹಾಕಿದಂತೆ ನಾವು ಕೂಡ ಈಗ ಜಿರಳೆಗೆ ಔಷಧಿ ಹಾಕಿದ್ದೇವೆ ಎಂದು ಕಾಕ್ರೋಚ್ ಜನತಾ ಪಾರ್ಟಿಯ ಸಾಮಾಜಿಕ ಜಾಲತಾಣಗಳ ಮೇಲಿನ ನಿರ್ಬಂಧದ ಬಗ್ಗೆ ಮಾರ್ಮಿಕವಾಗಿ ಹೇಳಿದರು.

ಮಧ್ಯಪ್ರಾಚ್ಯ ಯುದ್ಧದ ಪರಿಣಾಮದಿಂದ ವಿಶ್ವದಲ್ಲೇ ಇಂಧನ ಬಿಕ್ಕಟ್ಟು ಎದುರಾಗಿದೆ. ಹಾಗಾಗಿ ಸ್ವಲ್ಪ ಮಟ್ಟಿಗೆ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳವಾಗಿದೆ. ಆದರೆ ವಿಶ್ವದ ಬೇರೆ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ಬಹಳ ಕಡಿಮೆ ಇದೆ ಎಂದು ಅವರು ಸಮರ್ಥಿಸಿಕೊಂಡರು.

ನಾನೂ ಆಕಾಂಕ್ಷಿ: ಮುಂಬರುವ ರಾಜ್ಯಸಭಾ ಚುನಾವಣೆಗೆ ನಾನು ಕೂಡ ಆಕಾಂಕ್ಷಿಯಾಗಿದ್ದೇನೆ. ಆದರೆ ನನ್ನ ಆಯ್ಕೆಯನ್ನು ವರಿಷ್ಠರ ತೀರ್ಮಾನಕ್ಕೆ ಬಿಟ್ಟಿದ್ದೇನೆ. ಹೈಕಮಾಂಡ್ ಏನೇ ತೀರ್ಮಾನ ಕೈಗೊಂಡರೂ ನಾನು ಅದಕ್ಕೆ ಬದ್ಧನಾಗಿದ್ದೇನೆ. ಈಗಾಗಲೇ ಚುನಾವಣಾ ರಾಜಕಾರಣದಿಂದ ನಿವೃತ್ತಿ ಹೊಂದಿದ್ದೇನೆ. ಆದರೆ ಪಕ್ಷ ಬೇರೆ ಯಾವುದೇ ಜವಾಬ್ದಾರಿ ನೀಡಿದರೂ ಅದನ್ನು ನಿರ್ವಹಿಸುತ್ತೇನೆ ಎಂದು ಸ್ಪಷ್ಟಪಡಿಸಿದರು.

ವೈಯಕ್ತಿಕ ಅಭಿಪ್ರಾಯವಿಲ್ಲ: ಕರ್ನಾಟಕದ ಬಿಜೆಪಿ ರಾಜ್ಯಾಧ್ಯಕ್ಷರ ಬದಲಾವಣೆ ಬಗ್ಗೆ ಹೈಕಮಾಂಡ್ ನಿರ್ಧಾರ ಮಾಡುತ್ತದೆ. ಈಗಾಗಲೇ ವಿಜಯೇಂದ್ರ ಅವರು ರಾಜ್ಯಾಧ್ಯಕ್ಷರಾಗಿ ಪಕ್ಷ ಸಂಘಟನೆ ಮಾಡುತ್ತಿದ್ದು, ಅವರ ಅವಧಿ ಮುಗಿಯಲಿ ನೋಡೋಣ ಎಂದರು.

ಒಂದು ವೇಳೆ ರಾಜ್ಯಾಧ್ಯಕ್ಷರ ಬದಲಾವಣೆ ಅವಶ್ಯಕತೆ ವರಿಷ್ಠರಿಗೆ ಕಂಡು ಬಂದರೆ ನಾಲ್ಕು ಗೋಡೆ ಮಧ್ಯ ತೀರ್ಮಾನ ಮಾಡುತ್ತಾರೆ. ಈ ವಿಚಾರದಲ್ಲಿ ನನ್ನ ವೈಯಕ್ತಿಕ ಅಭಿಪ್ರಾಯವೇನಿಲ್ಲ ಎಂದು ಸ್ಪಷ್ಟನೆ ನೀಡಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಎಸ್‌ಐಆರ್ ವಿರೋಧಿಸುತ್ತಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ಸದಾನಂದಗೌಡ ಅವರು, ಹಗರಣಗಳ ಸರಮಾಲೆ ಹೊತ್ತಿರುವ ಈ ಸರ್ಕಾರ ತನ್ನ ತಪ್ಪು ಮರೆಮಾಚಲು ಪ್ರತಿಯೊಂದು ವಿಚಾರಕ್ಕೂ ವಿರೋಧ ಮಾಡುತ್ತಿದೆ ಎಂದು ಸದಾನಂದಗೌಡ ಟೀಕಿಸಿದರು.

ತೋಟಗಾರಿಕೆ ಇಲಾಖೆ ಹುದ್ದೆಗಳ ಉನ್ನತೀಕರಣ

ಮೈಸೂರು, ಮೇ 25(ಎಸ್‌ಪಿಎನ್)– ತೋಟಗಾರಿಕೆ ಇಲಾಖೆಯಲ್ಲಿನ ಜಿಲ್ಲಾ ಮಟ್ಟದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ(ರಾಜ್ಯ ವಲಯ)ರ ಹುದ್ದೆಗಳನ್ನು ತೋಟಗಾರಿಕೆ ಉಪನಿರ್ದೇಶಕ(ರಾಜ್ಯ ವಲಯ) ಹುದ್ದೆಗಳನ್ನಾಗಿ ಉನ್ನತೀಕರಿಸಿದೆ. ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಸೇರಿದಂತೆ 29 ಜಿಲ್ಲೆಗಳ 29 ಹುದ್ದೆಗಳನ್ನು ಉನ್ನತೀಕರಿಸಿದೆ ಹಾಗೂ ಈ ಹುದ್ದೆಗಳನ್ನು ಕರ್ನಾಟಕ ರಾಜ್ಯ ತೋಟಗಾರಿಕೆ ಸೇವೆಗಳ(ನೇಮಕಾತಿ) ನಿಯಮ 2023ರನ್ವಯ ಭರ್ತಿ ಮಾಡಲು ಆದೇಶಿಸಿದೆ. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 158 ವೆಚ್ಚ–4/2024 ದಿನಾಂಕ:15.5.2026ರಂದು ನೀಡಿರುವ ಸಹಮತಿ ಅನ್ವಯ ತೋಟಗಾರಿಕೆ ಇಲಾಖೆಯ ಅಧೀನ ಕಾರ್ಯದರ್ಶಿ ಶೀತಲ್ ಎಂ.ಹಿರೇಮಠ ಆದೇಶಿಸಿದ್ದಾರೆ.

ಗೋ ರಕ್ಷಣೆ ಹೆಸರಿನಲ್ಲಿ ಗೂಂಡಾಗಿರಿ, ಕೋಮು ಪ್ರಚೋದಕರ ವಿರುದ್ಧ ಕೇಸ್ ವಾಪಸ್ ಪಡೆಯುವುದ ಖಂಡಿಸಿ ಎಸ್‌ಡಿಪಿಐ ಪ್ರತಿಭಟನೆ

● ನಾಡು, ನುಡಿಗಾಗಿ ಹೋರಾಡಿದವರ ಕೇಸ್ ವಾಪಸ್‌ಗೆ ಅಭ್ಯಂತರವಿಲ್ಲ ● ಸರ್ವಜನಾಂಗದ ಹಿತಕಾಯಬೇಕಿದ್ದ ಕಾಂಗ್ರೆಸ್ ಸರ್ಕಾರ ಸಂಘ ಪರಿವಾರದ 'ಸಂಗ' ಬೆಳೆಸಿದೆ: ಅಬ್ದುಲ್ ಮಜೀದ್ ವಾಗ್ದಾಳಿ


ಮೈಸೂರಿನ ಗಾಂಧಿನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಎಸ್‌ಡಿಪಿಐ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮೇ 25(ಎಂಕೆ)– ದ್ವೇಷ ರಾಜಕಾರಣ, ಕೋಮು ಪ್ರಚೋದನೆ ಹಾಗೂ ಸಮಾಜದಲ್ಲಿ ಅಶಾಂತಿ ಸೃಷ್ಟಿಸಿದವರ ವಿರುದ್ಧ ದಾಖಲಾಗಿದ್ದ ಪ್ರಕರಣಗಳನ್ನು ರಾಜ್ಯ ಸರ್ಕಾರ ಹಿಂಪಡೆಯುತ್ತಿರುವ ಕ್ರಮವನ್ನು ಖಂಡಿಸಿ ಎಸ್‌ಡಿಪಿಐ (ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ) ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಗಾಂಧಿನಗರದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತ(ಎಫ್‌ಟಿಎಸ್ ಸರ್ಕಲ್)ದಲ್ಲಿ ಜಮಾವಣೆಗೊಂಡ ಎಸ್‌ಡಿಪಿಐ ಕಾರ್ಯಕರ್ತರು, ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರಲ್ಲದೆ ಗೋ ರಕ್ಷಣೆ ಹೆಸರಿನಲ್ಲಿ ಗೂಂಡಾಗಿರಿ, ಹಿಂಸಾಚಾರ, ಕೋಮು ಪ್ರಚೋದನೆ ನಡೆಸಿದವರ ವಿರುದ್ಧ ದಾಖಲಾಗಿದ್ದ ಪ್ರಕರಣಗಳನ್ನು ರಾಜ್ಯ ಸರ್ಕಾರ ಹಿಂಪಡೆಯುತ್ತಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಳಿಕ ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್, ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧಿಕಾರಾವಧಿಯಲ್ಲಾದ ಅಲ್ಪಸಂಖ್ಯಾತ ಮತ್ತು ದಲಿತರ ವಿರೋಧಿ ಆಡಳಿತದಿಂದ ಬೇಸತ್ತು ಎಲ್ಲರೂ ಹೋರಾಟ ಮಾಡಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತಂದೆವು. ಅದರಂತೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ಪೂರ್ಣಗೊಳಿಸಿ, ನಾಲ್ಕನೆ ವರ್ಷಕ್ಕೆ ಕಾಲಿಟ್ಟಿದೆ. ಆದರೆ, ಜನಪರವಾಗಿರಬೇಕಿದ್ದ ರಾಜ್ಯ ಕಾಂಗ್ರೆಸ್ ಸರ್ಕಾರ, ಕೋಮು ಗಲಭೆಗೆ ಪ್ರಚೋದನೆ ನೀಡುವ ಸಂಘ ಪರಿವಾರದ ಜೊತೆಗೆ ಹೋಗುತ್ತಿದೆ ಎಂದು ಕಿಡಿಕಾರಿದರು.

ಇತ್ತೀಚೆಗೆ ನಡೆದ ಸಚಿವ ಸಂಪುಟ ಸಭೆಯಲ್ಲಿ 52 ಕೇಸ್‌ಗಳನ್ನು ವಾಪಸ್ ತೆಗೆದುಕೊಳ್ಳಲಾಯಿತು. ನಾಡಿನ ನೆಲ–ಜಲಕ್ಕಾಗಿ ಹೋರಾಟ ಮಾಡಿದ್ದವರ ಮೇಲಿನ ಕೇಸ್‌ಗಳನ್ನು ವಾಪಸ್ ಪಡೆಯುವುದಕ್ಕೆ ಯಾರ ವಿರೋಧವಿಲ್ಲ. ಕನ್ನಡ ಹೋರಾಟಗಾರ ವಾಟಾಳ್ ನಾಗರಾಜ್ ಅವರ ಮೇಲಿದ್ದ ಕೇಸ್‌ಗಳನ್ನು ವಾಪಸ್ ಪಡೆದಿದ್ದಾರೆ. ರೈತ ಸಂಘಟನೆಗಳ ಮುಖಂಡರ ಮೇಲಿದ್ದ ಕೇಸ್‌ಗಳನ್ನು ವಾಪಸ್ ಪಡೆದಿರುವುದಕ್ಕೆ ಸ್ವಾಗತವಿದೆ. ಆದರೆ, ಕೋಮು ಗಲಭೆಗೆ ಪ್ರಚೋದನೆ ನೀಡುವ ಶ್ರೀರಾಮ ಸೇನೆಯ ಪ್ರಮೋದ್ ಮುತಾಲಿಕ್ ಮೇಲಿದ್ದ ಕೇಸ್‌ಗಳನ್ನು ವಾಪಸ್ ಪಡೆದಿದ್ದೇಕೆ ಎಂದು ಪ್ರಶ್ನಿಸಿದರು.

ಬಸವನಗೌಡ ಪಾಟೀಲ್ ಯತ್ನಾಳ್, ಚೈತ್ರಾ ಕುಂದಾಪುರ, ಪ್ರಮೋದ್ ಮುತಾಲಿಕ್ ಅವರದ್ದು ಕೋಮು ಕೋಮುಗಳ ನಡುವೆ ದ್ವೇಷ ಬೆಳೆಸುವುದೇ ಕೆಲಸ. ಬಹಿರಂಗವಾಗಿ ಕೋಮು ದ್ವೇಷದೊಂದಿಗೆ ವಿಷಕಾರಿ ಭಾಷಣ ಮಾಡುವ ಈ ಕೋಮುವಾದಿಗಳಿಗೆ ರಾಜ್ಯ ಸರ್ಕಾರ ಅವಕಾಶ ನೀಡುತ್ತಾ ಸರ್ಟಿಫೈಡ್ ಮಾಡುತ್ತಿದೆ. ಜನಪರ ಹೋರಾಟಗಾರರ ಕೇಸ್ ಹಿಂಪಡೆಯದೆ ಪುನರಾವರ್ತಿತ ಆರೋಪಿಗಳ ಕೇಸ್ ವಾಪಸ್ ಪಡೆಯುವ ಮೂಲಕ ರಾಜ್ಯ ಸರ್ಕಾರ ಅಲ್ಪಸಂಖ್ಯಾತರನ್ನು ಕಡೆಗಣಿಸಿದೆ ಎಂದು ಹರಿಹಾಯ್ದರು.

ಗೋ ರಕ್ಷಣೆ ಹೆಸರಿನಲ್ಲಿ ಗೂಂಡಾಗಿರಿ ಮಾಡುವ ಪುನೀತ್ ಕೆರೆಹಳ್ಳಿಗೆ ವಾಹನಗಳನ್ನು ತಡೆದು ಪರಿಶೀಲನೆ ನಡೆಸುವ ಅಧಿಕಾರ ಕೊಟ್ಟಿದ್ದು ಯಾರು. ಯುವಕನೋರ್ವನ ಕೊಲೆಗೆ ಕಾರಣರಾದ ಈ ಪುನೀತ್ ಕೆರೆಹಳ್ಳಿಗೆ ಮಹಿಳಾ ಆಯೋಗದ ಅಧ್ಯಕ್ಷರು ಶುಭಾಶಯ ಹೇಳುತ್ತಾರೆ ಎಂದರೆ ಎಂತಹ ವ್ಯವಸ್ಥೆ ರಾಜ್ಯದಲ್ಲಿದೆ. ಹಾಗಾಗಿ ಕೂಡಲೇ ರಾಜ್ಯ ಸರ್ಕಾರ ಕೋಮುವಾದಿಗಳ ಮೇಲಿನ ಕೇಸ್ ವಾಪಸ್ ಪಡೆದಿರುವುದನ್ನು ಪುನರ್ ಪರಿಶೀಲನೆ ಮಾಡಬೇಕು ಎಂದು ಆಗ್ರಹಿಸಿದರು. ಈ ವೇಳೆ ಎಸ್‌ಡಿಪಿಐ ಜಿಲ್ಲಾ ಉಪಾಧ್ಯಕ್ಷ ಎಸ್.ಸ್ವಾಮಿ, ಕಾರ್ಯಾಧ್ಯಕ್ಷ ಷಫಿವುಲ್ಲಾ, ಪ್ರಧಾನ ಕಾರ್ಯದರ್ಶಿ ಫಿರ್ದೋಸ್, ಕಾರ್ಯದರ್ಶಿಗಳಾದ ಆಯಿಷಾ ಜಬಿ, ಫರ್ದಿನ್ ಮತ್ತಿತರರಿದ್ದರು.

ಸಿರಿಕ್ಯಾರಿ ಐವಿಎಫ್ ಸೆಂಟರ್‌ನ 10ನೇ ವಾರ್ಷಿಕೋತ್ಸವ

ಗರ್ಭಿಣಿಯರು, ಬಾಣಂತಿಯರ ಆರೋಗ್ಯ ವೃದ್ಧಿಗೆ ಯೋಗಾಸನ, ಎದೆ ಹಾಲುಣಿಸುವ ಅರಿವು ಕಾರ್ಯಕ್ರಮ

ಮೈಸೂರು, ಮೇ 25(ಎಂಕೆ)– ಮೈಸೂರಿನ ನಜರ್‌ಬಾದ್‌ನಲ್ಲಿರುವ ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆಯ ಸಿರಿಕ್ಯಾರಿ ಐವಿಎಫ್ ಸೆಂಟರ್‌ನ 10ನೇ ವಾರ್ಷಿಕೋತ್ಸವದ ಅಂಗವಾಗಿ ಸೋಮವಾರ ಗರ್ಭಿಣಿ ಸ್ತ್ರೀಯರು ಮತ್ತು ಬಾಣಂತಿಯರ ಆರೋಗ್ಯ ವೃದ್ಧಿಗಾಗಿ 'ವಿಶೇಷ ಯೋಗಾಸನ ತರಬೇತಿ ಮತ್ತು ಎದೆ ಹಾಲುಣಿಸುವ' ಕುರಿತು ಅರಿವು ಕಾರ್ಯಕ್ರಮ ನಡೆಯಿತು.


ಮೈಸೂರಿನ ನಜರ್‌ಬಾದ್‌ನಲ್ಲಿರುವ ಗೋಪಾಲಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆಯ ಸಿರಿಕ್ಯಾರಿ ಐವಿಎಫ್ ಸೆಂಟರ್‌ನಲ್ಲಿ ಗರ್ಭಿಣಿ ಸ್ತ್ರೀಯರು ಮತ್ತು ಬಾಣಂತಿಯರ ಆರೋಗ್ಯ ವೃದ್ಧಿಗಾಗಿ 'ವಿಶೇಷ ಯೋಗಾಸನ ತರಬೇತಿ ಮತ್ತು ಎದೆ ಹಾಲುಣಿಸುವ' ಕುರಿತು ಅರಿವು ಕಾರ್ಯಕ್ರಮ ನಡೆಯಿತು.

ಯೋಗ ಶಿಕ್ಷಕಿ ಹಾಗೂ ಯೋಗ ಥೆರಪಿಸ್ಟ್ ವಿದ್ಯಾಲಕ್ಷ್ಮಿ, 30ಕ್ಕೂ ಹೆಚ್ಚು ಗರ್ಭಿಣಿ ಸ್ತ್ರೀಯರು ಮತ್ತು ಬಾಣಂತಿಯರಿಗೆ ವಿವಿಧ ಸರಳ ಯೋಗಾಸನಗಳನ್ನು ಪ್ರಾಯೋಗಿಕವಾಗಿ ತಿಳಿಸಿ ಕೊಡುವ ಮೂಲಕ ಗರ್ಭಿಣಿ ಮತ್ತು ಬಾಣಂತಿಯ ಸಂದರ್ಭದಲ್ಲಿ ಆರೋಗ್ಯ ಕಾಪಾಡಿಕೊಳ್ಳುವ ಕುರಿತು ಅತ್ಯುಪಯುಕ್ತ ಸಲಹೆಗಳನ್ನು ನೀಡಿದರು.

ಇದಕ್ಕೂ ಮುನ್ನ ಕಾರ್ಯಕ್ರಮ ಉದ್ಘಾಟಿಸಿದ ಹೃದ್ರೋಗ ತಜ್ಞೆ ಡಾ.ಜೆ. ವೀಣ ಮಾತನಾಡಿ, ಗರ್ಭಿಣಿ ಸಂದರ್ಭದಲ್ಲಿ ಎಲ್ಲರಿಗೂ ಮಗುವಿನ ಆರೋಗ್ಯದ ಬಗ್ಗೆ ಕಾಳಜಿ ಇರುತ್ತೇ ಹೊರತು ತಮ್ಮ ಆರೋಗ್ಯದ ಬಗ್ಗೆ ಗಮನ ನೀಡುವುದು ಕಡಿಮೆ. ಈ ನಿಟ್ಟಿನಲ್ಲಿ ಗರ್ಭಿಣಿ ಸ್ತ್ರೀಯರಿಗಾಗಿ ಯೋಗಾಸನ ಕಾರ್ಯಕ್ರಮ ಆಯೋಜನೆ ಮಾಡಿರುವುದು ಹೊಸ ಆಲೋಚನೆಯ ಜೊತೆಗೆ ಒಳ್ಳೆಯ ಕಾರ್ಯಕ್ರಮವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗರ್ಭಿಣಿ ಸ್ತ್ರೀಯರಲ್ಲಿ ಹೃದಯ ಸಂಬಂಧಿ ಕಾಯಿಲೆಗಳಿದ್ದಲ್ಲಿ ಬಹಳ ಎಚ್ಚರಿಕೆ ವಹಿಸಬೇಕಾಗುತ್ತದೆ. ಮಿತವಾದ ಪೌಷ್ಠಿಕ ಆಹಾರದ ಜೊತೆಗೆ ವ್ಯಾಯಾಮ, ಯೋಗಾಭ್ಯಾಸದಂತಹ ಚಟುವಟಿಕೆಗಳಲ್ಲಿ ಭಾಗವಹಿಸುವುದು ಸೂಕ್ತವಾಗಿರುತ್ತದೆ. ಗರ್ಭಿಣಿ ಸಂದರ್ಭದಲ್ಲಿ ಆಕ್ಟಿವ್ ಆಗಿರುವುದು ಅತೀ ಮುಖ್ಯ ಎಂದರು.

ಮಹಿಳೆಯರಲ್ಲಿನ ಬೊಜ್ಜುತನದಿಂದ ಅಧಿಕ ರಕ್ತದೊತ್ತಡ, ಸಕ್ಕರೆ ಕಾಯಿಲೆ ಹಾಗೂ ಕೊಲೆಸ್ಟ್ರಾಲ್ ಹೆಚ್ಚಾಗಿ ನಾನಾ ಬಗೆಯ ಆರೋಗ್ಯ ಸಮಸ್ಯೆಗಳು ಕಾಡಲಿವೆ. ಆದ್ದರಿಂದ ಗರ್ಭಿಣಿ ಸಂದರ್ಭದಲ್ಲಿ ಪೌಷ್ಟಿಕಾಂಶಯುಕ್ತ ಆಹಾರ ಬಳಕೆ ಮಾಡಬೇಕು. ಗರ್ಭಿಣಿ ನಂತರವೂ ದೇಹದ ತೂಕ ಕಡಿಮೆ ಮಾಡಿಕೊಳ್ಳಬೇಕು. ಮುಖ್ಯವಾಗಿ ಸಣ್ಣ ವಯಸ್ಸಿನಿಂದಲೂ ಪ್ರತಿನಿತ್ಯ ದೈಹಿಕ ವ್ಯಾಯಾಮ ಮಾಡುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು. ಗೋಪಾಲ ಗೌಡ ಶಾಂತವೇರಿ ಸ್ಮಾರಕ ಆಸ್ಪತ್ರೆ ಮುಖ್ಯಸ್ಥರಾದ ರೇಖಾಮೂರ್ತಿ, ಸಿರಿಕ್ಯಾರಿ ಐವಿಎಫ್ ಸೆಂಟರ್ ವ್ಯವಸ್ಥಾಪಕ ನಿರ್ದೇಶಕಿ ಡಾ.ಸಿ.ವಿ.ಶಿಲ್ಪ, ಮಕ್ಕಳ ತಜ್ಞ ಡಾ.ಶಿವಕುಮಾರ್, ಚಂದನ ಮತ್ತಿತರರಿದ್ದರು.

ಶತಾವಧಾನಿ ಆರ್.ಗಣೇಶ್, ಅಂಕೇಗೌಡ, ಸುಶೀಲಮ್ಮರಿಗೆ ಪದ್ಮ ಪ್ರಶಸ್ತಿ ಪ್ರದಾನ

ನಟ ಧರ್ಮೇಂದ್ರರಿಗೆ ಮರಣೋತ್ತರ ಪದ್ಮ ವಿಭೂಷಣ ಪುರಸ್ಕಾರ; ನಟಿ ಹೇಮಾ ಮಾಲಿನಿ ಸ್ವೀಕಾರ






ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಕರ್ನಾಟಕದ ಶತಾವಧಾನಿ ಆರ್.ಗಣೇಶ್ ಅವರಿಗೆ ಪದ್ಮಭೂಷಣ, ಅಂಕೇಗೌಡ ಹಾಗೂ ಸುಶೀಲಮ್ಮ ಅವರಿಗೆ ಪದ್ಮಶ್ರೀ ಮತ್ತು ನಟ ಧರ್ಮೇಂದ್ರ ಅವರ ಪರವಾಗಿ ನಟಿ ಹೇಮಾ ಮಾಲಿನಿಯವರಿಗೆ ಮರಣೋತ್ತರ ಪದ್ಮವಿಭೂಷಣ ಪ್ರಶಸ್ತಿಯನ್ನು ಪ್ರದಾನ ಮಾಡಿದರು.

ನವದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಸೋಮವಾರ ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಇತರ ಗಣ್ಯರು ಈ ವೇಳೆ ಉಪಸ್ಥಿತರಿದ್ದರು.

ಕರ್ನಾಟಕದ ಶತಾವಧಾನಿ ಆರ್. ಗಣೇಶ್ ಅವರಿಗೆ ಕಲಾ ಕ್ಷೇತ್ರಕ್ಕೆ ಸಲ್ಲಿಸಿದ ಶ್ರೇಷ್ಠ ಕೊಡುಗೆಗಳಿಗಾಗಿ ಪದ್ಮಭೂಷಣ ಪ್ರಶಸ್ತಿ ಮತ್ತು ಸಮಾಜ ಸೇವಾ ಕ್ಷೇತ್ರದಲ್ಲಿ ಅಂಕೇಗೌಡ ಎಂ. ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಡಾ. ಪ್ರಭಾಕರ ಬಸವಪ್ರಭು ಕೋರೆ, ಶಶಿ ಶೇಖರ್ ವೆಂಪತಿ, ಸಮಾಜ ಸೇವೆ ಕ್ಷೇತ್ರದಲ್ಲಿ ಎಸ್‌ಜಿ ಸುಶೀಲಮ್ಮ, ವಿಜ್ಞಾನ ಮತ್ತು ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಶುಭಾ ವೆಂಕಟೇಶ್ ಅಯ್ಯಂಗಾರ್, ವೈದ್ಯಕೀಯ ಕ್ಷೇತ್ರದಲ್ಲಿ ಡಾ. ಸುರೇಶ ಹನಗವಾಡಿ, ವ್ಯಾಪಾರ ಮತ್ತು ಕೈಗಾರಿಕೆ ಕ್ಷೇತ್ರದಲ್ಲಿ ಟಿ.ಟಿ ಜಗನ್ನಾಥನ್ (ಮರಣೋತ್ತರ) ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಟ ಧರ್ಮೇಂದ್ರ ಅವರಿಗೆ ಮರಣೋತ್ತರವಾಗಿ ರಾಷ್ಟ್ರಪತಿ ಮುರ್ಮು ಅವರು ಪದ್ಮವಿಭೂಷಣ ಪ್ರದಾನ ಮಾಡಿದರು, ನಟಿ ಹೇಮಾ ಮಾಲಿನಿ ಈ ಪ್ರಶಸ್ತಿಯನ್ನು ಸ್ವೀಕರಿಸಿದರು. ಪಿಟೀಲು ವಾದಕ ಎನ್ ರಾಜಮ್ ಅವರಿಗೆ ಪದ್ಮವಿಭೂಷಣ, ಮಾಜಿ ಮಹಾರಾಷ್ಟ್ರ ಗವರ್ನರ್ ಭಗತ್ ಸಿಂಗ್ ಕೋಶ್ಯಾರಿ ಅವರಿಗೆ ಪದ್ಮಭೂಷಣ ಮತ್ತು ಬ್ಯಾಂಕರ್ ಉದಯ್ ಕೋಟಕ್ ಅವರಿಗೆ ಪದ್ಮಭೂಷಣವನ್ನು ರಾಷ್ಟ್ರಪತಿಗಳು ಪ್ರದಾನ ಮಾಡಿದರು. ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಾಳೆ ದೇಶದ ಪ್ರಥಮ 'ರಾಷ್ಟ್ರೀಯ ಎಐ, ಡಿಜಿಟಲ್ ವಾಟರ್ ಶೃಂಗಸಭೆ 2026'

ಬೆಂಗಳೂರು: ಹವಾಮಾನ ಬದಲಾವಣೆ, ತ್ವರಿತ ನಗರೀಕರಣ ಹಾಗೂ ಅಂತರ್ಜಲ ಕುಸಿತದಂತಹ ಜಾಗತಿಕ ಸವಾಲುಗಳನ್ನು ತಂತ್ರಜ್ಞಾನದ ಮೂಲಕ ಸಮರ್ಥವಾಗಿ ಎದುರಿಸಲು ಬೆಂಗಳೂರು ಜಲಮಂಡಳಿ ಸಜ್ಜಾಗಿದೆ. ಈ ನಿಟ್ಟಿನಲ್ಲಿ ಭವಿಷ್ಯದ ಜಲ ನಿರ್ವಹಣೆ ಕುರಿತು ಚರ್ಚಿಸಲು ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ ನಗರದಲ್ಲಿ ಮೇ 27 ರಂದು ದೇಶದ ಮೊಟ್ಟಮೊದಲ ಹಾಗೂ ಅತಿದೊಡ್ಡ 'ರಾಷ್ಟ್ರೀಯ ಎಐ ಮತ್ತು ಡಿಜಿಟಲ್ ವಾಟರ್ ಶೃಂಗಸಭೆ 2026' ಆಯೋಜಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈ ಬೃಹತ್ ಶೃಂಗಸಭೆಗೆ ಅಧಿಕೃತ ಚಾಲನೆ ನೀಡಲಿದ್ದಾರೆ ಎಂದು ಜಲಮಂಡಳಿ ಅಧ್ಯಕ್ಷರಾದ ಡಾ. ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಈ ಕುರಿತು ಹೇಳಿಕೆಯಲ್ಲಿ ಅವರು ಮಾಹಿತಿ ಹಂಚಿಕೊಂಡಿದ್ದು, ಭವಿಷ್ಯದ ಸ್ಮಾರ್ಟ್ ಜಲ ನಿರ್ವಹಣಾ ವ್ಯವಸ್ಥೆಗಳನ್ನು ರೂಪಿಸುವ ಗುರಿ ಹೊಂದಿರುವ ಈ ಶೃಂಗಸಭೆಯಲ್ಲಿ ಜಾಗತಿಕ ಜಲ ತಜ್ಞರು, ಎಐ ಪರಿಣತರು ಮತ್ತು ತಂತ್ರಜ್ಞಾನ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಪ್ರಮುಖವಾಗಿ ಎಐ ಆಧಾರಿತ ಜಲ ಆಡಳಿತ, ಸ್ಮಾರ್ಟ್ ಯುಟಿಲಿಟಿ, ಡಿಜಿಟಲ್ ಟ್ವಿನ್ಸ್, ಐಒಟಿ ಮೇಲ್ವಿಚಾರಣೆ, ತ್ಯಾಜ್ಯನೀರು ಮರುಬಳಕೆ, ಮುನ್ಸೂಚಕ ವಿಶ್ಲೇಷಣೆ ಹಾಗೂ ಭವಿಷ್ಯದ ಆರ್ಥಿಕ ಮಾದರಿಗಳ ಕುರಿತು ವಿಸ್ತೃತ ಚರ್ಚೆಗಳು ನಡೆಯಲಿವೆ ಎಂದು ತಿಳಿಸಿದ್ದಾರೆ.

ಗಮನ ಸೆಳೆಯಲಿರುವ 'ಪಂಚಸೂತ್ರ' ಮತ್ತು ಡಿಜಿಟಲ್ ಮಾದರಿ: ಶೃಂಗಸಭೆಯಲ್ಲಿ ಬೆಂಗಳೂರು ಜಲಮಂಡಳಿಯ ಸ್ಕಾಡಾ, ಜಿಐಎಸ್ ಮ್ಯಾಪಿಂಗ್, ಐಒಟಿ ಟ್ಯಾಂಕರ್ ಟ್ರ್ಯಾಕಿಂಗ್ ಹಾಗೂ ಸ್ಮಾರ್ಟ್ ಮೀಟರಿಂಗ್ ವ್ಯವಸ್ಥೆಗಳನ್ನು ಪ್ರದರ್ಶಿಸಲಾಗುವುದು. ಜೊತೆಗೆ, ಜಲಮಂಡಳಿಯ ಕೃತಕ ಬುದ್ಧಿಮತ್ತೆ ಆಧಾರಿತ 'ಪ್ರಜ್ಞಾ', ದತ್ತಾಂಶ ಆಧಾರಿತ 'ನೀತಿ', ಸ್ಮಾರ್ಟ್ ಮೂಲಸೌಕರ್ಯದ 'ತಂತ್ರಜ್ಞಾನ', ಸುಸ್ಥಿರ ಹೂಡಿಕೆಯ 'ಅರ್ಥ' ಹಾಗೂ ಹವಾಮಾನ ಭದ್ರತೆಯ 'ಸ್ಥಿರತೆ'ಯನ್ನು ಒಳಗೊಂಡಿರುವ ಮಹತ್ವಾಕಾಂಕ್ಷೆಯ 'ಪಂಚಸೂತ್ರ'ಗಳ ಕಾರ್ಯತಂತ್ರವು ಈ ಶೃಂಗಸಭೆಯ ಪ್ರಮುಖ ಆಕರ್ಷಣೆಯಾಗಲಿದೆ.

ಎಐ ಮತ್ತು ಡಿಜಿಟಲ್ ತಂತ್ರಜ್ಞಾನಗಳು ಜಾಗತಿಕ ಜಲ ನಿರ್ವಹಣೆಯ ಭವಿಷ್ಯವನ್ನು ಮರುರೂಪಿಸುತ್ತಿವೆ. ತಂತ್ರಜ್ಞಾನ, ಸುಸ್ಥಿರತೆ ಮತ್ತು ಜನಸ್ನೇಹಿ ಸೇವೆಯ ಸಂಯೋಜನೆಯೊಂದಿಗೆ ಬೆಂಗಳೂರನ್ನು ದೇಶದ ಅತ್ಯಾಧುನಿಕ ಡಿಜಿಟಲ್ ಜಲ ಪರಿಸರ ವ್ಯವಸ್ಥೆಯನ್ನಾಗಿ ನಿರ್ಮಿಸಲು ನಾವು ಮುಂದಾಗಿದ್ದೇವೆ. ಈ ಶೃಂಗಸಭೆಯು ನವೀನ ಪರಿಹಾರಗಳನ್ನು ಕಂಡುಕೊಳ್ಳುವ ಜಾಗತಿಕ ವೇದಿಕೆಯಾಗಲಿದೆ," ಎಂದು ಜಲಮಂಡಳಿ ಅಧ್ಯಕ್ಷರಾದ ಡಾ. ರಾಮ್ ಪ್ರಸಾತ್ ಮನೋಹರ್ ವಿವರಿಸಿದ್ದಾರೆ.

ಬೆಂಗಳೂರು ಮಹಾನಗರದ ಭವಿಷ್ಯದ ಬೇಡಿಕೆಗಳನ್ನು ಪೂರೈಸಲು ಹೆಚ್ಚು ಪಾರದರ್ಶಕ, ದಕ್ಷ ಮತ್ತು ಸ್ಥಿತಿಸ್ಥಾಪಕ ಸಾರ್ವಜನಿಕ ಸೇವಾ ಮಾದರಿಯನ್ನು ರಚಿಸುವುದು ಈ ಡಿಜಿಟಲ್ ರೂಪಾಂತರದ ಮುಖ್ಯ ಉದ್ದೇಶವಾಗಿದೆ. ಕೃತಕ ಬುದ್ಧಿಮತ್ತೆ ಮತ್ತು ಸ್ಮಾರ್ಟ್ ಜಲ ನಿರ್ವಹಣೆಯನ್ನೇ ಪ್ರಧಾನವಾಗಿಟ್ಟುಕೊಂಡು ನಡೆಯುತ್ತಿರುವ ದೇಶದ ಅತಿ ದೊಡ್ಡ ಶೃಂಗಸಭೆ ಇದಾಗಿದ್ದು, 400ಕ್ಕೂ ಹೆಚ್ಚು ಗಣ್ಯರು ಹಾಗೂ ಪ್ರತಿನಿಧಿಗಳು ಪಾಲ್ಗೊಳ್ಳಲಿದ್ದಾರೆ.

ಬರೀ ಒಂದು ಸಾವಿರ ಸಾಲದ ವಿಚಾರಕ್ಕೆ ಯುವಕನಿಗೆ ಇರಿದು ಪರಾರಿ

ಮೈಸೂರು, ಮೇ25(ಬಿಎಲ್ ಯು)– ಕೇವಲ ಒಂದು ಸಾವಿರ ರೂಪಾಯಿ ಸಾಲದ ವಿಚಾರವಾಗಿ ಯುವಕನೊಬ್ಬನ ಮೇಲೆ ಇಬ್ಬರು ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಮೈಸೂರಿನ ಕಲ್ಯಾಣಗಿರಿಯಲ್ಲಿ ಸಂಭವಿಸಿದೆ.

ನಗರದ ಕಲ್ಯಾಣಗಿರಿಯ ವಾಸಿ ಫಹಾದ್ (18) ಗಾಯಗೊಂಡು ಆಸ್ಪತ್ರೆ ಸೇರಿದ ಯುವಕನಾಗಿದ್ದಾನೆ. ಫಹಾದ್ ಇಬ್ಬರು ಸ್ನೇಹಿತರಿಗೆ ಒಂದು ಸಾವಿರ ಸಾಲ ನೀಡಿದ್ದನು. ನಿನ್ನೆ ರಾತ್ರಿ ಕಲ್ಯಾಣಗಿರಿ ನಗರದ ಪ್ರಾರ್ಥನಾ ಮಂದಿರದ ಬಳಿ ಸಾಲ ಮರುಪಾವತಿ ಬಗ್ಗೆ ಮಾತಿನ ಚಕಮಕಿ ನಡೆದಿದೆ. ಈ ವೇಳೆ ಇಬ್ಬರು ಸ್ನೇಹಿತರು ಫಹಾದ್‌ಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದಾರೆ.

ಸ್ಥಳೀಯರು ಗಾಯಾಳು ಫಹಾದ್ ನನ್ನು ನಗರದ ಕೆ.ಆರ್.ಆಸ್ಪತ್ರೆಗೆ ದಾಖಲಿಸಿದ್ದು, ಆತ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಈ ಸಂಬಂಧ ಉದಯಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಇಬ್ಬರು ಆರೋಪಿಗಳ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

TET–2026 ಪರೀಕ್ಷೆ: ಪರೀಕ್ಷಾ ಕೇಂದ್ರದ ಸುತ್ತಲೂ ನಿಷೇಧಾಜ್ಞೆ

ಮೈಸೂರು, ಮೇ 25(ಪಿಎಂ)– ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ವೃಂದದಿಂದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ಹುದ್ದೆಗೆ ಶಿಕ್ಷಕರ ಅರ್ಹತಾ ಪರೀಕ್ಷೆ–2026 TET ಪರೀಕ್ಷೆಗಳು ಮೇ 26 ರಿಂದ ಮೇ 30 ರವರೆಗೆ ಮೈಸೂರು ನಗರದ 4 ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು, ಪರೀಕ್ಷೆಗಳನ್ನು ಸುಸೂತ್ರವಾಗಿ ನಡೆಸುವ ಉದ್ದೇಶದಿಂದ ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ತಡೆಯಲು ಪರೀಕ್ಷಾ ಕೇಂದ್ರದ 200 ಮೀಟರ್ ವ್ಯಾಪ್ತಿ ಪ್ರದೇಶದ ಸುತ್ತಲೂ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023 ಸೆಕ್ಷನ್ 163 ರೀತ್ಯ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಪರೀಕ್ಷಾ ಕೇಂದ್ರಗಳು: ಮಹಾರಾಜ ಸರ್ಕಾರಿ ಪ್ರೌಢಶಾಲೆ, ಜೆಎಲ್‌ಬಿ ರಸ್ತೆ ಮೈಸೂರು, ಮಹಾರಾಣಿ ಸರ್ಕಾರಿ ಪ್ರೌಢಶಾಲೆ ಎನ್.ಎಸ್. ರಸ್ತೆ, ಮೈಸೂರು, ಸರ್ಕಾರಿ ಪ್ರೌಢಶಾಲೆ ಪೀಪಲ್ಸ್ ಪಾರ್ಕ್, ನಜರ್‌ಬಾದ್ ಮೈಸೂರು, ಸರ್ಕಾರಿ ವಿಭಜಿತ ಮಹಾರಾಜ ಪ್ರೌಢಶಾಲೆ ನಜರ್‌ಬಾದ್ ಮೈಸೂರು ಪರೀಕ್ಷಾ ಕೇಂದ್ರಗಳಾಗಿವೆ.

ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿ ಹೊರತುಪಡಿಸಿ ಇತರೆ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿರುವ ಜೆರಾಕ್ಸ್, ಬ್ರೌಸಿಂಗ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸಲಾಗಿದೆ ಎಂದು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ.1, ಶಾಲಾ ಪ್ರಾರಂಭೋತ್ಸವ: ಮೇ 29ಕ್ಕೆ ಸಿದ್ಧತೆ ಮಾಡಿಕೊಳ್ಳಿ

● ಮುಖ್ಯಶಿಕ್ಷಕರಿಗೆ ಸೂಚನೆ ● ಶಿಕ್ಷಕರಿಗೆ ಕೆಎಎಂಎಸ್ ಹಾಜರಾತಿ ಕಡ್ಡಾಯ

ಮೈಸೂರು, ಮೇ 25(ಎಸ್‌ಪಿಎನ್)– ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ 2026–27ನೇ ಸಾಲಿನ ಶಾಲಾ ಪ್ರಾರಂಭೋತ್ಸವ ಮತ್ತು ದಾಖಲಾತಿ ಆಂದೋಲನ, ಸೇತುಬಂಧ ಹಾಗೂ ಮಿಂಚಿನ ಸಂಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತ ವಿಕಾಸ್ ಕಿಶೋರ್ ಸುರಾಳ್ಕರ್ ಆದೇಶಿಸಿದ್ದಾರೆ.

ಈ ಸಾಲಿನ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಅನುವಾಗುವಂತೆ, ಹಿಂದಿನ ಶೈಕ್ಷಣಿಕ ಸಾಲಿನ ಸಿದ್ಧತೆಯಂತೆ ಈ ತಿಂಗಳ ಮೇ.29ರಂದು ಮುಖ್ಯಶಿಕ್ಷಕರು ಮತ್ತು ಶಿಕ್ಷಕರು ಶಾಲೆಗೆ ಹಾಜರಾಗಿ ಅಗತ್ಯ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು.

ಜೂ.1, ಪ್ರಾರಂಭೋತ್ಸವ: ವಿದ್ಯಾರ್ಥಿಗಳ ಶಾಲಾ ಪ್ರವೇಶಾತಿ/ ದಾಖಲಾತಿಯನ್ನು ಜೂ.1ರಿಂದ ಶಾಲಾ ಪ್ರಾರಂಭೋತ್ಸವದೊಂದಿಗೆ ಆರಂಭಿಸಿ, ಜೂ.30 ರಂದು ಮುಕ್ತಾಯಗೊಳಿಸಲು ಸೂಚಿಸಿದ್ದಾರೆ.

ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶಾಲಾ ಪ್ರಾರಂಭೋತ್ಸವ ಮತ್ತು ದಾಖಲಾತಿ ಆಂದೋಲನ, ಸೇತುಬಂಧ ಹಾಗೂ ಮಿಂಚಿನ ಸಂಚಾರದ ಮುಖ್ಯಸ್ಥರು, ಶಾಲಾ ಮುಖ್ಯ ಶಿಕ್ಷಕರು ಮತ್ತು ಸಿಬ್ಬಂದಿ ಹಾಜರಿದ್ದು, ಅಗತ್ಯ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಬೇಕು ಎಂದು ರಾಜ್ಯದ ಎಲ್ಲಾ ಶಿಕ್ಷಣಾಧಿಕಾರಿಗಳಿಗೆ ಹಾಗೂ ಮುಖ್ಯ ಶಿಕ್ಷಕರಿಗೆ, ಆಯುಕ್ತರು ಸೂಚಿಸಿದ್ದಾರೆ.



ಪೂರ್ವ ಸಿದ್ಧತೆ: ಮೇ 28ರೊಳಗೆ ಶಾಲಾ ಸ್ವಚ್ಛತಾ ಕಾರ್ಯ ಕೈಗೊಂಡು ಪೂರ್ಣಗೊಳಿಸಬೇಕು. ಮೇ 29ರಂದು ಶಾಲಾ ಕಟ್ಟಡ, ಶೌಚಾಲಯ, ಅಡುಗೆ ಕೊಠಡಿ ಸೇರಿದಂತೆ ಶಾಲಾ ಆವರಣ ಸಂಪೂರ್ಣ ಸ್ವಚ್ಛಗೊಳಿಸಬೇಕು. ಶಾಲೆಯ ಅಕ್ಕ–ಪಕ್ಕದ ಜಾಗದಲ್ಲಿ ಅಪಾಯಕಾರಿ ಜಾಗಗಳಿದ್ದರೆ ಅಂತಹ ಜಾಗಗಳನ್ನು ಗುರುತಿಸಿ ಸ್ಥಳೀಯ ಸಂಸ್ಥೆಗಳ ಸಹಕಾರದೊಂದಿಗೆ ತೆರವುಗೊಳಿಸಿ, ಪೂರ್ಣ ಸಿದ್ಧತೆ ಮಾಡಿಕೊಳ್ಳಬೇಕು ಎಂದು ಸೂಚಿಸಿದ್ದಾರೆ.

ಶಾಲೆ ವೇಳಾಪಟ್ಟಿ, ವಾರ್ಷಿಕ ಯೋಜನೆ ಸಿದ್ಧತೆ: ಶಾಲಾ ವೇಳಾಪಟ್ಟಿ, ವಿಷಯವಾರು ವಾರ್ಷಿಕ ಕ್ರಿಯಾ ಯೋಜನೆ, ಶಿಕ್ಷಕರ ವೇಳಾಪಟ್ಟಿ(ತರಗತವಾರು ಮತ್ತು ಕ್ಯಾಲೆಂಡರ್), ಶಾಲಾ ಪ್ರಾರಂಭೋತ್ಸವಕ್ಕೆ ಮುಖ್ಯಶಿಕ್ಷಕರು ಹಾಗೂ ಸಹಶಿಕ್ಷಕರು ಕಡ್ಡಾಯವಾಗಿ ಹಾಜರಿರತಕ್ಕದ್ದು. ಈ ಶೈಕ್ಷಣಿಕ ಸಾಲಿನಲ್ಲಿ ಮುಖ್ಯಶಿಕ್ಷಕರು ಸಹಶಿಕ್ಷಕರಿಗೆ ವಿವಿಧ ಪ್ರಭಾರಗಳ ಹಂಚಿಕೆ, ನಿರ್ವಹಣೆ, ತರಗತಿಯ ಶಿಕ್ಷಕರನ್ನು ನೇಮಿಸಬೇಕು. ಪ್ರಸ್ತುತ ವರ್ಷದಲ್ಲಿ ಹಿಂದಿನ ತರಗತಿಗಳಿಂದ ಉತ್ತೀರ್ಣರಾಗಿರುವ ಮಕ್ಕಳ ಹಾಜರಾತಿ ಪುಸ್ತಕಗಳನ್ನು ಸಿದ್ಧಪಡಿಸಿಕೊಳ್ಳಬೇಕು. ವಾರ್ಷಿಕ ಕ್ರಿಯಾ ಯೋಜನೆ, ಪಾಠ ಯೋಜನೆ,

ಕೆಎಎಂಎಸ್ ಹಾಜರಾತಿ ಕಡ್ಡಾಯ: ಮೇ 29 ರಿಂದಲೇ ಶಿಕ್ಷಕರ ಹಾಜರಾತಿಯನ್ನು ಕರ್ನಾಟಕ ಅಡ್ವಾನ್ಸ್ ಅಟೆಂಡೆನ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್(ಕೆಎಎಂಎಸ್) ಮೊಬೈಲ್ ಆಪ್ಲಿಕೇಷನ್ ಅನ್ನು ಬಳಸಿ ಹಾಜರಾತಿ ಕಡ್ಡಾಯ ನಿರ್ವಹಣೆ ಮಾಡಬೇಕು. ನಿಯಮದಂತೆ ಹಾಜರಾತಿ ನಿರ್ವಹಣೆ ಆಗದಿದ್ದರೆ ಅಗತ್ಯ ಶಿಸ್ತು ಕ್ರಮ ಕಡ್ಡಾಯ ಎಂದು ಸೂಚಿಸಿದ್ದಾರೆ.

ಜನಪ್ರತಿನಿಧಿಗಳಿಗೆ ಆಹ್ವಾನ: ಶಾಲಾ ಪ್ರಾರಂಭೋತ್ಸವಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಸೇರಿದಂತೆ ಇತರೆ ಸ್ಥಳೀಯ ಜನಪ್ರತಿನಿಧಿಗಳನ್ನು ಆಹ್ವಾನಿಸಿ, ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಈ ಕುರಿತು ಜಿಪಂ ಸಿಇಒಗಳೊಂದಿಗೆ ಹಿರಿಯ ಶಿಕ್ಷಣಾಧಿಕಾರಿಗಳು ಸಮಾಲೋಚಿಸಿ ಅಗತ್ಯ ಕ್ರಮ ಕೈಗೊಂಡು ಕಾರ್ಯಕ್ರಮದ ಯಶಸ್ಸಿಗೆ ಎಲ್ಲಾ ಅಧಿಕಾರಿಗಳೂ ಕೈಜೋಡಿಸಲು ಸೂಚಿಸಲಾಗಿದೆ.

ವಿದ್ಯಾರ್ಥಿಗಳನ್ನು ಮುಂದಿನ ತರಗತಿಗಳಿಗೆ ದಾಖಲಿಸುವ ಕುರಿತು ಅಗತ್ಯ ಕ್ರಮಕೈಗೊಳ್ಳಬೇಕು. ಸರ್ಕಾರಿ ಶಾಲೆಗಳ ಮೂಲಸೌಕರ್ಯ ಲಭ್ಯವಿರುವ ಕುರಿತು ಪರಿಶೀಲನೆ, ಸೇತುಬಂಧ ಶಿಕ್ಷಣ, ಮಿಂಚಿನ ಸಂಚಾರದ ಉದ್ದೇಶ, ಪೂರ್ವ ತಯಾರಿ ಮಾಡಿಕೊಳ್ಳಬೇಕು. ಶಾಲಾ ಸಂದರ್ಶನ ಸಪ್ತಾಹ, ಶಾಲೆಗಳಿಗೆ ಶಿಕ್ಷಣಾಧಿಕಾರಿಗಳ ಭೇಟಿ ಕುರಿತು ದಾಖಲಿಸುವಂತೆ ಸೂಚಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಆದಾಗಿ ಷೆಡ್ಯೂಲ್ ಸ್ವತ್ತನ್ನು ನಮ್ಮ ಕಕ್ಷಿದಾರರು ಮೈಸೂರು–570026, ಬೋಗಾದಿ, ಗಣಪತಿ ದೇವಸ್ಥಾನದ ಎದುರು, ಹಿನಕಲ್ ರಸ್ತೆ, ಮನೆ ನಂ.93 ರಲ್ಲಿ ವಾಸವಾಗಿರುವ ಮೋಹನ್ ಲಾಲ್ ರವರ ಧರ್ಮಪತ್ನಿ ಶ್ರೀಮತಿ ಕಾಂಚನಾದೇವಿ ಮತ್ತು ಮೋಹನ್ ಲಾಲ್ ರವರ ಮಗ ದೇವೇಂದ್ರ ಕುಮಾರ್‌ರವರಿಂದ ಕ್ರಯಕ್ಕೆ ಕೊಂಡುಕೊಳ್ಳಲು ಇಚ್ಛಿಸಿ, ಕ್ರಯದ ಕರಾರು ಪತ್ರವನ್ನು ಮಾಡಲು ಮಾಡಿಕೊಳ್ಳಲು ತೀರ್ಮಾನಿಸಿರುತ್ತಾರೆ.

ಆದುದ್ದರಿಂದ ಷೆಡ್ಯೂಲ್ ಸ್ವತ್ತಿನ ಬಗ್ಗೆ ಯಾವುದೇ ವ್ಯಕ್ತಿ/ವ್ಯಕ್ತಿಗಳಿಗೆ, ಸಂಘ, ಸಂಸ್ಥೆ, ಬ್ಯಾಂಕ್ ಇನ್ನಿತರರಿಂದ ಯಾವುದೇ ರೀತಿಯ ಹಕ್ಕು, ಆಸಕ್ತಿ, ಭಾದ್ಯತೆ ಹಿತಾಸಕ್ತಿ, ಭಾಗಾಂಶ ಹಾಗೂ ಆಕ್ಷೇಪಣೆಗಳು ಇದ್ದಲ್ಲಿ ಅದನ್ನು ಸಂಬಂಧಪಟ್ಟ ದಾಖಲೆಗಳ ಸಹಿತ ಈ ಕೆಳಗೆ ತಿಳಿಸಲಾದ ಕಛೇರಿ ವಿಳಾಸಕ್ಕೆ ಈ ಪ್ರಕಟಣೆಯ ದಿನದಿಂದ ಹದಿನೈದು (15) ದಿನಗಳ ಒಳಗಾಗಿ ಲಿಖಿತವಾಗಿ ತಿಳಿಸತಕ್ಕದ್ದು, ಇದಕ್ಕೆ ತಪ್ಪಿದಲ್ಲಿ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲವೆಂದು ಪರಿಗಣಿಸಿ ಕ್ರಯವನ್ನು ಪೂರ್ಣಗೊಳಿಸಲಾಗುವುದು. ನಿರ್ದಿಷ್ಟ ಅವಧಿ ಮುಗಿದ ನಂತರ ಬರುವ ಯಾವುದೇ ಆಕ್ಷೇಪಣೆ ಅಥವಾ ಹಕ್ಕುಗಳಿಗೆ ಅವಕಾಶವಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಖಿಲ್ಲೆ ಮೊಹಲ್ಲಾ, ವಿದ್ಯಾರಣ್ಯಪುರಂ, ವಾರ್ಡ್ ನಂ.60, ಮಾನಂದವಾಡಿ ರಸ್ತೆ, ದಾಖಲೆ ಸಂಖ್ಯೆ 2310972 ನಿರ್ಧರಣಾ ಸಂಖ್ಯೆ 6341310928 ಸ್ವತ್ತಿನ ಸಂಖ್ಯೆ/ನಿರ್ಧರಣಾ ಸಂಖ್ಯೆ: 1131/ಎಫ್–6 ಎಫ್–6/2 ಎಫ್–6/3 ರ ಪೂರ್ವ ಪಶ್ಚಿಮ :– (38.5+38)2 ಅಡಿಗಳು ಮತ್ತು ಉತ್ತರ ದಕ್ಷಿಣ :–(92.2 + 86.2) / 2 ಅಡಿಗಳುಳ್ಳ ಒಟ್ಟು 316.9757457.4837 ಚದರ ಮೀಟರ್‌ವುಳ್ಳ ನೆಲಮಾಳಿಗೆ, ನೆಲ ಮಹಡಿ, 1ನೇ ಮಹಡಿ, 2ನೇ ಮಹಡಿ ಮತ್ತು 3ನೇ ಮಹಡಿವುಳ್ಳ ಆರ್.ಸಿ.ಸಿ ಕಟ್ಟಡದ ಪೂರ್ತಾ ಸ್ವತ್ತು ಮತ್ತು ಇದಕ್ಕೆ ಚೆಕ್ಕುಬಂದಿ :– ಪೂರ್ವಕ್ಕೆ: ಸ್ವತ್ತಿನ ಸಂಖ್ಯೆ.1131/ಬಿ. ಪಶ್ಚಿಮಕ್ಕೆ : ಮಾನಂದವಾಡಿ ರಸ್ತೆ. ಉತ್ತರಕ್ಕೆ : ಸಾರ್ವಜನಿಕ ಹಾಸ್ಟೆಲ್ ರಸ್ತೆ. ದಕ್ಷಿಣಕ್ಕೆ : ಎಂ.ವಿಜಯ್ ಕುಮಾರ್ ರವರ ಸ್ವತ್ತು.

Sd/- Siddarajugowda BBM., LLB.,
Advocate, KAR 2787/03
No. 2773/1, CH 21/2, Roopa Compleax,
2nd & 3rd Floor, 2nd Cross, Railway
Gate Road, K.G. koppalu, Mysuru-570009
Date: 25-05-2026

ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಕೆ.ಆರ್.ನಗರ

ಅಸಲು ದಾವಾ. ಸಂಖ್ಯೆ: 21/2025

ವಾದಿಗಳು: ಶ್ರೀಮತಿ. ಸಿ.ಎಸ್. ಭಾಗ್ಯ, ಕೋಂ ವೈ. ಆರ್. ಸೋಮಶೇಖರ್ ವಯಸ್ಸು ಸುಮಾರು 40 ವರ್ಷ, ವಾಸ: ನಂ. 126, 7 ನೇಕ್ರಾಸ್. 13 ನೇ ವಾರ್ಡ್, ಬಸವೇಶ್ವರ ಬ್ಲಾಕ್. ಕೆ.ಆರ್. ನಗರ ತಾಲ್ಲೂಕು, ಮೈಸೂರು ಜಿಲ್ಲೆ.

ವಿರುದ್ಧ

ಪ್ರತಿವಾದಿಗಳು: ಸಿ.ಎನ್. ಶಿಲ್ಪ, (3ನೇ ಪ್ರತಿವಾದಿ) ಕೋಂ ಸುರೇಶ್ ಬಿನ್ ಸಿ.ಟಿ. ನಂಜುಂಡಶೆಟ್ಟಿ ವಯಸ್ಸು ಸುಮಾರು 42 ವರ್ಷ, ವಾಸ: ನಂ.127, 6ನೇ ಕ್ರಾಸ್, 3ನೇ ಬ್ಲಾಕ್, ನಂದಿನಿ ಲೇಔಟ್, ಬೆಂಗಳೂರು

ಪತ್ರಿಕಾ ಪ್ರಕಟಣೆ

ಮೇಲ್ಕಂಡ ವಾದಿಯು ಪ್ರತಿವಾದಿಗಳ ವಿರುದ್ಧ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ಘನ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದು, ಮೇಲ್ಕಂಡ ದಾವೆಯ 3ನೇ ಪ್ರತಿವಾದಿ ಘನ ನ್ಯಾಯಾಲಯದಿಂದ ಕಳುಹಿಸಿದ ಸಮನ್ಸ್ /ನೋಟೀಸ್‌ಗಳು ಪ್ರತಿವಾದಿಗೆ ತಲುಪದೇ ಇದ್ದು, ನ್ಯಾಯಾಲಯದ ಆದೇಶದಂತೆ ವಾದಿಗೆ ತಿಳಿದಿರುವ ಪ್ರತಿವಾದಿ ಮನೆಯ ಕೊನೆಯ ವಿಳಾಸಕ್ಕೆ ಹಾಜರಾತಿಗಾಗಿ ಈ ದಾವೆಯ ಮುಂದಿನ ದಿನಾಂಕ: 30–06–2026 ರಂದು ಕಾಯ್ದಿರಿಸಲಾಗಿದ್ದು, ಸದರಿ ದಿನದಂದು ಖುದ್ದು ನೀವಾಗಲೀ ಅಥವಾ ನಿಮ್ಮ ಪರವಾಗಿ ವಕೀಲರ ಮುಖಾಂತರ ಮೇಲ್ಕಂಡ ಘನ ನ್ಯಾಯಾಲಯದ ಮುಂದೆ ಬೆಳಗ್ಗೆ 11.00 ಗಂಟೆಗೆ ಹಾಜರಾಗ ತಕ್ಕದ್ದು. ಹಾಗೂ ನಿಮ್ಮ ತಕರಾರುಗಳು ಏನಾದರೂ ಇದ್ದರೆ ಸಲ್ಲಿಸತಕ್ಕದ್ದು. ಒಂದು ವೇಳೆ ನೀವು ಗೈರು ಹಾಜರಾದ ಸಂದರ್ಭದಲ್ಲಿ ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ಸದರಿ ದಾವೆಯ ಷೆಡ್ಯೂಲ್ ಸ್ವತ್ತಿನ ಸಂಬಂಧ ಆದೇಶವಾಗುತ್ತದೆಂದು ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ

1. ಮೈಸೂರು ಜಿಲ್ಲೆ, ಕೆ.ಆರ್.ನಗರ ತಾಲ್ಲೂಕು, ಕಸಬಾ ಹೋಬಳಿ, ಕಂಟೇನಹಳ್ಳಿ ಗ್ರಾಮದ ಸರ್ವೆ ನಂ. 125/1ಎ, ಹೊಸ ಸರ್ವೆ ನಂ.125/ಎ2 ರ ಒಟ್ಟು ವಿಸ್ತೀರ್ಣ 0.08.00 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವ: ಸಣ್ಣಯ್ಯರವರ ಜಮೀನು. ಪಶ್ಚಿಮಕ್ಕೆ: ಕೆ.ಆರ್. ನಗರ ಮತ್ತು ಮೈಸೂರು ರಸ್ತೆ. ಉತ್ತರಕ್ಕೆ: ವಿಷಕಂಠಶೆಟ್ಟಿಯವರ ಜಮೀನು. ದಕ್ಷಿಣಕ್ಕೆ: ಕಾಳಮ್ಮನವರ ಜಮೀನು
2. ಮೈಸೂರು ಜಿಲ್ಲೆ, ಕೆ. ಆರ್. ನಗರ ತಾಲ್ಲೂಕು, ಕಸಬಾ ಹೋಬಳಿ, ಕಂಠೇನಹಳ್ಳಿ ಗ್ರಾಮದ ಮನೆ ನಂ. 129/1 ರಲ್ಲಿರುವ ಪೂರ್ವ ಪಶ್ಚಿಮ 30 ಅಡಿಗಳು ಉತ್ತರ ದಕ್ಷಿಣ 40 ಅಡಿಗಳುಳ್ಳ ನಿವೇಶನ ಹಾಗೂ ಇದರಲ್ಲಿರುವ ಮನೆಗೆ ಚಕ್ಕುಬಂದಿ: ಪೂರ್ವ : ಖಾಲಿ ನಿವೇಶನ. ಪಶ್ಚಿಮಕ್ಕೆ : ಖಾಲಿ ನಿವೇಶನ. ಉತ್ತರಕ್ಕೆ : ಖಾಲಿ ನಿವೇಶನ. ದಕ್ಷಿಣಕ್ಕೆ :ರಸ್ತೆ.

ಮಾನ್ಯ ನ್ಯಾಯಾಲಯದ ಅಪ್ಪಣೆಯ ಮೇರೆಗೆ
ಸಹಿ/– ಶಿರಸ್ತೇದಾರರು
ಗೌರಾವಾನ್ವಿತ ಹಿರಿಯ ಸಿವಿಲ್
ನ್ಯಾಯಾಧೀಶರ ನ್ಯಾಯಾಲಯ

ಸಹಿ/– ಮೋಹನ್‌ಗೌಡ ಎಂ.
ವಕೀಲರು
ನಂ. 57/1, 2ನೇ ಮೇನ್, 3ನೇ ಕ್ರಾಸ್,
ಜಯನಗರ, ಮೈಸೂರು. ಮೊ: 9845112128

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತಗಂಗೋತ್ರಿ, ಮೈಸೂರು – 570 006
ಅಧ್ಯಯನ ಸಾಮಗ್ರಿ ವಿಭಾಗ
ಸಂಖ್ಯೆ: ಕರಾಮುವಿ/ಅಸಾವಿ/08–75/2026–27 ದಿನಾಂಕ: 21–05–2026

ಬಾಕ್ಸ್ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿವಿಧ ಶಿಕ್ಷಣ ಕ್ರಮಗಳಿಗೆ ಪ್ರವೇಶಾತಿ ಹೊಂದಿದ ವಿದ್ಯಾರ್ಥಿಗಳಿಗೆ ಪ್ಲಾಸ್ಟಿಕ್ ಕವಚವನ್ನೊಳಗೊಂಡ ಗುರುತಿನ ಕಾರ್ಡ್‌ಗಳನ್ನು ಮುದ್ರಿಸಿ ಸರಬರಾಜು ಮಾಡುವ ಬಗ್ಗೆ, ಆಸಕ್ತ ಮುದ್ರಕರಿಂದ ಬಾಕ್ಸ್ ಟೆಂಡರ್ ಮುಖಾಂತರ (ಅಂದಾಜು ರೂ.5.00 ಲಕ್ಷ) ಟೆಂಡರ್ ಅನ್ನು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳನ್ನು ವಿ.ವಿ. ನಿಲಯದ ವೆಬ್‌ಸೈಟ್ www.ksoumysuru.ac.in ಅನ್ನು ನೋಡುವುದು.

ಸಹಿ/– ಕುಲಸಚಿವ

DIPR/DDMYS/213/KSMCA/165/2026-27